ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 3 ಬುಧವಾರ 2026

47

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871


ಸಂಪುಟ: 47 | ಸಂಚಿಕೆ: 48 | ಪುಟಗಳು: 12 + IV
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮೈಸೂರು ಮಿತ್ರ



ಒಕ್ಕಲಿಗರ ಸಂಘ (ರಿ) ಮೈಸೂರು ಜಿಲ್ಲೆ
(ಚಾಮರಾಜನಗರ ಜಿಲ್ಲೆ ಒಳಗೊಂಡಂತೆ) ವಿದ್ಯಾರಣ್ಯಪುರಂ, ಮೈಸೂರು-08
ಕರ್ನಾಟಕ ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಆಯ್ಕೆಯಾದ,
ಸಮುದಾಯದ ನಾಯಕರೂ ಆದ
ಶ್ರೀ ಡಿ.ಕೆ. ಶಿವಕುಮಾರ್ ಅವರಿಗೆ
ಅಭಿನಂದನೆಗಳು
ಶ್ರೀ ಜಯರಾಮ್ ಆರ್ ಗೌರವಾಧ್ಯಕ್ಷರು
ಶ್ರೀ ಮರಿಸ್ವಾಮಿ ಸಿ ಅಧ್ಯಕ್ಷರು
ಶ್ರೀ ರವಿಕುಮಾರ್ ಆರ್ (ರಾಜಕೀಯ) ಉಪಾಧ್ಯಕ್ಷರು
ಶ್ರೀ ಮಹೇಶ್ ಬಿ.ಸಿ. ಉಪಾಧ್ಯಕ್ಷರು
ಶ್ರೀ ಚೇತನ್ ಎಂ.ಇ. ಪ್ರಧಾನ ಕಾರ್ಯದರ್ಶಿ
ಶ್ರೀ ಲೋಕೇಶ್ ಆರ್. ಖಜಾಂಚಿ
ನಿರ್ದೇಶಕರು
ಜೆ. ಮಂಜು
ಎಂ. ಶಿವಕುಮಾರ್
ಎನ್. ಪ್ರಕಾಶ್
ಎಸ್. ಗುರುರಾಜ್
ಪ್ರಸನ್ನ ಎನ್. ಲಕ್ಷ್ಮಣ್
ಜಿ. ಕುಮಾರಗೌಡ
ಶ್ರೀಮತಿ ಸುಶೀಲಾ ನಂಜಪ್ಪ
ಎ. ರವಿ.
ಬಿ.ಇ. ಗಿರೀಶ್‌ಗೌಡ
ಬಿ.ಪಿ. ಬೋರೇಗೌಡ
ಎಸ್. ಉಮೇಶ
ಕೆ.ಪಿ. ನಾಗಣ್ಣ
ಗೋಪಾಲ್
ಪಿ. ಪ್ರಶಾಂತ್‌ಗೌಡ
ಏರ್ಲೆ ಶ್ರೀನಿವಾಸಗೌಡ ಎಂ ಕೆ
ಹೆಚ್.ಎನ್. ಸುಧೀರ್
ಎಚ್.ಕೆ. ನಾಗಣ್ಣ
ಪಿ.ಹೆಚ್. ರಾಜು
ಎ. ಕುಮಾರ್
ಟಿ.ಎಸ್. ಸಂತೋಷ್‌ಕುಮಾರ್
ಕಾರ್ಯಕ್ರಮ
ಮೈಸೂರು ಹಾಗೂ ಚಾಮರಾಜನಗರ ಜಿಲ್ಲಾ ಒಕ್ಕಲಿಗ ಸಂಘದ ವತಿಯಿಂದ ದಿನಾಂಕ 03/06/2026 ರ ಬುಧವಾರ ಸಂಜೆ 4.30ಕ್ಕೆ ಪ್ರಮಾಣ ವಚನ ಸ್ವೀಕರಿಸುವ ಶುಭ ಸಂದರ್ಭದಲ್ಲಿ ಮೈಸೂರಿನ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ವಿಶೇಷವಾದ ಪೂಜೆ ಸಲ್ಲಿಕೆ ಹಾಗೂ ಸಾರ್ವಜನಿಕರಿಗೆ ಸಿಹಿ ವಿತರಣೆ. ದಯಮಾಡಿ ಎಲ್ಲಾ ಮುಖಂಡರು ಹಾಗೂ ಡಿ.ಕೆ. ಶಿವಕುಮಾರ್ ಅಭಿಮಾನಿಗಳು ಆಗಮಿಸಬೇಕಾಗಿ ವಿನಂತಿ.
@bhi design: 97407 97701
ಶುಭಕೋರುವವರು: ಪದಾಧಿಕಾರಿಗಳು ಹಾಗೂ ನಿರ್ದೇಶಕರು, ಒಕ್ಕಲಿಗರ ಸಂಘ (ರಿ) ಮೈಸೂರು ಜಿಲ್ಲೆ (ಚಾಮರಾಜನಗರ ಜಿಲ್ಲೆ ಒಳಗೊಂಡಂತೆ)



ನಿಸ್ವಾರ್ಥ ದಿಂದ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿ ಮಾಡಿದ ಸೇವೆ ಮುಖ್ಯಮಂತ್ರಿಸ್ಥಾನವನ್ನು ತ್ಯಾಗಮಾಡಿ
ಕಾಂಗ್ರೆಸ್ ಪಕ್ಷದ ಗೌರವವನ್ನು ಹೆಚ್ಚಿಸಿದ ಪ್ರಬುದ್ಧ ರಾಜಕರಣಿ ನುಡಿದಂತೆ ನಡೆಯುವ ಧೀಮಂತ ನಾಯಕ
ಶ್ರೀ ಸಿದ್ಧರಾಮಯ್ಯನವರು ಅಧಿಕಾರ ಹಸ್ತಾಂತರಿಸಿದ ರೀತಿ ನಾಡಿನ ಗೌರವವನ್ನು ಹೆಚ್ಚಿಸಿದೆ.
ಕರ್ನಾಟಕ ರಾಜ್ಯದ ನೂತನ ಮುಖ್ಯಮಂತ್ರಿಗಳಾಗಿ ದಿನಾಂಕ : 03-06-2026 ರಂದು ಪ್ರಮಾಣ ವಚನ ಸ್ವೀಕರಿಸುತ್ತಿರುವ
ಸಂಘಟನಾ ಚತುರ, ದಕ್ಷ ಆಡಳಿತಗಾರ, ಅಭಿವೃದ್ಧಿ ಕನಸನ್ನು ಹೊತ್ತ ಛಲ ಬಿಡದ ತ್ರಿವಿಕ್ರಮ ಜನಪ್ರಿಯ ಕೆ.ಪಿ.ಸಿ.ಸಿ. ಅಧ್ಯಕ್ಷರಾದ
ಶ್ರೀ ಡಿ.ಕೆ. ಶಿವಕುಮಾರ್ ರವರಿಗೆ ಅಭಿನಂದನೆಗಳು
9343106416
ಪ್ರಕಟಣೆ
ಕೆಪಿಸಿಸಿ ಸದಸ್ಯರಾದ ಶ್ರೀ ಹೆಚ್.ವಿ. ರಾಜೀವ್ ರವರ ಸ್ನೇಹ ಬಳಗ
ಕೃಷ್ಣರಾಜ ವಿಧಾನಸಭಾ ಕ್ಷೇತ್ರ, ಮೈಸೂರು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

47

ಜೂನ್ 3 ಬುಧವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 48 | ಪುಟಗಳು: 12 + IV
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ನಕ್ಕರೆ ಅದೇ ಸ್ವರ್ಗ

ಹೆಂಡತಿ : ನಿಮ್ಮನ್ನು ನೋಡೋಕೆ ಡಾಕ್ಟರ್ ಬಂದಿದ್ದಾರೆ.
ಗಂಡ : ನನಗೇ ಮೈ ಹುಷಾರಿಲ್ಲ.
ಅವರನ್ನು ನಾಳೆ ಬರೋಕೆ ಹೇಳು...

ಮೈಸೂರು ಮಿತ್ರ
ಬುಧವಾರ, ಜೂನ್ 3, 2026
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಮಾತಾಡಿದಂತೆ ಜೀವಿಸಲು ಆಗೋದಿಲ್ಲ. ಬರೆದಿಟ್ಟಂತೆ ಬದುಕಲು ಆಗೋದಿಲ್ಲ. ನಮ್ಮಿಂದ ಬೇರೆಯವರಿಗೆ ತೊಂದರೆಯಾಗದಂತೆ ಬದುಕಿದರೆ ಸಾಕು. ಅದೇ ಸಂತೃಪ್ತ ಬದುಕು.

ವೇದ ಸುಳ್ಳಾದರೂ } ಸಾಲ್ಗಾರ ಸುಮ್ಮನಿದ್ರು
ಗಾದೆ ಸುಳ್ಳಾಗದು } ಸಾಕ್ಷಿಗಾರ ಸುಮ್ಮನಿರ.

ನಿಮ್ಮ ಪತ್ರಗಳು

ಹೆದ್ದಾರಿಗೆ ಗಟ್ಟಿಮುಟ್ಟಾದ ಮೆಶ್ ಗ್ರಿಲ್ ಅಳವಡಿಸಿ

ಮಾನ್ಯರೆ,



ಹೊಸದಾಗಿ ನಿರ್ಮಾಣವಾಗಿರುವ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೇಯಲ್ಲಿ ಜಾನುವಾರುಗಳು, ಕಾಡು ಪ್ರಾಣಿಗಳು, ಸಾಕು ಪ್ರಾಣಿಗಳು, ಜನರು ಮುಖ್ಯ ರಸ್ತೆಗೆ ಬರಬಾರದು ಎಂದು ಕಬ್ಬಿಣದ ದೊಡ್ಡ ದೊಡ್ಡ ಮೆಶ್ ಗ್ರಿಲ್‌ಗಳನ್ನು ಅಳವಡಿಸಿದ್ದಾರೆ. ಆದರೆ ಕೆಲವು ಗ್ರಾಮಗಳಲ್ಲಿ ಈ ದೊಡ್ಡ ದೊಡ್ಡ ಮೆಶ್ ಗ್ರಿಲ್‌ಗಳನ್ನು ಭೇದಿಸಿ (ಚಿತ್ರದಲ್ಲಿ ಕಾಣುವಂತೆ) ರಸ್ತೆ ದಾಟುತ್ತಿದ್ದಾರೆ. ಹೀಗೆ ರಸ್ತೆ ದಾಟುವಾಗ ಅಪಘಾತವಾಗಿ ಸಾವು ಸಂಭವಿಸಿದರೆ ಯಾರು ಹೊಣೆ?

ಆದ್ದರಿಂದ ಇದಕ್ಕೆ ಸಂಬಂಧಪಟ್ಟ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದವರು ಅತ್ಯುತ್ತಮ ಗುಣಮಟ್ಟದ ಕಬ್ಬಿಣದ ಮೆಶ್ ಗ್ರಿಲ್‌ಗಳನ್ನು ಅಳವಡಿಸಿ ಸಾವು ನೋವುಗಳು ತಪ್ಪಿಸಿ, ಹೆದ್ದಾರಿ ಅಕ್ಕ ಪಕ್ಕದ ಗ್ರಾಮದ ಜನರಲ್ಲಿ ಮೆಶ್ ಗ್ರಿಲ್‌ಗಳನ್ನು ಛಿದ್ರಗೊಳಿಸದಂತೆ ಅರಿವು ಮೂಡಿಸಬೇಕಾಗಿದೆ.

–ಅಹಲ್ಯ. ಸಿ ನಾ. ಚಂದ್ರ, ಜನತಾ ನಗರ, ಮೈಸೂರು

ಇಂಥಹ ಕಲಾಪೋಷಕರ ಸಂಖ್ಯೆ ಹೆಚ್ಚಾಗಲಿ

ಮಾನ್ಯರೆ,

ಮೈಸೂರು ಮೊದಲಿನಿಂದಲೂ ಸಾಂಸ್ಕೃತಿಕ ನಗರ. ಏನಾದರೂ ಕಲಾ ಚಟುವಟಿಕೆಗಳು, ಸಂಗೀತ ಕಛೇರಿಗಳು, ರಸ ಸಂಜೆ ನಡೆಯುತ್ತಲೇ ಇರುತ್ತವೆ. ಇದರ ಪ್ರಾಯೋಜಕತ್ವ ತುಸು ಕಷ್ಟದ ವಿಚಾರವೇ. ಇಂದಿನ ದಿನಗಳಲ್ಲಿ ಉದಾರ ಮನೋಭಾವದವರು ಬೆರಳೆಣಿಕೆಯಷ್ಟು. ಇಂಥಹವರ ಸಾಲಿಗೆ ಮೈಸೂರಿನ ಖ್ಯಾತ ಉದ್ಯಮಿ, ಶಿಕ್ಷಣ ತಜ್ಞರಾದ ಎಂ.ಜಗನ್ನಾಥ ಶೆಣೈ ಸೇರುತ್ತಾರೆ. ರಾಮಕೃಷ್ಣನಗರದಲ್ಲಿ ತಮ್ಮದೇ ಆದ ರಮಾಗೋವಿಂದ ಕಲಾ ಮಂದಿರವನ್ನು ಸ್ಥಾಪಿಸಿರುವುದರಿಂದ ಅಲ್ಲಿ ಕಲಾ ಚಟುವಟಿಕೆಗಳು ನಡೆಯುತ್ತಲೇ ಇರುತ್ತವೆ. ವಿವಿ ಮೊಹಲ್ಲಾ 8ನೇ ಕ್ರಾಸ್ ಗಣೇಶೋತ್ಸವ ಸಮಿತಿಗೆ ಸದಸ್ಯರಾಗಿ ಪ್ರತಿವರ್ಷ ಸಂಗೀತ ಕಚೇರಿಗಳು ನಡೆಯುವಂತೆ ಮಾಡಿದ್ದಾರೆ. ಮೈಸೂರಿನ ಜನತೆ ಪರವಾಗಿ ಶೆಣೈ ಅವರಿಗೆ ಧನ್ಯವಾದಗಳು.

– ಜಿ.ಪಿ.ರಾಜೇಶ್, ವಿವಿ ಮೊಹಲ್ಲಾ, ಮೈಸೂರು

ಯುವ ಉತ್ಸಾಹಿ ಹೊಸ ಮುಖಗಳಿಗೆ ಮಣೆ ಹಾಕಲಿ

ಮಾನ್ಯರೆ,

ಬುಧವಾರ ರಚನೆ ಆಗಲಿರುವ ಡಿಕೆ ಶಿವಕುಮಾರ್ ನೇತೃತ್ವದ ನೂತನ ಮಂತ್ರಿ ಮಂಡಲದಲ್ಲಿ 'ಜೆನ್ ಜೆಡ್' ಯುವ ಪಡೆಗೆ ಅವಕಾಶ ಕಲ್ಪಿಸಬೇಕಿದೆ. ಯಾವುದೇ ಸರ್ಕಾರಿ ಕಚೇರಿಗಳಲ್ಲಿ ಪಾರದರ್ಶಕ ಆಡಳಿತ ಭ್ರಷ್ಟಾಚಾರರಹಿತ, ಸಾರ್ವಜನಿಕರಿಗೆ ಸದಾ ಸ್ಪಂದಿಸುವ ನಿಷ್ಠೆ ಬದ್ಧತೆ ತೋರುವ ಗುಣ ಇರುವ ಯುವ ಉತ್ಸಾಹಿ ಹೊಸ ಮುಖಗಳಿಗೆ ಮಣೆ ಹಾಕಬೇಕಿದೆ.

ಕಳೆದ ಮೂರು ವರ್ಷಗಳ ಸಿದ್ದರಾಮಯ್ಯ ಅವಧಿಯಲ್ಲಿ ಬಹುತೇಕರು 60 ವರ್ಷ ಮೀರಿದವರೇ ಸಚಿವರಾಗಿದ್ದರು. ಇದು ಉಳಿದ ಎರಡು ವರ್ಷಕ್ಕೂ ಪುನರಾವರ್ತನೆ ಆಗಬಾರದು. ಏಕೆಂದರೆ, ಇವರುಗಳಿಂದ ಹೆಚ್ಚಿನ ಗುಣ ಮಟ್ಟದ ಕಾರ್ಯಕ್ಷಮತೆ ಬಯಸಲು ಅಸಾಧ್ಯವಾಗಿದೆ.

ಸಾರ್ವಜನಿಕರ ಸಮಸ್ಯೆಗಳನ್ನು ಕುಂತಲ್ಲೇ, ನಿಂತಲ್ಲೇ ಪರಿಹರಿಸುವ ಮೂಲಕ ಅತ್ಯಂತ ಹೆಚ್ಚು ಉತ್ಸಾಹಿಯಾಗಿ ಜನರ ನಡುವೆ ಬೆರೆಯುವ ಶಾಂತ ರೀತಿ ಆಲಿಸುವ, ರಾಜ್ಯಾದ್ಯಂತ ಪಾದರಸದಂತೆ ಜನರ ಸಮಸ್ಯೆಗಳನ್ನು ಪರಿಹರಿಸುವ "ಜೆನ್ ಜೆಡ್" ಯುವ ಉತ್ಸಾಹಿ ನಾಯಕರು ಸಚಿವರಾಗಬೇಕು.

ಸದ್ಯ, ಹೀಗಾಗಲೇ ನೆರೆಯ, ತಮಿಳುನಾಡಿನಲ್ಲಿ ನೂತನ ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಟಿವಿಕೆ ನೇತೃತ್ವದ ಮಂತ್ರಿ ಮಂಡಲ ಈ ಜೆನ್ ಜೆಡ್ (ಯುವ ಪಡೆ ಒಳಗೊಂಡ ಸಂಪುಟ) ಶೈಲಿಯ ಸರ್ಕಾರದ ಕಾರ್ಯ ವೈಖರಿಯ ಶೈಲಿ ಇಡೀ ದೇಶಕ್ಕೆ ಮಾದರಿ ಆಗಿ ಯುವ ಜನರ ಆಶೋತ್ತರಗಳಿಗೆ ತಕ್ಕಂತೆ ಕಾರ್ಯನಿರ್ವಹಿಸುತ್ತಿದೆ.

ಬಹುತೇಕರು 40 ವರ್ಷ ವಯಸ್ಸಿನ ಒಳಗಿನವರಾಗಿದ್ದು ನಿಜಕ್ಕೂ ಇದು ಶ್ಲಾಘನೀಯ. ಸಾಮಾನ್ಯವಾಗಿ 1997 ರಿಂದ 2012ರ ನಡುವೆ ಜನಿಸಿದವರನ್ನು ಈ ಪೀಳಿಗೆಗೆ "ಜೆನ್ ಜೆಡ್" / ಜೆನ್ ಜೀ ಎಂದು ಹೇಳಲಾಗುತ್ತದೆ. ಈ ತಲೆಮಾರಿನ ಯುವಕ ಯುವತಿಯರೇ ದೇಶದ ಭವಿಷ್ಯ ನಿರ್ಧರಿಸುವ ದೊಡ್ಡ ಯುವ ಪಡೆ ಆಗಿದೆ.

ವೈವಿಧ್ಯತೆ ಮತ್ತು ಮುಕ್ತ ಮನೋಭಾವ ವಿಭಿನ್ನ ಸಂಸ್ಕೃತಿ, ಕಲೆ ಮತ್ತು ಹೊಸ ಆಲೋಚನೆಗಳನ್ನು ಸುಲಭವಾಗಿ ಸ್ವೀಕರಿಸುತ್ತಾರೆ. ಸಾಮಾಜಿಕ ಕಳಕಳಿ ಪರಿಸರ ಸಂರಕ್ಷಣೆ ಮತ್ತು ಸಾಮಾಜಿಕ ನ್ಯಾಯದ ಬಗ್ಗೆ ಸಾಕಷ್ಟು ಒಲವು ಹೊಂದಿರುವ ಇವರು ತಂತ್ರಜ್ಞಾನ ಹಾಗೂ ಸಾಮಾಜಿಕ ಜಾಲತಾಣಗಳ ಜೊತೆಗೆ ಬೆಳೆದ ಮೊದಲ ಗಣಕೀಕೃತ ಸ್ಥಳೀಯರು ಅಥವಾ ವಿದ್ಯುನ್ಮಾನದ ಸ್ಥಳೀಯರು ಇವರಾಗಿದ್ದು ಸ್ಪಷ್ಟ ರಾಜಕೀಯ ಚಿಂತನೆ ಮೈಗೂಡಿಸಿಕೊಂಡಿದ್ದು ಪ್ರಗತಿಪರ ನಿಲುವು ಹೊಂದಿದ್ದಾರೆ.

ಪ್ರಸಕ್ತ ರಾಜಕೀಯ, ಸಾಮಾಜಿಕ ಸಮಸ್ಯೆಗಳು, ವೃತ್ತಿ ಜೀವನದ ಕುರಿತು ಅತ್ಯಂತ ಹೆಚ್ಚು ಜಾಗೃತವಾಗಿರುವ ಈ ಪೀಳಿಗೆ ಹಣಕಾಸು, ಭವಿಷ್ಯ, ಮುಕ್ತವಾಗಿ ಮಾತನಾಡುವಂತಹ ಸಂವಹನ ಕಲೆ ಎಲ್ಲದರಲ್ಲೂ ಮುಂದಿದ್ದಾರೆ. ದೇಶದಲ್ಲಿ ಸರಿ ಸುಮಾರು 35 ರಿಂದ 37 ಕೋಟಿಗಿಂತಲೂ ಹೆಚ್ಚು "ಜೆನ್ ಜೆಡ್" ಯುವಕರಿದ್ದಾರೆ. ಇದು ದೇಶದ ಅತಿ ದೊಡ್ಡ ಯುವ ಪಡೆಯಾಗಿದೆ. ನಮ್ಮ ರಾಜ್ಯದಲ್ಲಿ ಕೂಡ ಅತೀ ಹೆಚ್ಚು ಈ ಪೀಳಿಗೆಯ ಯುವ ಜನರೇ ಹೆಚ್ಚು ಇದ್ದು ಇವರಿಗೆ ತಕ್ಕಂತೆ ಆಡಳಿತ ನೀಡಲು ಸಚಿವ ಸಂಪುಟದಲ್ಲಿ ಕಿರಿಯರಿಗೆ ಪ್ರಾತಿನಿಧ್ಯ ಕೊಡುವುದು ಹೆಚ್ಚು ಸೂಕ್ತ. ಜನರ ನಡುವಿನ ಕೊಂಡಿಯಾಗಿ ಸಮಸ್ಯೆಗಳನ್ನು ಪರಿಹರಿಸುವ, ಹಗಲಿರುಳು ಕೆಲಸ ಮಾಡುವ ಯುವ ಶಾಸಕರನ್ನು ಗುರುತಿಸಿ ಸಚಿವರಾಗಿ ಮಾಡಿದರೆ ರಾಜ್ಯಾದ್ಯಂತ ಇನ್ನಷ್ಟು ಜನಪರ ಕೆಲಸ ಕಾರ್ಯಗಳನ್ನು ಮಾಡಲು ಪ್ರಯೋಜನವಾಗಲಿದೆ. ಸಚಿವ ಸ್ಥಾನ ನಿಭಾಯಿಸುವ ಸಾಮರ್ಥ್ಯ ಹೊಂದಿರುವ ಕಿರಿಯ ಶಾಸಕರುಗಳಿಗೆ ಆದ್ಯತೆ ಸಿಗಲಿ.

–ಅನಿಲ್‌ಕುಮಾರ್, ನಂಜನಗೂಡು.

ಅಮೂಲ್ಯ ನೆನಪುಗಳ ಫ್ರೇಂ....

–ಆರ್.ಜಿ.ಸಿಂಗ್
ಕಾರ್ಯದರ್ಶಿ, ರಾಮಸನ್ಸ್ ಕಲಾ ಪ್ರತಿಷ್ಠಾನ



ಮಹಾರಾಜ ಜಯಚಾಮರಾಜ ಒಡೆಯರ್ ಅವರು ನಿಖರವಾಗಿ ಗುರಿಯಿಟ್ಟು ಗುಂಡು ಹಾರಿಸುವ ಕೌಶಲ್ಯಕ್ಕೆ ಹೆಸರುವಾಸಿಯಾಗಿದ್ದರು. ಕಾಡಾನೆ ಅಥವಾ ನರಭಕ್ಷಕ ಹುಲಿ ಸೇರಿದಂತೆ ವನ್ಯಜೀವಿಗಳು ಜನವಸತಿ ಪ್ರದೇಶದಲ್ಲಿ ದಾಳಿ ನಡೆಸಿದಾಗ, ರಕ್ಷಣೆಗಾಗಿ ಪ್ರಜೆಗಳು ಅವರ ಮೊರೆ ಹೋಗುತ್ತಿದ್ದರು. ಹಾಗಾಗಿಯೇ ಅರಮನೆ ಸಂಗ್ರಹದಲ್ಲಿ ಅವರಿಗೆ ಸಂದ ಅನೇಕ ಪ್ರಶಸ್ತಿ–ಪುರಸ್ಕಾರಗಳಿವೆ. –ಜನ್ಮಶತಮಾನೋತ್ಸವ ನಮನ 2019 ಕಿರುಪುಸ್ತಕದಿಂದ ಆಯ್ದ ಭಾಗ.

ದಿನಾಂಕವಿಲ್ಲದ ಈ ಛಾಯಾಚಿತ್ರದಲ್ಲಿ ಗುರುತಿಸಲಾಗದ ಸ್ಥಳವೊಂದರಲ್ಲಿ ಯುವಕರಾದ ಮಹಾರಾಜರು ಬೇಟೆಯಾಡುವ ಸಲುವಾಗಿ ಬಂದೂಕನ್ನು ಹಿಡಿದು ಆನೆಯ ಮೇಲೆ ಸವಾರಿ ಮಾಡುವುದನ್ನು ಕಾಣಬಹುದು. ಅವರ ಕಿವಿಯಲ್ಲಿ ವಜ್ರದ ಕಿವಿಯೋಲೆ ಮಿನುಗುತ್ತಿರುವುದು ಸಹ ಗೋಚರಿಸುತ್ತದೆ. ಈ ಸೊಗಸಾದ ಹಾಗೂ ಅಪರೂಪದ ಛಾಯಾಚಿತ್ರದಲ್ಲಿ ಜಯಚಾಮರಾಜ ಒಡೆಯರ್ ಅವರ ನಿರಾಳ ಭಾವಭಂಗಿ ಮನಸೆಳೆಯುವಂತಿದೆ. ಅವರ ಮುಂಭಾಗದಲ್ಲಿ ನಿಖರವಾಗಿ ಗುರಿಯಿಡಲು ಬಳಸುವ ಫಿಕ್ಸ್ಡ್ ಮೌಂಡ್ ಇರುವುದನ್ನು ಕಾಣಬಹುದು. ಅರಣ್ಯಾಧಿಕಾರಿ ನೀಲಕಂಠರಾವ್ ಅವರು ತಮ್ಮ ಎಡಗೈಯಲ್ಲಿ ಡಬಲ್ ಬ್ಯಾರೆಲ್ ಬಂದೂಕು ಹಿಡಿದುಕೊಂಡು ಸೂಚನೆ ನೀಡುತ್ತಿರುವಂತಿದೆ. ಮತ್ತೊಬ್ಬ ವ್ಯಕ್ತಿ ಹಾಗೂ ಆನೆ ಮಾವುತನ ಗುರುತು ಸದ್ಯ ತಿಳಿದುಬಂದಿಲ್ಲ.

ಚಿತ್ರದಲ್ಲಿ ಇಬ್ಬರು ಗೃಣರು ಹಾಗೂ ಮಹಾರಾಜರು ಫ್ರೆಂಚ್ ಶೈಲಿಯ ಪಿತ್ ಹೆಲ್ಮೆಟ್ ಟೋಪಿಗಳನ್ನು ಧರಿಸಿರುವುದನ್ನು ನೋಡಬಹುದು. ಇವು ಸಾಂಪ್ರದಾಯಿಕ ಶಿಕಾರ್ (ಬೇಟೆ) ವೇಳೆಗೆ ಧರಿಸಲು ಯುರೋಪಿಯನ್ನರು ಸೇರ್ಪಡೆ ಮಾಡಿದ ಅಂಶವಾಗಿತ್ತು. ಅಲ್ಲದೆ, ಚಿತ್ರದಲ್ಲಿ ಆನೆ ಮಾವುತನು ಸಾಂಪ್ರದಾಯಿಕ ಪೇಟ ಧರಿಸಿರುವುದನ್ನು ಕಾಣಬಹುದು.

ನಂತರದಲ್ಲಿ ಮಹಾರಾಜರನ್ನು 1952ರಲ್ಲಿ ಸ್ಥಾಪಿಸಲಾದ ಇಂಡಿಯನ್ 'ಬೋರ್ಡ್ ಫಾರ್ ವೈಲ್ಡ್ ಲೈಫ್ (ಐಬಿಡಬ್ಲ್ಯೂಎಲ್)' ಸಂಸ್ಥೆಯ ಅಧ್ಯಕ್ಷರಾಗಿ ಆಯ್ಕೆ ಮಾಡಲಾಯಿತು. ವನ್ಯಜೀವಿ ಸಂರಕ್ಷಣೆ ಸಂಬಂಧ ಭಾರತ ಸರ್ಕಾರಕ್ಕೆ ಸಲಹೆ ನೀಡಲು ಹಾಗೂ ವನ್ಯಜೀವಿ ಸಂತತಿ ಅಳಿವು ತಡೆಯಲು, ವನ್ಯಜೀವಿಗಳ ಕುರಿತ ಜಾಗೃತಿ ಉತ್ತೇಜಿಸಲು ಇದನ್ನು ಸ್ಥಾಪಿಸಲಾಯಿತು.

1952ರ ನವೆಂಬರ್‌ನಲ್ಲಿ ಲಲಿತಾ ಮಹಲ್ ಅರಮನೆಯಲ್ಲಿ ನಡೆದ ಮೊದಲ ಸಭೆಯಲ್ಲಿ ಇದನ್ನು 'ಸೆಂಟ್ರಲ್ ಬೋರ್ಡ್ ಫಾರ್ ವೈಲ್ಡ್ ಲೈಫ್' ಎಂದು ಮರುನಾಮಕರಣ ಮಾಡಲಾಯಿತು. ಅಂದಿನಂತೆಯೇ ಇಂದಿಗೂ ಇದು ಪ್ರಧಾನಮಂತ್ರಿಗಳ ಅಧ್ಯಕ್ಷತೆಯಲ್ಲಿರುವ ಸಲಹಾ ಮಂಡಳಿಯಾಗಿದೆ. 2003ರಿಂದ ಇದನ್ನು 'ನ್ಯಾಷನಲ್ ಬೋರ್ಡ್ ಫಾರ್ ವೈಲ್ಡ್ ಲೈಫ್' ಎಂದು ಕರೆಯಲಾಗುತ್ತಿದೆ. ಅಂದಿನ ಮೈಸೂರು ಸಂಸ್ಥಾನದಲ್ಲಿ ಮಹಾರಾಜರು ಹಾಗೂ ಅವರ ಪೂರ್ವಜರು ವನ್ಯಜೀವಿ ಸಂರಕ್ಷಣಾ ಕ್ಷೇತ್ರದಲ್ಲಿ ಸಲ್ಲಿಸಿದ್ದ ವಿಶಿಷ್ಟ ಸೇವೆ ಪರಿಗಣಿಸಿ ಈ ಮಹತ್ವದ ಸಲಹಾ ಮಂಡಳಿಯ ನೇತೃತ್ವವನ್ನು ಮಹಾರಾಜರಿಗೆ ವಹಿಸಲಾಗಿತ್ತು.

(ಸಂಗ್ರಹ: ರಾಮ್‌ಸನ್ಸ್ ಕಲಾ ಪ್ರತಿಷ್ಠಾನ, ಗಾತ್ರ 27x18 ಸೆಂ.)



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ಸಮೃದ್ಧ ಜೀವನ

(ಸಾಯ ಕೃಷ್ಣಭಟ್ಟರ ಸಾವಿರದ ನೆನಪುಗಳು)

ಲೋಕ ಪ್ರಸಿದ್ಧರಾದವರ, ರಾಷ್ಟ್ರ ಪ್ರಶಸ್ತಿ ಭಾಜನರ, ಪ್ರಖ್ಯಾತ ವಿಜ್ಞಾನಿಗಳ ಬದುಕಿನ ಕಥೆಗಳನ್ನು ಬರೆಯಲು ಎಷ್ಟೋ ಜನ ಉತ್ಸಾಹವನ್ನು ತೋರಿಸುತ್ತಾರೆ. ಅಂತಹವರ ಹೆಸರಿನಿಂದ ಲೇಖಕರೂ ಪ್ರಸಿದ್ಧಿಯನ್ನು ಗಳಿಸಿಕೊಳ್ಳುವ ಅವಕಾಶವನ್ನು ಪಡೆದು ಸಂತುಷ್ಟರಾಗುತ್ತಾರೆ. ಹಾಗಲ್ಲದೆ ಸಾಮಾನ್ಯರಲ್ಲಿದ್ದೂ ಅಸಾಮಾನ್ಯ ಕಾರ್ಯಗಳನ್ನು ಮಾಡಿದ, ಎಲೆ ಮರೆಯ ಕಾಯಿನಂತಿದ್ದ ಸಜ್ಜನರ ಜೀವನದ ಕಥನಗಳೂ ಸ್ವಾರಸ್ಯಮಯವಾಗಿರಬಲ್ಲವು. ಜನರ ಬದುಕಿಗೆ ಮಾರ್ಗದರ್ಶಕಗಳಾಗಬಲ್ಲವು ಎಂಬುದಕ್ಕೆ ಉತ್ತಮ ಉದಾಹರಣೆ ಸಮೃದ್ಧ ಜೀವನ ಎಂಬ ಪುಸ್ತಕ. ಇದನ್ನು ರಚಿಸಿರುವವರು ವಿದ್ವತ್ **ಪ್ರಕಾಂಡರೂ ವಿಪುಲ** ಸಾಹಿತ್ಯವನ್ನು ರಚಿಸಿದವರೂ ಆದ ಡಾ. ಪಾದೇಕಲ್ಲು ವಿಷ್ಣುಭಟ್ಟರು. ಅವರು ಈ ರೀತಿಯ ಹಲವು ಪುಸ್ತಕಗಳನ್ನು ಈಗಾಗಲೇ ಬರೆದು ಬೆಳಕಿಗೆ ತಂದಿದ್ದಾರೆ. 'ಸಮಾಜಮುಖಿ ಚಿಂತಕ ಡಾ. ಏರ್ಯ ಲಕ್ಷ್ಮೀ ನಾರಾಯಣ ಆಳ್ವ' (2012), 'ಯಕ್ಷಗಾನ ಕಲಾ ತಪಸ್ವಿ ಮಾಂಬಾಡಿ ನಾರಾಯಣ ಭಾಗವತರು. (2016), ಸ್ವಪ್ರಯತ್ನದ ಧೀಮಂತ ಲೇಖಕ ಅಂಬಾತನಯ ಮುದ್ರಾಡಿ, (2017), 'ಕನ್ನಡ ಸಾಹಿತ್ಯ ಪರಿಚಾರಕ ಪ್ರೊ. ಎಂ. ರಾಮಚಂದ್ರ (2017), 'ಕೃಷಿಕ ಭಾಷಾ ಪಂಡಿತ ವಿದ್ವಾನ್ ತಾಳ್ತಜೆ ಕೃಷ್ಣಭಟ್ಟ (2022), 'ಗ್ರಾಮಾಭಿವೃದ್ಧಿ ಸಾಧಕ ಮುಗುಳಿ ರಾಮಕೃಷ್ಣ ಭಟ್ಟರು (2025) ಇತ್ಯಾದಿ ಈ ರೀತಿಯ ಕೃತಿಗಳು ಕನ್ನಡಕ್ಕೆ ಅವರ ಕೊಡುಗೆ. ಕಾಂತಾವರ ಕನ್ನಡ ಸಂಘವು 'ನಾಡಿಗೆ ನಮಸ್ಕಾರ' ಎಂಬ ಕೃತಿ ಮಾಲಿಕೆಯಲ್ಲಿ ಈ ಪುಸ್ತಕಗಳನ್ನು ಪ್ರಕಟಿಸಿದೆ. ಪ್ರಸ್ತುತ ಸಮೃದ್ಧ ಜೀವನ ಎಂಬ ಕೃತಿಯು ಸಾಯಕೃಷ್ಣ ಭಟ್ಟರ ಮಕ್ಕಳಿಂದಲೇ ಪ್ರಕಟಿತವಾಗಿದೆ. ಪ್ರಕಾಶಕರ ಮನದ ಮಾತಿನಲ್ಲಿ ಹೀಗೆ ಹೇಳಿದ್ದಾರೆ "ಕೃತಿಯನ್ನು ಪ್ರಕಟಿಸಬೇಕೆಂಬ ಸಂಕಲ್ಪದೊಡನೆಯೇ ಮೂಡಿದ ಭಾವ 'ಈ ಪುಸ್ತಕ ಮಾರಾಟಕ್ಕಲ್ಲ' ಎಂಬುದು. ಇದು ಓದುಗರಿಗೆ ಒಂದಲ್ಲ ಒಂದು ರೀತಿಯಲ್ಲಿ ಪ್ರೇರಣೆಯನ್ನೋ ಉತ್ಸಾಹವನ್ನೋ ಆಶ್ಚರ್ಯವನ್ನೋ – ಅಲ್ಲದಿದ್ದರೆ ಒಂದು ರೀತಿಯ ಸಮಾಧಾನವನ್ನೋ ಕೊಡುವಂತಹ ಜೀವನ ಚಿತ್ರ". ಆದ್ದರಿಂದ ಈ ಪುಸ್ತಕ ನಿಜವಾಗಿ ಅಮೂಲ್ಯ.

ಸಾಯ ಎಂದರೇನು?

ನಾನು ಸಾಯ ಎಂಬ ಪದವನ್ನು ಕೇಳಿರಲಿಲ್ಲ. ಪಾದೇಕಲ್ಲು ವಿಷ್ಣುಭಟ್ಟರು ಅದರ ಅರ್ಥವನ್ನು ವಿವರಿಸಿದ್ದಾರೆ. "ಸಾಯಕೃಷ್ಣ ಭಟ್ಟರ ಬಗೆಗೆ ಬರೆಯುವುದೆನ್ನುವಾಗ ಮೊದಲು ಬರೆಯಬೇಕಾದ ಶಬ್ದವೇ 'ಸಾಯ' ಎಂಬುದು. ಇದು ಕರಾವಳಿಯ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಪರಿಸರದಲ್ಲಿರುವ ಒಂದು ಸ್ಥಳ ನಾಮ. ಪರಸ್ಪರ ಅತಿ ದೂರವಲ್ಲದ ಪ್ರದೇಶಗಳಲ್ಲಿ 'ಸಾಯ' ಎಂಬ ಎರಡು ಸ್ಥಳನಾಮಗಳಿವೆ" ಇತ್ಯಾದಿ.

ಕೃಷ್ಣಭಟ್ಟರ ಸಾಯ ಕರ್ನಾಟಕ–ಕೇರಳ ಗಡಿನಾಡಿನಲ್ಲಿದೆ. ಅವರು ಹುಟ್ಟಿದ ಮನೆ ಇದ್ದ ಸ್ಥಳ ಈಗ ಕೇರಳ ರಾಜ್ಯದಲ್ಲಿದೆ. ಅವರು ಕಲಿತ ಮತ್ತು ವ್ಯವಸ್ಥಾಪಕರಾಗಿ ದುಡಿದ ಶಾಲೆ ಕರ್ನಾಟಕದಲ್ಲಿದೆ ಎಂಬುದನ್ನೂ ಪಾದೇಕಲ್ಲು ವಿಷ್ಣುಭಟ್ಟರು ತಿಳಿಸಿದ್ದಾರೆ. ಸಾಯಕೃಷ್ಣ ಭಟ್ಟರು ಇಪ್ಪತ್ತನೆಯ ಶತಮಾನದವರು (1923–1995). ಎಪ್ಪತ್ತೆರಡು ವರ್ಷಗಳಲ್ಲಿ ಅವರು ಎಷ್ಟು ಸಮೃದ್ಧ ಜೀವನವನ್ನು ನಡೆಸಿದರು. ಪರೋಪಕಾರಿಯಾಗಿ ಎಷ್ಟೊಂದು ಕಾರ್ಯಗಳನ್ನು ಮಾಡಿದರು, ಹೇಗೆ ಇತರರಿಗೆ ಆದರ್ಶರಾಗಿದ್ದರು ಎಂಬುದು ಪುಸ್ತಕದಲ್ಲಿ ಚೆನ್ನಾಗಿ ನಿರೂಪಿತವಾಗಿದೆ.

ಸಾಯ ಕೃಷ್ಣಭಟ್ಟರದು ಜಮೀನುದಾರರ ಮನೆತನ. ಸಾಕಷ್ಟು ಆಳುಗಳು ಅವರಲ್ಲಿ ಕೆಲಸ ಮಾಡುತ್ತಿದ್ದರು. ಮನೆಯಲ್ಲಿ ಮದುವೆಮುಂತಾದ ಸಮಾರಂಭ ನಡೆದಾಗ ಅಲ್ಲೇ ಊಟದ ವ್ಯವಸ್ಥೆಯೂ ಆಗುತ್ತಿದ್ದುದರಿಂದ ನೂರಾರು ಜನ ಸೇರಿದಾಗ ಅಡುಗೆಗೆ ಬೇಕಾದ ಪಾತ್ರೆಗಳು, ಅವುಗಳ ದಾಸ್ತಾನು ಮಾಡಲು ಬೇಕಾದಷ್ಟು ಅವಕಾಶವಿರುವ ಕೋಣೆಗಳು ಆ ಮನೆಯಲ್ಲಿದ್ದುವೆಂದು ಹೇಳಲಾಗಿದೆ. ಅಡುಗೆಯ ಮನೆಗೆ ಸಮೀಪದಲ್ಲಿ ಹತ್ತಾರು ಜನಕ್ಕೆ ನಿತ್ಯವೂ ಅಡುಗೆ ಮಾಡಿದರೂ ಎರಡು ವರ್ಷಗಳಿಗೆ ಸಾಕಾಗುವಷ್ಟು ಸೌದೆಯ ಸಂಗ್ರಹ ಇದ್ದ ಸೌದೆ ಕೊಟ್ಟಿಗೆಯೂ ಇತ್ತೆಂದರೆ ಅದರ ವಿಸ್ತಾರದ ಕಲ್ಪನೆ ಮಾಡಿಕೊಳ್ಳಬಹುದು. ಮನೆಯ ಅಟ್ಟದಲ್ಲಿ 30000 ತೆಂಗಿನ ಕಾಯಿಗಳನ್ನು ದಾಸ್ತಾನು ಮಾಡುತ್ತಿದ್ದರು ಎಂದಾಗ ಮನೆಯ ವೈಶಾಲ್ಯ ಮತ್ತು ಸಮೃದ್ಧಿಯನ್ನು ಊಹಿಸಿಕೊಳ್ಳಬಹುದು. ಕೃಷ್ಣಭಟ್ಟರ ಮನೆಯಷ್ಟೇ ಅಲ್ಲ, ಮನಸ್ಸೂ ಅಷ್ಟೇ ವಿಶಾಲವಾಗಿತ್ತು ಎಂದು ಲೇಖಕರು ತಿಳಿಸುತ್ತಾರೆ. ವಿಶೇಷವೇನೆಂದರೆ ಕೃಷ್ಣಭಟ್ಟರ ಇಬ್ಬರು ಪತ್ನಿಯರು, ಅವರ ತಮ್ಮ ಎಲ್ಲರೂ ಅವರಿಗೆ ವಿಧೇಯರೂ ಉದಾರಹೃದಯರೂ ಆಗಿದ್ದುದು. ಕೃಷ್ಣಭಟ್ಟರ ಬೀಗರು ಶ್ರೀಮಂತರೂ ಅತ್ಯಂತ ಶಿಸ್ತಿನ ಪಾಲಕರೂ ಆಗಿದ್ದರಂತೆ. ಬೆಳಗಿನ ಏಳುವರೆಗೆ ಉಪಾಹಾರ, ಮಧ್ಯಾಹ್ನ ಹನ್ನೆರಡು ಘಂಟೆಗೆ ಊಟ. ಸಾಯಂಕಾಲ ಏಳೂವರೆಗೆ ಮನೆಯ ಹೊರ ಅಂಗಳದ ಬಾಗಿಲು ಭದ್ರಪಡಿಸಿದರೆ ಮತ್ತೆ ಬಾಗಿಲು ತೆರೆಯುವುದು ಮರುದಿನ ಬೆಳಗ್ಗೆ. ಸಮೀಪದ ಬಂಧುಗಳೇ ಬಂದರೂ ರಾತ್ರಿ ಏಳೂವರೆ ಆದ ಮೇಲೆ ಬಾಗಿಲನ್ನು ತೆರೆಯುತ್ತಿರಲಿಲ್ಲವೆಂಬ ಕಠೋರ ನಿಯಮ. ಇಂತಹ ಸ್ವಾರಸ್ಯದ ಅನೇಕ ವಿಷಯಗಳು ಈ ಪುಸ್ತಕದಲ್ಲಿವೆ.

ಭಾಷಾವಾರು ಪ್ರಾಂತಗಳ ರಚನೆಯಾದಾಗ ಕಾಸರಗೋಡು ಪ್ರಾಂತವು ಕನ್ನಡ ಪ್ರದೇಶವಾದರೂ ಕೇರಳಕ್ಕೆ ಸೇರಿ ಹೋಯಿತು. ಅಲ್ಲಿ ಕನ್ನಡ ಶಾಲೆಗಳನ್ನು ಉಳಿಸಲು ಕೃಷ್ಣಭಟ್ಟರೂ ದುಡಿದರು. ಕನ್ನಡದಲ್ಲಿ ಅವರಿಗೆ ಅಪಾರ ಪ್ರೀತಿಯಿತ್ತು. ಕನ್ನಡದ್ದೇ ಆದ ಯಕ್ಷಗಾನದಲ್ಲಿ ಅವರು ಆಸಕ್ತಿಯನ್ನು ಹೊಂದಿದ್ದ ಕಲಾಪೋಷಕರಾಗಿದ್ದರು. ತಾಳಮದ್ದಲೆಯಲ್ಲಿ ಅಭಿರುಚಿಯನ್ನು ಬೆಳೆಸಿಕೊಂಡಿದ್ದರು. ಅವರ ಮನೆಗೆ ಬಂದ ಯಾವ ಕಲಾವಿದರೂ ಬರಿಗೈಯಲ್ಲಿ ಹಿಂದೆ ಹೋದುದಿಲ್ಲ ಎಂದು ಲೇಖಕರು ಪ್ರತಿಪಾದಿಸಿದ್ದಾರೆ. ಸಮೃದ್ಧ ಜೀವನ ಎಂದರೆ ತಾವು ಮಾತ್ರ ಉಂಡು ಉಟ್ಟು ಮೆರೆಯುವುದಲ್ಲ. ಇತರರೊಡನೆ ಹಂಚಿಕೊಂಡು ತಿಂದು ಸಂತೋಷವನ್ನು ಅನುಭವಿಸುವುದೇ ಸಮೃದ್ಧ ಜೀವನ ಎಂಬುದನ್ನು ಸಾಯಕೃಷ್ಣ ಭಟ್ಟರು ತಮ್ಮ ಬದುಕಿನಿಂದಲೇ ತೋರಿಸಿದರು.

'ಸಾಯಕೃಷ್ಣ ಭಟ್ಟರ ಸಾವಿರದ ನೆನಪುಗಳು' ಎಂಬ ಉಪಶೀರ್ಷಿಕೆಯನ್ನು ಎರಡು ರೀತಿಯಲ್ಲಿ ಅರ್ಥ ಮಾಡಿಕೊಳ್ಳಬಹುದು. ಹತ್ತು ನೂರು ಸೇರಿ ಒಂದು ಸಾವಿರ. ಆ ಸಂಖ್ಯೆಯ ನೆನಪುಗಳು ಎಂದು ಒಂದು ಅರ್ಥ. ಸಾವು ಇರದ ನೆನಪುಗಳು, ಸದಾ ಉಳಿದಿರುವ ಸ್ಮರಣೆಗಳು ಎಂದೂ ಈ ಶೀರ್ಷಿಕೆಗೆ ಅರ್ಥವನ್ನು ಹೇಳಬಹುದು. ಸಾರ್ಥಕ ಜೀವನವನ್ನು ನಡೆಸಿದ ವ್ಯಕ್ತಿಗಳ ನೆನಪಿಗೆ ಸಾವೆಲ್ಲಿ?

ಕೃಷ್ಣಭಟ್ಟರ ವಿದ್ಯಾಭ್ಯಾಸ ಪ್ರೌಢಶಾಲೆಗೆ ಪರಿಮಿತವಾಗಿತ್ತು. ಇಂದಿನ ಎಸ್‌ಎಸ್‌ಎಲ್‌ಸಿಯಷ್ಟು ಓದಿದರೆ ಸಾಕು. ಉಳಿದುದನ್ನು ಬದುಕೇ ಕಲಿಸುತ್ತದೆ, ತಂದೆ ಈಶ್ವರಭಟ್ಟರು ಮೊದಲೇ ಪರಲೋಕ ಪ್ರಯಾಣ ಮಾಡಿದ್ದುದರಿಂದ ಮನೆಯ ವ್ಯವಹಾರಗಳ ನಿರ್ವಹಣೆಯ ಭಾರ ಅವರ ಹೆಗಲಿನ ಮೇಲೆ ಬಿತ್ತು. ತಮ್ಮನ ಉಪನಯನವನ್ನು ಅವರು ನಡೆಸಿದರು. ತಮ್ಮ ನಾರಾಯಣಭಟ್ಟರು ಅಣ್ಣನನ್ನೇ ತಂದೆ, ಗುರು ಎಂದು ಭಾವಿಸಿದ್ದರು. ರಾಮಾಯಣದ ರಾಮಲಕ್ಷ್ಮಣರಂತೆ ಈ ಅಣ್ಣ ತಮ್ಮಂದಿರು ಆ ಸುತ್ತಮುತ್ತ ಜನರಿಗೆ ಆದರ್ಶ ಸೋದರರಾಗಿದ್ದರು. ಅಣ್ಣನೆದುರು ತಮ್ಮ ಎಂದೂ ಕುರ್ಚಿಯಲ್ಲಿ ಕುಳಿತುಕೊಳ್ಳುತ್ತಿರಲಿಲ್ಲವಂತೆ. ಜೀವನದಲ್ಲಿ ಎಂದೂ ಅಣ್ಣನಿಗೆ ತಮ್ಮ ಒಂದೇ ಒಂದು ಇದಿರು ಮಾತನ್ನು ಆಡಲಿಲ್ಲ. ಇಂದಿನ ಪ್ರಪಂಚದಲ್ಲಿ ಇದನ್ನು ಊಹಿಸಿಕೊಳ್ಳುವುದೂ ಅಸಾಧ್ಯ. ಅವರ ಮಕ್ಕಳು ಈಗಲೂ ಈ ಸಂಸ್ಕೃತಿಯನ್ನು ತಮ್ಮಲ್ಲಿ ಅಳವಡಿಸಿಕೊಂಡಿದ್ದಾರೆ ಎಂದು ಲೇಖಕರು ತಿಳಿಸಿದ್ದಾರೆ.

ಅಡ್ಯನಡ್ಕ ಎಂಬ ಗ್ರಾಮದಲ್ಲಿದ್ದ ಶಾಲೆಯಲ್ಲಿ ಕೃಷ್ಣಭಟ್ಟರ ಪ್ರಾಥಮಿಕ ವಿದ್ಯಾಭ್ಯಾಸ. ಅವರಿಗೆ ಇಪ್ಪತ್ತೆರಡು ವರ್ಷ ವಯಸ್ಸಾಗಿದ್ದಾಗ, ಎಂದರೆ 1945 ರಲ್ಲಿ ಆ ಶಾಲೆಯ ಕಟ್ಟಡ ಕುಸಿದು ಬಿದ್ದಿತು. ಮುಂದೆ ಶಾಲೆ ನಡೆಸುವುದು ಹೇಗೆ? ಆ ಶಾಲೆಯಲ್ಲಿ ನೂರಾರು ಜನ ವಿದ್ಯಾಭ್ಯಾಸ ಮಾಡಿದ್ದರು. ಅವರಲ್ಲಿ ಕೆಲವರು ಶ್ರೀಮಂತರೂ ಇದ್ದರು. ಆದರೆ ಔದಾರ್ಯ ಎಷ್ಟು ಜನರಿಗಿತ್ತು? ಶಾಲೆಯ ಉಪಾಧ್ಯಾಯರಿಗೆ ಕಾಣಿಸಿದ ಒಂದೇ ಆಶಾಕಿರಣ ಸಾಯದ ಕೃಷ್ಣಭಟ್ಟರು. ಅವರು ಒಂದು ಶಾಲೆಯ ಕಟ್ಟಡದ ಪುನರ್ ನಿರ್ಮಾಣವಾಗಬೇಕೆಂದು ವಿಜ್ಞಾಪಿಸಿದಾಗ ಆ ವಿಜ್ಞಾಪನೆ ಗುರುಗಳ ಆಜ್ಞೆಯೆಂದು ಶಿರಸಾ ವಹಿಸಿ ನಡೆಸಿಕೊಟ್ಟವರು. ಸಾಯದ ಕೃಷ್ಣಭಟ್ಟರು ಹಲವು ಪದವಿಗಳ ಮಾಲೆಯನ್ನು ಹೆಸರಿನ ಮುಂದೆ ಹಾಕಿಕೊಂಡವರು ಎಷ್ಟು ಜನ ತಮ್ಮ ಚಿಕ್ಕಂದಿನ ಶಾಲೆಯ ಬಗೆಗೆ ಇಷ್ಟು ಕಳಕಳಿಯನ್ನು ಹೊಂದಿರುತ್ತಾರೆ? 22ರ ಯೌವನದಲ್ಲಿ ಹೀಗೆ ಸೇವಾಜಗತ್ತಿಗೆ ಪ್ರವೇಶಿಸಿದ ಕೃಷ್ಣಭಟ್ಟರು ಎಂದೂ ಹೆಜ್ಜೆಯನ್ನು ಹಿಂದಕ್ಕಿಡಲಿಲ್ಲವೆಂಬುದನ್ನು ಪುಸ್ತಕವು ನಿರೂಪಿಸುತ್ತದೆ.

ಸಾಯ ಎಂಬ ಶಬ್ದವು ಸಂಸ್ಕೃತದ ಸಹಾಯ ಎಂಬ ಶಬ್ದ ತದ್ಭವ ರೂಪವೆನ್ನಲಾಗಿದೆ. ಈ ಅರ್ಥವೂ ಸಾಯಕೃಷ್ಣ ಭಟ್ಟರಿಗೆ ಚೆನ್ನಾಗಿ ಅನ್ವಯಿಸುತ್ತದೆ. ಏಕೆಂದರೆ ಆ ಪರಿಸರದಲ್ಲಿ ಅವರಿಂದ ಒಂದಲ್ಲದಿದ್ದರೆ ಇನ್ನೊಂದು ಸಹಾಯವನ್ನು ಪಡೆಯದ ವ್ಯಕ್ತಿಗಳೇ ಆ ಕಾಲದಲ್ಲಿ ಇರಲಿಲ್ಲ. ಸಾಯದ ಕೃಷ್ಣಭಟ್ಟರು ಎನ್ನುವುದೂ ಸರಿ. ಅವರು ಶರೀರವನ್ನು ಬಿಟ್ಟು ಹೋಗಿದ್ದರೂ ಅವರಿಂದ ಉಪಕಾರವನ್ನು ಪಡೆದ ಸಹಸ್ರಾರು ಜನರ ಮನಸ್ಸುಗಳಲ್ಲಿ ಅವರು ಶಾಶ್ವತವಾಗಿ ಇಂದೂ ಇದ್ದಾರೆ ಎಂಬುದನ್ನೂ ಪಾದೇಕಲ್ಲು ವಿಷ್ಣುಭಟ್ಟರು ಪ್ರತಿಪಾದಿಸಿದ್ದಾರೆ.

ಅದೂ ಸರಿಯಾದ ಮಾತು. ಭಾಸಕವಿ ಹೇಳುತ್ತಾನೆ –
ಶಿಕ್ಷಾ ಕ್ಷಯಂ ಗಚ್ಛತಿ ಕಾಲಪರ್ಯಯಾತ್
ಸುಬದ್ಧಮೂಲಾ ನಿಪತಂತಿ ಪಾದಪಾಃ।
ಜಲಂ ಜಲಸ್ಥಾನಗತಂ ಚ ಶುಷ್ಯತಿ
ಹುತಂ ಚ ದತ್ತಂ ಚ ತಥೈವ ತಿಷ್ಠತಿ॥

ಕಾಲವು ಸರಿಯುತ್ತಿದ್ದಂತೆ ಕಲಿತಿದ್ದ ವಿದ್ಯೆಯೂ ಕ್ಷೀಣಿಸುತ್ತದೆ. ಆಳವಾಗಿ ಬೇರೂರಿರುವ ಮರಗಳೂ (ಬಿರುಗಾಳಿ ಬೀಸಿದಾಗ) ಕೆಳಗೆ ಉರುಳಿ ಬೀಳುತ್ತವೆ. ಕೆರೆಕಟ್ಟೆ ಹೊಳೆಗಳ ನೀರು ಒಣಗಿ ಹೋಗುತ್ತದೆ. ಆದರೆ ಹೋಮದಲ್ಲಿ ದೇವತೆಗಳಿಗೆ ಅರ್ಪಿಸಿದ ಹವಿಸ್ಸು, ಬಡವರಿಗೆ ನೀಡಿದ ದಾನ ಎಂದೆಂದಿಗೂ ಉಳಿಯುತ್ತದೆ. ಕೃಷ್ಣಭಟ್ಟರು ಮಾಡಿದ ಸತ್ಕಾರ್ಯಗಳು ಅವರನ್ನು ಅಮರರನ್ನಾಗಿ ಮಾಡಿವೆ.

ಆ ಪುಣ್ಯಾತ್ಮರು ಅನುಸರಿಸಿದ ಜೀವನ ನೀತಿಯನ್ನು ವರ್ಣಿಸುವ ಶ್ಲೋಕವನ್ನು ಗ್ರಂಥಕರ್ತರು ಉದಾಹರಿಸಿದ್ದಾರೆ–

ಅನ್ನಂ ಚ ನೋ ಬಹುಭವೇದತಿ ಥೀಂಶ್ಚ ಲಭೇಮಹಿ ।
ಯಾಚಿತಾರಶ್ಚ ನಸ್ಸಂತು ಮಾಚ ಯಾಚಿಷ್ಮ ಕಂಚನ ॥

ನಮ್ಮ ಮನೆಯಲ್ಲಿ ಅನ್ನ (ಆಹಾರ) ಸಮೃದ್ಧವಾಗಿರಲಿ. ದಿನವೂ ನಮಗೆ ಅತಿಥಿಗಳು ದೊರಕಲಿ. ನೆರವನ್ನು ಅಪೇಕ್ಷಿಸಿ ಬರುವವರೂ ನಮಗೆ ಸಿಕ್ಕಲಿ. ನಾವು ಯಾರನ್ನೂ ಯಾಚಿಸದಂತೆ ಆಗಲಿ. ಇಷ್ಟು ಉದಾತ್ತರೂ ಉದಾರರೂ ಆಗಿದ್ದವರ ಜೀವನಗಾಥೆಯಿಂದ ನಾವೆಲ್ಲ ಕಲಿಯಬೇಕಾದುದು ತುಂಬ ಇದೆ. ಅದನ್ನು ನಮಗೆಲ್ಲ ಪರಿಚಯಿಸಿರುವ ಗ್ರಂಥಕರ್ತ ಡಾ. ಪಾದೇಕಲ್ಲು ವಿಷ್ಣುಭಟ್ಟರಿಗೂ, ಅವರಿಗೆ ಪ್ರೇರಣೆಯನ್ನೂ ಮಾಹಿತಿಯನ್ನೂ ನೀಡಿ ಗ್ರಂಥವನ್ನು ಪ್ರಕಟಿಸಿದ ಸಾಯದ ಕೃಷ್ಣಭಟ್ಟರ ಮಕ್ಕಳಾದ ಶ್ರೀಯುತ ಗೋವಿಂದ ಪ್ರಕಾಶ ಸಾಯರಿಗೂ ನಮ್ಮ ಕೃತಜ್ಞತಾಪೂರ್ವಕ ಧನ್ಯವಾದಗಳು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 3 ಬುಧವಾರ 2026

47

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 48 | ಪುಟಗಳು: 12 + IV
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ದೊಡ್ಡ ಆಲಹಳ್ಳಿ ಕೆಂಪೇಗೌಡ ಶಿವಕುಮಾರ್ ಎಂಬ ಹೆಸರಿನವನಾದ ನಾನು...

ಮುಖ್ಯಮಂತ್ರಿಯಾಗುತ್ತಿದ್ದೇನೆ...!!

ಲೋಕಭವನದಲ್ಲಿ ಇಂದು 25ನೇ ಮುಖ್ಯಮಂತ್ರಿಯಾಗಿ ಪ್ರಮಾಣವಚನ

ಬೆಂಗಳೂರು, ಜೂ.2 (ಕೆಎಂಶಿ)– ಸರ್ವಧರ್ಮ ಗುರುಗಳು, ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವವರ ಸಮ್ಮುಖದಲ್ಲಿ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿಯಾಗಿ ಬುಧವಾರ ಸಂಜೆ ಪ್ರಮಾಣವಚನ ಸ್ವೀಕರಿಸಲಿದ್ದಾರೆ.

ಲೋಕಭವನದ ಗಾಜಿನ ಮನೆಯಲ್ಲಿ ನಡೆಯುವ ಸರಳ ಸಮಾರಂಭದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಸಂಜೆ 4 ಗಂಟೆ 5 ನಿಮಿಷಕ್ಕೆ ಶಿವಕುಮಾರ್ ಅವರಿಗೆ ಪ್ರಮಾಣವಚನ ಬೋಧಿಸಲಿದ್ದಾರೆ.

ಶಿವಕುಮಾರ್ ತಾವು ಅಧಿಕಾರ ಸ್ವೀಕರಿಸುವ ಸಂದರ್ಭದಲ್ಲೇ ಸಿದ್ದರಾಮಯ್ಯ ಸಂಪುಟದಲ್ಲಿದ್ದ ಕೆಲವರೂ ಸೇರಿದಂತೆ ಹೊಸ ಮುಖಗಳನ್ನು ಮಂತ್ರಿಮಂಡಲಕ್ಕೆ ಸೇರಿಸಿಕೊಂಡು ಜೂನ್ 3 ರಿಂದಲೇ ಆಡಳಿತ ನಡೆಸಲಿದ್ದಾರೆ. ಧರ್ಮಗುರುಗಳು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಅಧಿನಾಯಕ ರಾಹುಲ್‌ಗಾಂಧಿ, ಕಾಂಗ್ರೆಸ್ ಆಡಳಿತವಿರುವ ರಾಜ್ಯಗಳ ಮುಖ್ಯಮಂತ್ರಿಗಳು ಸೇರಿದಂತೆ ಗಣ್ಯರ ಜೊತೆಗೆ ರಾಜ್ಯದ ಪ್ರಮುಖ ರಾಜಕಾರಣಿ ಗಳು, ಸಂಸದರು, ಶಾಸಕರು, ಆಯ್ದ ಪ್ರಮುಖ ಅಧಿಕಾರಿಗಳು ಸೇರಿದಂತೆ 1200 ಗಣ್ಯರಿಗೆ ಆಹ್ವಾನ ನೀಡಲಾಗಿದೆ.

ಗಾಜಿನ ಮನೆ ಒಳಗೆ ಹಾಗೂ ಹೊರ ಭಾಗದಲ್ಲಿ ಹುಲ್ಲು ಹಾಸಿನ ಮೇಲೆ ಆಸನಗಳ ವ್ಯವಸ್ಥೆ ಮಾಡಲಾಗಿದೆ. ಒಂದು ಭಾಗದಲ್ಲಿ ಜನಪ್ರತಿನಿಧಿಗಳು,

■10ನೇ ಪುಟಕ್ಕೆ



ಬುಧವಾರ ನೂತನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಮಾಣ ವಚನಕ್ಕೆ ಸರ್ವರೀತಿಯಲ್ಲೂ ಸನ್ನದ್ಧವಾಗುತ್ತಿದೆ ಲೋಕಭವನ.



ಸರ್ವ ಧರ್ಮ ಸ್ವಾಮೀಜಿಗಳ ಸಮ್ಮುಖದಲ್ಲಿ ಶಪಥ

ಬೆಂಗಳೂರು: ನಿಯೋಜಿತ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರು ಬುಧವಾರ ಸಂಜೆ 4.05ಕ್ಕೆ ಲೋಕಭವನದಲ್ಲಿ ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದು, ಈ ಸಮಾರಂಭ ಹಲವು ವಿಶೇಷತೆಗಳಿಗೆ ಸಾಕ್ಷಿಯಾಗುತ್ತಿದೆ. ರಾಜ್ಯದ ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ಡಿಕೆ ಶಿವಕುಮಾರ್ ಅವರು, ಸ್ವಾಮೀಜಿ, ಫಾದರ್ ಹಾಗೂ ಮೌಲ್ವಿ ಸೇರಿದಂತೆ ಸರ್ವ ಧರ್ಮಗಳ ಸ್ವಾಮೀಜಿಗಳ ಸಮ್ಮುಖದಲ್ಲಿ ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕಾರ ಮಾಡಲಿದ್ದಾರೆ.

ಇದುವರೆಗೂ ರಾಜ್ಯದಲ್ಲಿ ಯಾವುದೇ ನಾಯಕ ಸರ್ವಧರ್ಮಗಳ ಸ್ವಾಮೀಜಿಗಳ ಸಮ್ಮುಖದಲ್ಲಿ ಸಿಎಂ ಆಗಿ ಪ್ರಮಾಣವಚನ ಸ್ವೀಕರಿಸಿದ ಉದಾಹರಣೆಗಳಿಲ್ಲ. ಹೀಗಾಗಿ ಡಿಕೆ ಶಿವಕುಮಾರ್ ಅವರೇ ಮೊದಲ ಬಾರಿಗೆ ಎಲ್ಲಾ ಧರ್ಮಗಳ ಸ್ವಾಮೀಜಿಗಳ ಸಮ್ಮುಖದಲ್ಲಿ ಪ್ರಮಾಣವಚನ ಸ್ವೀಕರಿಸುತ್ತಿದ್ದಾರೆ.

ಈ ಸಂಬಂಧ ಈಗಾಗಲೇ ಎಲ್ಲಾ ಧರ್ಮ, ಜಾತಿಗಳ ಸುಮಾರು 55 ಸ್ವಾಮೀಜಿಗಳಿಗೆ ಆಹ್ವಾನ ನೀಡಲು ಸೂಚನೆ ನೀಡಲಾಗಿದೆ. ಈ ಮೂಲಕ ಸರ್ವ ಧರ್ಮ ಸಹಿಷ್ಣುತೆ, ಪರಸ್ಪರ ಸಹಬಾಳ್ವೆ, ಶಾಂತಿ ಸೌಹಾರ್ದತೆಯ ಸಂದೇಶ ಸಾರಲು ಡಿಕೆಶಿ ಮುಂದಾಗಿದ್ದಾರೆ ಎನ್ನಲಾಗಿದೆ.

ಸಿಡಬ್ಲ್ಯೂಸಿ ಸದಸ್ಯರಾಗಿ ಸಿದ್ದರಾಮಯ್ಯ ನೇಮಕ



ನವದೆಹಲಿ: ಕಾಂಗ್ರೆಸ್ ಕಾರ್ಯಕಾರಿ ಸಮಿತಿ (ಸಿಡಬ್ಲ್ಯೂಸಿ) ಸದಸ್ಯರಾಗಿ ಸಿದ್ದರಾಮಯ್ಯ ಅವರನ್ನು ಕಾಂಗ್ರೆಸ್ ನೇಮಕ ಮಾಡಿದೆ.

ಸಿಡಬ್ಲ್ಯೂಸಿ ಕಾಂಗ್ರೆಸ್ ಪಕ್ಷದ ಉನ್ನತ ಮಟ್ಟದ ಸಮಿತಿ. ಅತ್ಯುನ್ನತ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಮಿತಿ ಇದಾಗಿದೆ. ದೇಶಾದ್ಯಂತ ಇರುವ ಪ್ರಮುಖ ನಾಯಕರನ್ನು ಈ ಸಮಿತಿಯಲ್ಲಿ ಸದಸ್ಯರಾಗಿಸಿದೆ. ಈ ಸಮಿತಿಯಲ್ಲಿ ಸಿದ್ದರಾಮಯ್ಯ ಅವರಿಗೆ ಅವಕಾಶ ನೀಡುವ ಮೂಲಕ ಕಾಂಗ್ರೆಸ್ ಬಡ್ತಿ ನೀಡಿದೆ.

ಅಗಸ್ತ್ಯಮಲ್ಲೈ ಒತ್ತುವರಿ ತೆರವಿಗೆ ಸುಪ್ರೀಂ ಆದೇಶ



ನವದೆಹಲಿ (ಪಿಟಿಐ): ತಮಿಳುನಾಡು ಮತ್ತು ಕೇರಳದಲ್ಲಿ ವ್ಯಾಪಿಸಿರುವ ಅಗಸ್ತ್ಯಮಲ್ಲೈ ಜೀವವೈವಿಧ್ಯ ಸಂರಕ್ಷಿತ ಪ್ರದೇಶದಲ್ಲಿನ ಒತ್ತುವರಿ ತೆರವಿಗೆ ಸುಪ್ರೀಂಕೋರ್ಟ್ ನಿರ್ದೇಶನ ನೀಡಿದೆ. ಒತ್ತುವರಿಯನ್ನು ಕಾಲಮಿತಿಯಲ್ಲಿ ತೆರವುಗೊಳಿಸುವ ಯೋಜನೆಯನ್ನು ಸಿದ್ಧಪಡಿಸಲು ಮತ್ತು ಆದ್ಯತೆಯ ಮೇರೆಗೆ ಅನುಷ್ಠಾನಗೊಳಿಸಲು ಸುಪ್ರೀಂಕೋರ್ಟ್ ಆದೇಶಿಸಿದೆ. ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಸಂದೀಪ್ ಮೆಹ್ತಾ ಅವರನ್ನು ಒಳಗೊಂಡ

■10ನೇ ಪುಟಕ್ಕೆ

ಪದಗ್ರಹಣಕ್ಕೂ ಮುನ್ನ ಗಾಂಧಿ ಕುಟುಂಬಕ್ಕೆ ಡಿಕೆಶಿ ಧನ್ಯವಾದ



ಬೆಂಗಳೂರು, ಜೂ.2– ನಿಯೋಜಿತ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪದಗ್ರಹಣಕ್ಕೂ ಮೊದಲು ಗಾಂಧಿ ಕುಟುಂಬಕ್ಕೆ ಧನ್ಯವಾದ ಅರ್ಪಿಸಿದ್ದಾರೆ.

ಮಂಗಳವಾರ ಎಕ್ಸ್ ಖಾತೆಯಲ್ಲಿ ಬರೆದಿರುವ ಡಿಕೆ ಶಿವಕುಮಾರ್, ತಮ್ಮ ರಾಜಕೀಯ ಪ್ರಯಾಣದಲ್ಲಿ ಗಾಂಧಿ ಕುಟುಂಬದ ಪಾತ್ರ ಮತ್ತು ಜೀವನದ ವಿವಿಧ ಹಂತಗಳಲ್ಲಿ ಅವರು ತಮ್ಮ ಮೇಲೆ ಇಟ್ಟಿದ್ದ ನಂಬಿಕೆಯನ್ನು ಸ್ಮರಿಸಿದ್ದಾರೆ.

ಕರ್ನಾಟಕ ಕಾಂಗ್ರೆಸ್ ಅಧ್ಯಕ್ಷರೂ ಆಗಿರುವ ಶಿವಕುಮಾರ್, ರಾಜ್ಯದ ಜನರ ಆಶೀರ್ವಾದದೊಂದಿಗೆ, ಮೌಲ್ಯಯುತ, ಪ್ರಗತಿಪರ ನಿಲುವು ಹೊಂದಿರುವ, ಎಲ್ಲರನ್ನೂ ಒಳಗೊಂಡ ಮತ್ತು ಸಮೃದ್ಧ ಕರ್ನಾಟಕವನ್ನು ನಿರ್ಮಿಸಲು ಪ್ರಾಮಾಣಿಕತೆ ಮತ್ತು ಬದ್ಧತೆಯೊಂದಿಗೆ ಕೆಲಸ ಮಾಡುವುದನ್ನು ಮುಂದುವರಿಸುತ್ತೇನೆ ಎಂದು ಹೇಳಿದರು.

ಮೇ 30 ರಂದು ಕರ್ನಾಟಕದಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾದ ನಂತರ ಜೂನ್ 3ರಂದು ಸಂಜೆ 4.05 ಕ್ಕೆ ಲೋಕಭವನದ ಆವರಣದಲ್ಲಿ ಸಚಿವ ಸಂಪುಟದ ಕೆಲವು ಸದಸ್ಯರೊಂದಿಗೆ ಡಿಕೆ ಶಿವಕುಮಾರ್ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಗಾಂಧಿ ಕುಟುಂಬ ನನ್ನ ರಾಜಕೀಯ ಪ್ರಯಾಣದಲ್ಲಿ

■10ನೇ ಪುಟಕ್ಕೆ

ಇಂದು ಪ್ರಮಾಣ ಮಾಡಲಿರುವ ಸಂಭವನೀಯ ಸಚಿವರ ಪಟ್ಟಿ...!

- ಡಿ.ಕೆ.ಶಿವಕುಮಾರ್
- ಡಾ. ಜಿ.ಪರಮೇಶ್ವರ್
- ಕೆ.ಜೆ.ಜಾರ್ಜ್
- ಪ್ರಿಯಾಂಕ್ ಖರ್ಗೆ
- ಎಂ.ಬಿ.ಪಾಟೀಲ್
- ಸತೀಶ್ ಜಾರಕಿಹೊಳಿ
- ಕೃಷ್ಣಬೈರೇಗೌಡ
- ರಾಮಲಿಂಗಾ ರೆಡ್ಡಿ
- ಯು.ಟಿ.ಖಾದರ್
- ಚೆಲುವರಾಯಸ್ವಾಮಿ
- ಭೈರತಿ ಸುರೇಶ್
- ಡಾ. ಯತೀಂದ್ರ ಸಿದ್ದರಾಮಯ್ಯ
- ಮುನಿಯಪ್ಪ/ರೂಪಕಲಾ



ಲೋಕಭವನದಿಂದ ವಿಧಾನಸೌಧದವರೆಗೆ ರಾರಾಜಿಸುತ್ತಿರುವ ಕಾಂಗ್ರೆಸ್ ಬಾವುಟ.

ಮೈಸೂರು ಮಿತ್ರ

ಶಾಸಕ ಜಿ.ಟಿ.ದೇವೇಗೌಡರ ಕುಟುಂಬ ಭೇಟಿಯಾದ ದುರ್ಗಾ ಸ್ಟಾಲಿನ್

●ಆತ್ಮೀಯವಾಗಿ ಬರಮಾಡಿಕೊಂಡು ಸತ್ಕಾರ ●ದುರ್ಗಾ ಅವರ ಸರಳತೆಗೆ ಮಾರು ಹೋದ ಜಿಟಿಡಿ ಕುಟುಂಬದ ಸದಸ್ಯರು



ಮೈಸೂರಿನ ವಿವಿ ಮೊಹಲ್ಲಾದಲ್ಲಿರುವ ಶಾಸಕ ಜಿ.ಟಿ.ದೇವೇಗೌಡ ಅವರ ನಿವಾಸಕ್ಕೆ ತಮಿಳುನಾಡು ಮಾಜಿ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರ ಪತ್ನಿ ದುರ್ಗಾ ಸ್ಟಾಲಿನ್ ಭೇಟಿ ನೀಡಿದ್ದರು. ಚಿತ್ರದಲ್ಲಿ ಜಿ.ಟಿ.ದೇವೇಗೌಡರ ಪುತ್ರಿ ಅನ್ನಪೂರ್ಣ, ದುರ್ಗಾ ಸ್ಟಾಲಿನ್ ಅವರ ಸಹೋದರಿ ಜಯಂತಿ, ಲಲಿತಾ ಜಿ.ಟಿ.ದೇವೇಗೌಡ, ತಿರುವಲ್ಲೂರು ಮಾಜಿ ಶಾಸಕ ರಾಜೇಂದ್ರನ್ ಅವರ ಪತ್ನಿ ಇಂದಿರಾ ರಾಜೇಂದ್ರನ್, ಜಿಟಿಡಿ ಅವರ ಅಳಿಯ ವಿಶ್ವೇಶ್ವರಯ್ಯ(ಬಾಬಣ್ಣ) ಅವರನ್ನು ಕಾಣಬಹುದು.

ಮೈಸೂರು, ಜೂ.2(ಎಂಟಿವೈ)– ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರ ಪತ್ನಿ ದುರ್ಗಾ ಸ್ಟಾಲಿನ್ ಅವರು ಚಾಮುಂಡಿಬೆಟ್ಟ ಹಾಗೂ ನಿಮಿಷಾಂಬ ದೇಗುಲಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದ ಬಳಿಕ ಮಾಜಿ ಸಚಿವರೂ ಆದ ಜಿ.ಟಿ.ದೇವೇಗೌಡ ಅವರ ಮೈಸೂರಿನ ನಿವಾಸಕ್ಕೆ ಭೇಟಿ ನೀಡಿ, ಕೆಲಕಾಲ ಸೌಹಾರ್ದಯುತ ಮಾತುಕತೆ ನಡೆಸಿದರು.

ಕೊಡಗು ಜಿಲ್ಲೆಯ ಪ್ರವಾಸದಲ್ಲಿದ್ದ ತಮಿಳುನಾಡು ಮಾಜಿ ಮುಖ್ಯಮಂತ್ರಿ ಸ್ಟಾಲಿನ್ ಅವರ ಪತ್ನಿ ದುರ್ಗಾ ಸ್ಟಾಲಿನ್, ಅವರ ಸಹೋದರಿ ಜಯಂತಿ, ತಿರುವಲ್ಲೂರು ಮಾಜಿ ಶಾಸಕ ರಾಜೇಂದ್ರನ್ ಅವರ ಪತ್ನಿ ಇಂದಿರಾ ರಾಜೇಂದ್ರನ್ ಹಾಗೂ ಸಹಾಯಕ ರಾಜ್‌ಕುಮಾರ್ ಅವರೊಂದಿಗೆ ಸೋಮವಾರ ಬೆಳಗ್ಗೆ ಕೊಡಗಿನಿಂದ ಮೈಸೂರಿಗೆ ಆಗಮಿಸಿದ ದುರ್ಗಾ ಸ್ಟಾಲಿನ್ ಅವರು ಮಾಜಿ ಸಚಿವ ಜಿ.ಟಿ.ದೇವೇಗೌಡ ಅವರ ಪುತ್ರಿ ಅನ್ನಪೂರ್ಣ ಅವರಿಗೆ ಕರೆ ಮಾಡಿದ್ದಾರೆ. ಹೆಬ್ಬಾಳು ರಿಂಗ್ ರಸ್ತೆಯ ಹೋಟೆಲ್‌ವೊಂದರಲ್ಲಿ ಅನ್ನಪೂರ್ಣ ಅವರೊಂದಿಗೆ ದುರ್ಗಾ ಸ್ಟಾಲಿನ್ ಹಾಗೂ ಇನ್ನಿತರರು ಉಪಹಾರ ಸೇವಿಸಿದ್ದಾರೆ.

ಟೆಂಪಲ್ ರನ್: ಬಳಿಕ ಶ್ರೀರಂಗಪಟ್ಟಣದ ನಿಮಿಷಾಂಬ ದೇವಾಲಯಕ್ಕೆ ತೆರಳಿ ದೇವಿಯ ದರ್ಶನ ಪಡೆದಿದ್ದಾರೆ. ನಂತರ ಚಾಮುಂಡಿಬೆಟ್ಟಕ್ಕೆ ಬಂದು ನಾಡದೇವಿಯ ದರ್ಶನವನ್ನೂ ಮಾಡಿದ್ದಾರೆ. ಮಧ್ಯಾಹ್ನ 1.30ಕ್ಕೆ ರ್‍ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲ್‌ನಲ್ಲಿ ಊಟ ಮಾಡಿದ ನಂತರ ಮೈಸೂರಿನ ವಿವಿ ಮೊಹಲ್ಲಾದಲ್ಲಿರುವ ಜಿ.ಟಿ.ದೇವೇಗೌಡರ ನಿವಾಸಕ್ಕೆ ಆಗಮಿಸಿದರು. ಈ ವೇಳೆ ಜಿ.ಟಿ.ದೇವೇಗೌಡರು ಹಾಗೂ ಲಲಿತಾ ಜಿ.ಟಿ.ದೇವೇಗೌಡ ದಂಪತಿ ದುರ್ಗಾ ಸ್ಟಾಲಿನ್ ಅವರನ್ನು ಆತ್ಮೀಯವಾಗಿ ಬರಮಾಡಿಕೊಂಡು ಸತ್ಕರಿಸಿದ್ದಾರೆ.

ಇದಕ್ಕೆ ಪ್ರತಿಯಾಗಿ ದುರ್ಗಾ ಸ್ಟಾಲಿನ್ ಅವರು ಜಿ.ಟಿ.ದೇವೇಗೌಡರನ್ನು ಅಭಿನಂದಿಸಿದರು. ಸಂಜೆವರೆಗೂ ಜಿ.ಟಿ.ದೇವೇಗೌಡ ಅವರ ನಿವಾಸದಲ್ಲಿಯೇ ಕಾಲ ಕಳೆದು, ಮಂಡಕಳ್ಳಿ ವಿಮಾನ ನಿಲ್ದಾಣದ ಮೂಲಕ ಸಂಜೆ 7 ಗಂಟೆಗೆ ವಿಮಾನದಲ್ಲಿ ಚೆನ್ನೈಗೆ ಪ್ರಯಾಣ ಬೆಳೆಸಿದ್ದಾರೆ.

ಜಿಟಿಡಿ ಕುಟುಂಬದೊಡನೆ ಸ್ನೇಹ ಬೆಸುಗೆ: ತಮಿಳುನಾಡು ಮಾಜಿ ಸಿಎಂ, ಡಿಎಂಕೆ ಅಧ್ಯಕ್ಷ ಎಂ.ಕೆ.ಸ್ಟಾಲಿನ್ ಕುಟುಂಬಕ್ಕೂ ಮಾಜಿ ಸಚಿವ ಜಿ.ಟಿ. ದೇವೇಗೌಡರ ಕುಟುಂಬಕ್ಕೂ 6–7 ವರ್ಷದಿಂದ ಸ್ನೇಹ ಬೆಸೆದುಕೊಂಡಿದೆ. ಜಿ.ಟಿ.ದೇವೇಗೌಡರ ಪುತ್ರಿ ಅನ್ನಪೂರ್ಣ, ಅಳಿಯ ವಿಶ್ವೇಶ್ವರಯ್ಯ(ಬಾಬಣ್ಣ) ಕುಟುಂಬಕ್ಕೆ ಸ್ಟಾಲಿನ್ ಕುಟುಂಬ ಹತ್ತಿರವಾಗಿದೆ. ಅನ್ನಪೂರ್ಣ ಅವರ ಪತಿಯ ಉದ್ಯಮಕ್ಕೆ ಆಡಿಟರ್ ಆಗಿರುವವರು ಸ್ಟಾಲಿನ್ ಕುಟುಂಬದ ಸದಸ್ಯರು. ಅವರ ಮೂಲಕ ಜಿಟಿಡಿ ಕುಟುಂಬ ಪರಿಚಯವಾಗಿದೆ. ಕಳೆದ 6–7 ವರ್ಷದ ಹಿಂದೆ ಆದ ಪರಿಚಯ ಮುಂದುವರೆದಿದ್ದು, ಮೈಸೂರು ಹಾಗೂ ಕರ್ನಾಟಕದ ಯಾವುದಾದರೂ ದೇವಾಲಯಕ್ಕೆ ಸ್ಟಾಲಿನ್ ಕುಟುಂಬ ಬರಬೇಕಾದರೆ ಜಿಟಿಡಿ ಪುತ್ರಿ ಅನ್ನಪೂರ್ಣ ಅವರನ್ನು ಸಂಪರ್ಕಿಸಲಿದೆ. ಅನ್ನಪೂರ್ಣ ಅವರು ದುರ್ಗಾ ಸ್ಟಾಲಿನ್ ಅವರನ್ನು ದೇವಾಲಯಕ್ಕೆ ಕರೆದುಕೊಂಡು ಹೋಗಿ ಅಲ್ಲಿನ ವಿಶೇಷತೆ ತಿಳಿಸಿಕೊಡುತ್ತಾ ಬಂದಿದ್ದಾರೆ.

ಮಹಾ ದೈವ ಭಕ್ತರು: 'ಮೈಸೂರು ಮಿತ್ರ'ನೊಂದಿಗೆ ಜಿಟಿಡಿ ಪುತ್ರಿ ಅನ್ನಪೂರ್ಣ ಮಾತನಾಡಿ, ದುರ್ಗಾ ಸ್ಟಾಲಿನ್ ಅವರು ಮಹಾ ದೈವ ಭಕ್ತರು. ಕರ್ನಾಟಕಕ್ಕೆ ಬರುವ 3–4 ದಿನ ಮೊದಲೇ ನನಗೆ ಮಾಹಿತಿ ನೀಡುತ್ತಾರೆ. ಕೊಡಗು ಜಿಲ್ಲೆಯ ಪ್ರವಾಸಕ್ಕೆ ಬಂದಿದ್ದ ಅವರು 3 ದಿನದ ಹಿಂದೆ ಚಾಮುಂಡಿಬೆಟ್ಟಕ್ಕೆ ಭೇಟಿ ನೀಡುವ ಇಂಗಿತ ವ್ಯಕ್ತಪಡಿಸಿದ್ದರು. ಅದರಂತೆ ಸೋಮವಾರ ಬೆಳಗ್ಗೆ ಬಂದ ದುರ್ಗಾ ಸ್ಟಾಲಿನ್ ಅವರನ್ನು ನಿಮಿಷಾಂಬ ದೇವಾಲಯ ಹಾಗೂ ಚಾಮುಂಡಿಬೆಟ್ಟಕ್ಕೆ ಕರೆದೊಯ್ದು ದೇವರ ದರ್ಶನ ಪಡೆಯಲು ವ್ಯವಸ್ಥೆ ಮಾಡಿರುವುದಾಗಿ ತಿಳಿಸಿದರು.

ಸಾಮಾನ್ಯರಂತೆ ಬರಲು ಬಯಸುತ್ತಾರೆ: ದುರ್ಗಾ ಸ್ಟಾಲಿನ್ ಅವರು ಸಾಮಾನ್ಯರಲ್ಲಿ ಸಾಮಾನ್ಯರಂತೆ ದೇವಾಲಯಕ್ಕೆ ಬರಲು ಇಚ್ಛಿಸುತ್ತಾರೆ. ಯಾವುದೇ ಬೆಂಗಾವಲು ಪಡೆಯಿಲ್ಲದೆ ದೇವಾಲಯಕ್ಕೆ ಬಂದು ದೇವಾಲಯದ ಇತಿಹಾಸ ಹಾಗೂ ಅದರ ಮಾಹಿತಿ ಪಡೆದುಕೊಳ್ಳಲು ಬಯಸುತ್ತಾರೆ. ಎಂ.ಕೆ.ಸ್ಟಾಲಿನ್ ಅವರು ಮುಖ್ಯಮಂತ್ರಿಯಾಗಿದ್ದ ವೇಳೆಯೂ ದುರ್ಗಾ ಸ್ಟಾಲಿನ್ ಅವರು ಸಾಮಾನ್ಯರಂತೆ ಚಾಮುಂಡಿಬೆಟ್ಟ, ಉತ್ತನಹಳ್ಳಿಯ ಜ್ವಾಲಾಮುಖಿ ತ್ರಿಪುರ ಸುಂದರಿ ದೇವಿಯ ದೇವಾಲಯಕ್ಕೆ ಭೇಟಿ ನೀಡಿದ್ದರು. ಕೊಲ್ಲೂರು ದೇವಾಲಯಕ್ಕೆ ಕಳೆದ ವರ್ಷ ಒಂದು ಕೆಜಿ ಚಿನ್ನದ ಕಿರೀಟ ಕೊಡುಗೆ ನೀಡಿದ್ದರು ಎಂದು ವಿವರಿಸಿದರು.

ರಾಜಕೀಯದ ಮಾತಿಲ್ಲ, ಕೇವಲ ಸ್ನೇಹ, ಪ್ರೀತಿ ವಿಶ್ವಾಸದ ಮಾತು: ಮೈಸೂರಿಗೆ ಬಂದ ದುರ್ಗಾ ಸ್ಟಾಲಿನ್ ಅವರನ್ನು ವಿವಿ ಮೊಹಲ್ಲಾದಲ್ಲಿರುವ ಅಪ್ಪಾಜಿ (ಜಿಟಿಡಿ) ಅವರ ಮನೆಗೆ ಕರೆದುಕೊಂಡು ಹೋದೆ. ಮನೆಯಲ್ಲಿದ್ದಾಗ ದುರ್ಗಾ ಅವರು ರಾಜಕೀಯದ ಬಗ್ಗೆ ಮಾತಾಡಲಿಲ್ಲ. ಅಪ್ಪಾಜಿ ಕುರಿತು 'ರಾಜಕೀಯದಲ್ಲಿ ನೀವು ಹಾಲಿ, ನಾವು ಮಾಜಿ' ಎಂದಷ್ಟೇ ಹೇಳಿದರು. ಇದಕ್ಕೆ ಅಪ್ಪಾಜಿ 'ಮುಂದಿನ ದಿನಗಳಲ್ಲಿ ನಿಮಗೂ ಒಳ್ಳೆಯದಾಗಲಿದೆ' ಎಂದರು.

ಮೈಸೂರು ರೇಷ್ಮೆ ಸೀರೆ ಖರೀದಿಸಿದ ದುರ್ಗಾ ಸ್ಟಾಲಿನ್

ಜಿ.ಟಿ.ದೇವೇಗೌಡರ ಮನೆಯಿಂದ ಕೆಎಸ್‌ಐಸಿಗೆ ಬಂದ ದುರ್ಗಾ ಸ್ಟಾಲಿನ್ ಅವರು ಮೈಸೂರು ರೇಷ್ಮೆ ಸೀರೆ ಖರೀದಿಸಿದ್ದಾರೆ. ಈ ಹಿಂದೆಯೇ ಮೈಸೂರು ರೇಷ್ಮೆ ಖರೀದಿಸಿದ್ದರು. ಈ ಬಾರಿಯೂ ಕೆಎಸ್‌ಐಸಿಗೆ ಭೇಟಿ ನೀಡುವ ಇಂಗಿತ ವ್ಯಕ್ತಪಡಿಸಿದರು. ಅದರಂತೆ ಸೋಮವಾರ ಕೆಎಸ್‌ಐಸಿಗೆ ತೆರಳಿ ರೇಷ್ಮೆ ಸೀರೆ ಖರೀದಿಸಿದ್ದಾರೆ.

ಮಗನಿಗೆ ಬೇಡವಾದ 'ಸನಾತನ ಧರ್ಮ'ದಲ್ಲಿ ತಾಯಿಗೆ ಅಪಾರ ಭಕ್ತಿ!

●ಡಿಎಂಕೆ ನಾಯಕ ಉದಯನಿಧಿ ಸ್ಟಾಲಿನ್ ತಾಯಿ ದುರ್ಗಾ ಸ್ಟಾಲಿನ್ ಟೆಂಪಲ್ ರನ್
●ಚಾಮುಂಡಿಬೆಟ್ಟ ಸೇರಿ ಮೈಸೂರಿನ ಸುತ್ತಮುತ್ತಲ ದೇವಾಲಯಗಳಿಗೆ ಭೇಟಿ



ತಮಿಳುನಾಡು ಮಾಜಿ ಸಿಎಂ ಎಂ.ಕೆ.ಸ್ಟಾಲಿನ್ ಅವರ ಪತ್ನಿ ದುರ್ಗಾ ಸ್ಟಾಲಿನ್ ಚಾಮುಂಡಿಬೆಟ್ಟದಲ್ಲಿ ಚಾಮುಂಡೇಶ್ವರಿಗೆ ಪ್ರಾರ್ಥನೆ ಸಲ್ಲಿಸಿದರು.

ಮೈಸೂರು, ಜೂ.2(ಎಂಟಿವೈ)–ತಮಿಳುನಾಡು ಮಾಜಿ ಮುಖ್ಯಮಂತ್ರಿ ಮತ್ತು ದ್ರಾವಿಡ ಮುನ್ನೇತ್ರ ಕಳಗಂ (ಡಿಎಂಕೆ) ಅಧ್ಯಕ್ಷ ಎಂ.ಕೆ.ಸ್ಟಾಲಿನ್ ಅವರ ಪತ್ನಿ ದುರ್ಗಾ ಸ್ಟಾಲಿನ್ ಮೈಸೂರಿನ ಸುತ್ತಮುತ್ತಲ ದೇವಾಲಯಗಳಿಗೆ ಭೇಟಿ ನೀಡಿದ್ದರು.

ಆದರೆ ಎಂ.ಕೆ.ಸ್ಟಾಲಿನ್ ಮತ್ತು ದುರ್ಗಾ ಸ್ಟಾಲಿನ್ ದಂಪತಿ ಪುತ್ರ ಹಾಗೂ ತಮಿಳುನಾಡಿನ ಮಾಜಿ ಡಿಸಿಎಂ ಉದಯನಿಧಿ ಸ್ಟಾಲಿನ್ ಅವರು ಸನಾತನ ಧರ್ಮದ ಬಗ್ಗೆ ನೀಡಿದ ಹೇಳಿಕೆಗಳು ವಿವಾದದ ಕೇಂದ್ರ ಬಿಂದು ಆಗಿರುವುದು ಗಮನಾರ್ಹ.

ಕೊಡಗಿನಿಂದ ಆಗಮಿಸಿದ ದುರ್ಗಾ ಅವರೊಂದಿಗೆ ಅವರ ಸಹೋದರಿ ಜಯಂತಿ, ಮಾಜಿ ಶಾಸಕ ರಾಜೇಂದ್ರನ್ ಅವರ ಪತ್ನಿ ಇಂದಿರಾ ರಾಜೇಂದ್ರನ್ ಮತ್ತು ಅವರ ಸಹಾಯಕ ರಾಜ್‌ಕುಮಾರ್ ಇದ್ದರು. ಈ ಎಲ್ಲರೂ ದೇವಾಲಯಗಳಿಗೆ ಭೇಟಿ ನೀಡಿದ್ದರು. ಮೊದಲಿಗೆ ಶ್ರೀರಂಗಪಟ್ಟಣದ ನಿಮಿಷಾಂಬ ದೇವಸ್ಥಾನಕ್ಕೆ ಭೇಟಿ ನೀಡಿ ನಂತರ ಚಾಮುಂಡಿಬೆಟ್ಟಕ್ಕೆ ತೆರಳಿ, ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಪ್ರಾರ್ಥನೆ ಸಲ್ಲಿಸಿದರು. ಸನಾತನ ಧರ್ಮವನ್ನು ಪದೇ ಪದೇ ಟೀಕಿಸುವ ಉದಯನಿಧಿ ಸ್ಟಾಲಿನ್ ಹೆಸರಿನಲ್ಲಿ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದ್ದು ಗಮನಾರ್ಹ.

ತಮಿಳುನಾಡಿನಲ್ಲಿ ಡಿಎಂಕೆ ಪಕ್ಷವನ್ನು ಮುನ್ನಡೆಸುತ್ತಿರುವ ಮಾಜಿ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಇತ್ತೀಚೆಗೆ ಇಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಸೋಲನನುಭವಿಸಿದ್ದು, ಅವರ ಪಕ್ಷ ಅಧಿಕಾರ ಕಳೆದುಕೊಂಡಿದೆ. ಚುನಾವಣೆಗೂ ಮುನ್ನ ಎಂ.ಕೆ.ಸ್ಟಾಲಿನ್ ಪುತ್ರ ಉದಯನಿಧಿ ಸ್ಟಾಲಿನ್ ಕೆಲವು ವೇದಿಕೆಗಳಲ್ಲಿ ಸನಾತನ ಧರ್ಮದ ವಿರುದ್ಧ ಕಿಡಿಕಾರಿದರಲ್ಲದೆ, ಭೂಮಿಯ ಮೇಲಿಂದ ಸನಾತನ ಧರ್ಮವನ್ನು ಕಿತ್ತೊಗೆಯುವ, ನಾಶ ಮಾಡಬೇಕೆಂದು ಅಬ್ಬರಿಸಿದ್ದರು.

ಉದಯನಿಧಿ ಸ್ಟಾಲಿನ್ ಅವರ ಸನಾತನ ಧರ್ಮ ವಿರೋಧಿ ಹೇಳಿಕೆಗೆ ದೇಶದಾದ್ಯಂತ ವ್ಯಾಪಕ ಟೀಕೆ ವ್ಯಕ್ತವಾಗಿತ್ತು. ಅಲ್ಲದೆ ಹಿಂದೂಪರ ಸಂಘಟನೆಗಳ ಮುಖಂಡರು ಉದಯನಿಧಿ ಹೇಳಿಕೆಯನ್ನು ಕಟು ಶಬ್ದಗಳಿಂದ ಟೀಕಿಸಿದ್ದರಲ್ಲದೆ, ಸನಾತನ ಧರ್ಮವನ್ನು ಅಳಿಸಲು ಸಾಧ್ಯವಾಗುವುದಿಲ್ಲ ಎಂದು ಬಹಿರಂಗ ಸವಾಲು ಹಾಕಿದ್ದರು.

ಸನಾತನ ಧರ್ಮ ವಿರೋಧಿ ಹೇಳಿಕೆ ಇನ್ನೂ ಚರ್ಚೆಯಲ್ಲಿರುವಾಗಲೇ ತಮಿಳುನಾಡಿನ ಮಾಜಿ ಸಿಎಂ ಎಂ.ಕೆ.ಸ್ಟಾಲಿನ್ ಅವರ ಪತ್ನಿ ಹಾಗೂ ಮಾಜಿ ಉಪಮುಖ್ಯಮಂತ್ರಿ ಉದಯನಿಧಿ ಸ್ಟಾಲಿನ್ ಅವರ ತಾಯಿ ದುರ್ಗಾ ಸ್ಟಾಲಿನ್ ಅವರು ಸನಾತನ ಧರ್ಮದ ಸಂದೇಶ ಸಾರುವ ದೇವಾಲಯಗಳಿಗೆ ಭೇಟಿ ನೀಡಿದ್ದು, ಸನಾತನ ಧರ್ಮವನ್ನೇ ಆರಾಧಿಸುವ ಮೂಲಕ ತಮಗಿರುವ ಭಕ್ತಿಯನ್ನು ಅನಾವರಣಗೊಳಿಸಿದ್ದಾರೆ.

ದುರ್ಗಾ ಸ್ಟಾಲಿನ್ ಅವರು ಕೇವಲ ತೋರಿಕೆಗಷ್ಟೇ ಸನಾತನ ಧರ್ಮದ ದೇವಾಲಯಗಳಿಗೆ ಭೇಟಿ ನೀಡುತ್ತಿಲ್ಲ. ಹಿಂದಿನಿಂದಲೂ ಅವರೊಬ್ಬ ಅಪ್ಪಟ ದೈವ ಭಕ್ತರಾಗಿದ್ದು, ಹಲವು ದೇವಾಲಯಗಳಿಗೆ ಭೇಟಿ ನೀಡುವ ಮೂಲಕ ಸನಾತನ ಧರ್ಮದ ಆಶಯವನ್ನು ಪಾಲಿಸುತ್ತಿದ್ದಾರೆ. ಕೊಡಗು ಪ್ರವಾಸಕ್ಕೆ ಬಂದಿದ್ದ ಸ್ಟಾಲಿನ್ ಕುಟುಂಬದಲ್ಲಿ ದುರ್ಗಾ ಸ್ಟಾಲಿನ್ ಅವರು ಸೋಮವಾರ ಶ್ರೀರಂಗಪಟ್ಟಣದ ನಿಮಿಷಾಂಬ ದೇವಾಲಯ, ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಾಲಯಕ್ಕೆ ಭೇಟಿ ನೀಡಿದ್ದರು.

ಕಳೆದ ವರ್ಷವೂ ಚಾಮುಂಡಿಬೆಟ್ಟ ಮತ್ತು ಉತ್ತನಹಳ್ಳಿಯ ಜ್ವಾಲಾಮುಖಿ ತ್ರಿಪುರ ಸುಂದರಿ ದೇವಾಲಯಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದ್ದರು. ಅಲ್ಲದೆ ಕೊಲ್ಲೂರು ಮೂಕಾಂಬಿಕೆ ದೇವಾಲಯಕ್ಕೆ ತೆರಳಿ 1 ಕೆ.ಜಿ. ತೂಕದ ಚಿನ್ನದ ಕಿರಿಟವನ್ನು ಕೊಡುಗೆಯಾಗಿ ದೇವಿಗೆ ಸಮರ್ಪಿಸಿದ್ದರು.

ಇದೀಗ ಸಾಮಾಜಿಕ ಜಾಲತಾಣ ಮಾತ್ರವಲ್ಲದೆ, ವಿವಿಧ ವೇದಿಕೆಗಳಲ್ಲಿ ಹಿಂದೂಪರ ಸಂಘಟನೆಗಳ ಕಾರ್ಯಕರ್ತರು ಮತ್ತು ಮುಖಂಡರು ಉದಯನಿಧಿ ಸ್ಟಾಲಿನ್ ಅವರಿಗೆ ಚಾಟಿ ಬೀಸುತ್ತಿದ್ದು, ಸನಾತನ ಧರ್ಮದ ಶಕ್ತಿ ಏನೆಂಬುದು ನಿಮ್ಮ ತಾಯಿ (ದುರ್ಗಾ ಸ್ಟಾಲಿನ್) ಅವರಿಗೆ ತಿಳಿದಿದೆ. ಅವರಿಂದ ನೀವು ಸನಾತನ ಧರ್ಮದ ಬಗ್ಗೆ ತಿಳಿದುಕೊಳ್ಳುವುದು ಸಾಕಷ್ಟಿದೆ. ಇನ್ನಾದರೂ ಸನಾತನ ಧರ್ಮದ ವಿರುದ್ಧ ಮಾತನಾಡುವುದನ್ನು ನಿಲ್ಲಿಸಬೇಕು. ಇಲ್ಲದಿದ್ದರೆ ಶಕ್ತಿ ದೇವತೆಯ ಅವಕೃಪೆ ನಿಮ್ಮ ಮೇಲೆ ಮುಂದುವರೆಯುತ್ತದೆ. ಈಗಾಗಲೇ ಸನಾತನ ಧರ್ಮವನ್ನು ಟೀಕಿಸಿದ್ದಕ್ಕೆ ತಮಿಳು ನಾಡಿನ ಜನತೆ ತಕ್ಕ ಪ್ರತ್ಯುತ್ತರ ನೀಡಿದ್ದಾರೆ ಎಂದು ಕಿಡಿಕಾರಿದ್ದಾರೆ.

ಗಣಪತಿ ಸಚ್ಚಿದಾನಂದ ಸ್ವಾಮೀಜಿಗಳ ಸನ್ಮಾನ...



ಮೈಸೂರಿನ ಅವಧೂತ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರು 84ನೇ ಸಂವತ್ಸರಕ್ಕೆ ಕಾಲಿಟ್ಟ ಹಿನ್ನೆಲೆಯಲ್ಲಿ ಅವರನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಪರವಾಗಿ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಸನ್ಮಾನಿಸಿದರು. ಈ ವೇಳೆ ರಂಗಕರ್ಮಿ ರಾಜಶೇಖರ ಕದಂಬ, ಪರಿಷತ್ ಮಾಜಿ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ, ಕವಿ ಜಯಪ್ಪ ಹೊನ್ನಾಳಿ, ಮೂಗೂರು ನಂಜುಂಡಸ್ವಾಮಿ, ಅನಂತು, ಲತಾ ಮೋಹನ್, ರಂಗನಾಥ ಮೈಸೂರು ಮತ್ತಿತರರಿದ್ದರು.

ಮೈಸೂರು ನಗರ ವೀರಶೈವ ಮಹಾಸಭೆ ನೂತನ ಅಧ್ಯಕ್ಷ ಶರಣ ಪ್ರಕಾಶ್‌ಗೆ ಅಭಿನಂದನೆ

ಮೈಸೂರು, ಜೂ.2– ಮೈಸೂರು ನಗರ ವೀರಶೈವ ಮಹಾಸಭೆಯ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಶರಣ ಪ್ರಕಾಶ್ ಅವರನ್ನು ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯ ಕೆ.ಪಿ.ಮಾದೇಶ್, ಮೈಸೂರಿನ ಕುವೆಂಪುನಗರದಲ್ಲಿರುವ ಅವರ ನಿವಾಸದಲ್ಲಿ ಅಭಿನಂದಿಸಿ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಜೆಎಸ್‌ಎಸ್ ಸಂಸ್ಥೆಯ ಆಡಳಿತಾಧಿಕಾರಿ ಜಿ.ಎಲ್. ತ್ರಿಪುರಾಂತಕ ಕಾರ್ಯಕ್ರಮದ ಕುರಿತು ಪ್ರಸ್ತಾವಿಕವಾಗಿ ಮಾತನಾಡಿ, ನೂತನ ಅಧ್ಯಕ್ಷರ ಆಯ್ಕೆಯು ಮಹಾಸಭೆಯ ಸಂಘಟನಾ ಚಟುವಟಿಕೆಗಳಿಗೆ ಹೊಸ ಚೈತನ್ಯ ಮತ್ತು ಕ್ರಿಯಾಶೀಲತೆಯನ್ನು ನೀಡಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ದುಗ್ಗಟ್ಟಿ ರಾಜೇಶ್, ಶರಣ ಪ್ರಕಾಶ್ ವಿದ್ಯಾರ್ಥಿದೆಸೆಯಿಂದಲೇ ಉತ್ತಮ ಸಂಘಟನಾ ಚಾತುರ್ಯ ಹಾಗೂ ನಾಯಕತ್ವ ಗುಣಗಳನ್ನು ಬೆಳೆಸಿಕೊಂಡಿದ್ದಾರೆ. ಸಮಾಜಮುಖಿ ಚಿಂತನೆ ಮತ್ತು ಸಂಘಟನಾ ಕೌಶಲ್ಯದಿಂದ ಎಲ್ಲರನ್ನು ಒಗ್ಗೂಡಿಸಿಕೊಂಡು ಸಾಗುವ ಗುಣ ಅವರಲ್ಲಿದೆ. ಅವರ ಅಧ್ಯಕ್ಷತೆಯಲ್ಲಿ ಮಹಾಸಭೆ ಮತ್ತಷ್ಟು ಬಲಿಷ್ಠವಾಗಿ ಬೆಳೆಯಲಿದೆ ಎಂದು ವಿಶ್ವಾಸ ವ್ಯಕ್ತ ಪಡಿಸಿದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯ ಕೇಂದ್ರ ಸಮಿತಿ ಸದಸ್ಯ ಎಚ್.ಎಸ್.ಮಹದೇವ ಸ್ವಾಮಿ (ಎನ್ ರಿಚ್) ಮಾತನಾಡಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯು ಶತಮಾನದ ಇತಿಹಾಸ ಮತ್ತು ಪರಂಪರೆಯನ್ನು ಹೊಂದಿರುವ ಪ್ರತಿಷ್ಠಿತ ಸಂಸ್ಥೆಯಾಗಿದೆ. ಮಹಾಸಭೆಯ ಆಶ್ರಯದಲ್ಲಿ ಇದುವರೆಗೆ ಸುಮಾರು 24 ಅಧಿವೇಶನಗಳು ಯಶಸ್ವಿಯಾಗಿ ನಡೆದಿದ್ದು, ಪ್ರತಿಯೊಂದು ಅಧಿವೇಶನದಲ್ಲಿಯೂ ಲಿಂಗಾಯತ ಧರ್ಮದ ಸ್ವತಂತ್ರ ಅಸ್ತಿತ್ವ ಹಾಗೂ ಅದಕ್ಕೆ ಸಂವಿಧಾನಾತ್ಮಕ ಮಾನ್ಯತೆ ದೊರಕಬೇಕೆಂಬ ಆಶಯವನ್ನು ಪ್ರತಿಪಾದಿಸಲಾಗಿದೆ. ಸಂವಿಧಾನಾತ್ಮಕ ಮಾನ್ಯತೆ ದೊರೆಯುವುದು ಮಾತ್ರ ಬಾಕಿಯಿದೆ ಎಂದು ತಿಳಿಸಿದರು.

ಇದೇ ವೇಳೆ ಕೇಂದ್ರ ಸಮಿತಿ ಸದಸ್ಯರಾದ ಮಹದೇವಸ್ವಾಮಿ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ ಮೂಗೂರು ನಂಜುಂಡಸ್ವಾಮಿ ಬಾಬು ಪ್ರಸಾದ್, ಮೂಗೂರು ವಿಜಯ್, ಶಿವಕುಮಾರ್, ಸುಬ್ಬಣ್ಣ, ಕೆ.ಬಿ.ಜಯಣ್ಣ, ಸುರೇಶ್, ಮುರಳಿ ನಟೇಶ್, ವೇದಮೂರ್ತಿ, ಯೋಗೀಶ್, ಕೆ.ಪಿ.ಗಿರೀಶ್, ಮಹದೇವ ಸ್ವಾಮಿ ಹಲವಾರು ಗಣ್ಯರು ಉಪಸ್ಥಿತರಿದ್ದರು.



ಮೈಸೂರು ನಗರ ವೀರಶೈವ ಮಹಾಸಭೆ ನೂತನ ಅಧ್ಯಕ್ಷ ಶರಣ ಪ್ರಕಾಶ್ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು.

ನಾಳೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಅದ್ಧೂರಿ ಜಯಂತ್ಯೋತ್ಸವ



ಮೈಸೂರಿನ ತ್ಯಾಗರಾಜ ಅರಸ್ ರಸ್ತೆಯ ಅರಸು ಮಂಡಳಿ ಸಂಘದಲ್ಲಿ ಮಂಗಳವಾರ ಸಂಘದ ಅಧ್ಯಕ್ಷ ಎಂ.ಎ.ಶ್ರೀಕಾಂತರಾಜೇ ಅರಸ್ ಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಜೂ.2(ಬಿಎಲ್‌ಯು)– ಮೈಸೂರು ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 142 ನೇ ಜಯಂತ್ಯೋತ್ಸವವನ್ನು ಜೂನ್ 4 ರಂದು ಅದ್ಧೂರಿಯಾಗಿ ಆಚರಿಸಲಾಗುವುದು ಎಂದು ಮೈಸೂರು ಅರಸು ಮಂಡಳಿ ಸಂಘದ ಅಧ್ಯಕ್ಷ ಎಂ.ಎ. ಶ್ರೀಕಾಂತ ರಾಜೇ ಅರಸ್ ತಿಳಿಸಿದ್ದಾರೆ.

ಮೈಸೂರಿನ ತ್ಯಾಗರಾಜ ಅರಸ್ ರಸ್ತೆಯ ಸಂಘದ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಶ್ರೀ ಜಯಚಾಮರಾಜೇಂದ್ರ ಸ್ಕೂಲ್ ಫಾರ್ ಎಕ್ಸಲೆನ್ಸ್ ಆವರಣದಿಂದ ಅಂದು ಬೆಳಿಗ್ಗೆ 9 ಗಂಟೆಗೆ ಭವ್ಯ ಮೆರವಣಿಗೆ ಹೊರಡಲಿದೆ ಎಂದರು.

ಮೆರವಣಿಗೆಯ ಉದ್ಘಾಟನೆ ಕಾರ್ಯಕ್ರಮದಲ್ಲಿ ರಾಜವಂಶಸ್ಥರಾದ ಪ್ರಮೋದಾ ದೇವಿ ಒಡೆಯರ್, ಸಂಸದ ಯದುವೀರ್, ಶಾಸಕರಾದ ಟಿ.ಎಸ್.ಶ್ರೀವತ್ಸ, ಕೆ.ಹರೀಶ್ ಗೌಡ, ಮಳವಳ್ಳಿಯ ಮಂಟೇಸ್ವಾಮಿ ಮಠದ ಮಠಾಧಿಪತಿ ಶ್ರೀ ವರ್ಚಸ್ವಿ ಶ್ರೀಕಂಠ ಸಿದ್ದಲಿಂಗರಾಜೇ ಅರಸ್, ಕುರುಬನ ಕಟ್ಟೆ ಕ್ಷೇತ್ರದ ಧರ್ಮಾಧಿಕಾರಿ ವರುಣ್ ಲಿಂಗರಾಜೇ ಅರಸ್, ರಾಜಬೋಪ್ಪೆಗೌಡನಪುರ ಕ್ಷೇತ್ರದ ಬಿ.ಪಿ.ಭರತ್ ಅರಸ್ ಸೇರಿದಂತೆ ಹಲವು ಗಣ್ಯರು ಪಾಲ್ಗೊಳ್ಳುವರು ಎಂದು ತಿಳಿಸಿದರು.

ನಗರದ ಕೃಷ್ಣರಾಜ ಬುಲೆವಾರ್ಡ್ ರಸ್ತೆ, ಆರ್‌ಟಿಓ ವೃತ್ತ, ಅಗ್ರಹಾರ ವೃತ್ತ, ಸಯ್ಯಾಜಿರಾವ್ ರಸ್ತೆ ಮೂಲಕ ಮೆರವಣಿಗೆ ಕೆ.ಆರ್.ವೃತ್ತಕ್ಕೆ ಬಂದು ತಲುಪಲಿದೆ. ಅಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಗುವುದು ಎಂದು ಶ್ರೀಕಾಂತ ರಾಜೇ ಅರಸ್ ತಿಳಿಸಿದರು. ಸಂಘದ ಮಾಜಿ ಅಧ್ಯಕ್ಷರಾದ ಹೆಚ್‌ಎಂಟಿ ಲಿಂಗರಾಜೇ ಅರಸ್, ಹೆಚ್.ಡಿ.ನವೀನ್ ರಾಜೇ ಅರಸ್, ಮನೋಜ್‌ಅರಸ್, ಕೀರ್ತಿ ಪ್ರಕಾಶ್ ಅರಸ್ ಪತ್ರಿಕಾಗೋಷ್ಠಿಯಲ್ಲಿದ್ದರು.

ಹಿರಿಯ ಮುತ್ಸದ್ಧಿ ತನ್ವೀರ್ ಸೇಠ್‌ಗೆ ಸಚಿವ ಸ್ಥಾನಕ್ಕೆ ಆಗ್ರಹ



ತನ್ವೀರ್‌ಸೇಠ್

ಮೈಸೂರು,ಜೂ.2(ಎಂಟಿವೈ)– ಮಾಜಿ ಸಚಿವರೂ ಹಾಗೂ ಕಾಂಗ್ರೆಸ್ ಪಕ್ಷದ ಕಾರ್ಯಾಧ್ಯಕ್ಷರಾದ ತನ್ವೀರ್ ಸೇಠ್ ಅವರಿಗೆ ನೂತನ ಸಚಿವ ಸಂಪುಟದಲ್ಲಿ ಸ್ಥಾನ ನೀಡಬೇಕು ಎಂದು ಮೈಸೂರು ನಗರ ಕಾಂಗ್ರೆಸ್ ಸಮಿತಿ ಮಾಧ್ಯಮ ವಕ್ತಾರ ಟಿ.ಶ್ರೀನಿವಾಸ್ ಪಕ್ಷದ ವರಿಷ್ಠರಲ್ಲಿ ಮನವಿ ಮಾಡಿದ್ದಾರೆ.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಭಾಗದಲ್ಲಿ ಶಾಸಕ ತನ್ವೀರ್‌ಸೇಠ್ ಹಾಗೂ ಅವರ ತಂದೆ ಅಜೀಜ್ ಸೇಠ್ ಅವರು ಪಕ್ಷ ಸಂಘಟನೆಗೆ ಶ್ರಮಿಸಿದ್ದಾರೆ. ಎನ್.ಆರ್.ಕ್ಷೇತ್ರದಲ್ಲಿ ಸತತವಾಗಿ ಗೆಲುವು ಸಾಧಿಸುವ ಮೂಲಕ ಕ್ಷೇತ್ರದಲ್ಲಿ ತಮ್ಮ ಛಾಪು ಮೂಡಿಸಿದ್ದಾರೆ. ತನ್ವೀರ್ ಸೇಠ್ ಅವರು ಅಲ್ಪಸಂಖ್ಯಾತ ಸಮುದಾಯ ಮಾತ್ರವಲ್ಲದೆ, ಎಲ್ಲಾ ಸಮುದಾಯದ ಅಪಾರ ಅಭಿಮಾನಿಗಳನ್ನು ಹೊಂದಿದ್ದು, ರಾಜ್ಯದಾದ್ಯಂತ ಪ್ರಭಾವವುಳ್ಳವರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ನೂತನ ಸರ್ಕಾರದಲ್ಲಿ ತನ್ವೀರ್ ಸೇಠ್ ಅವರಿಗೆ ಮಂತ್ರಿ ಪದವಿ ನೀಡಬೇಕು ಎಂದರು.

ನೀಟ್ ಪ್ರಶ್ನೆಪತ್ರಿಕೆ ಸೋರಿಕೆಯಿಂದ ರಾಷ್ಟ್ರದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅನ್ಯಾಯವಾಗಿದೆ. ರಾಜ್ಯದ ಬಿಜೆಪಿ ಸಂಸದರು ಇದನ್ನೇಕೆ ಖಂಡಿಸುತ್ತಿಲ್ಲ. ಇವರು ಮೌನವಾಗಿರುವುದು ನಾಚಿಕೆಗೇಡಿತನದ್ದಾಗಿದೆ ಎಂದು ಕಿಡಿಕಾರಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ರಾಮಪ್ಪ, ರಾಜೇಶ್, ಬಿ.ಮೋಹನ್‌ಕುಮಾರ್, ಗಂಟಯ್ಯ, ರಾಜೇಶ್, ಖಮ್ರಾನ್ ಪಾಷ ಇನ್ನಿತರರು ಇದ್ದರು.

ಮೈಸೂರಲ್ಲಿ ಕಾನೂನು ಸುವ್ಯವಸ್ಥೆ ಕುಸಿದಿದೆ

"ಮೈಸೂರಲ್ಲಿ ಕಳೆದ ಕೆಲ ತಿಂಗಳಿಂದ ಅಪರಾಧ ಕೃತ್ಯಗಳ ಸಂಖ್ಯೆ ಹೆಚ್ಚಾಗುತ್ತಿದೆ. ಕೊಲೆ, ಸುಲಿಗೆ, ಕಳ್ಳತನ ಹೆಚ್ಚಾಗುತ್ತಿದೆ. ಮೈಸೂರಿನ ಹೊರಭಾಗದಲ್ಲಿ ಇಸ್ಪೀಟ್ ದಂಧೆ ಹೆಚ್ಚಾಗಿ ನಡೆಯುತ್ತಿದೆ. ಪೊಲೀಸರು ಏನು ಗೊತ್ತಿಲ್ಲದಂತೆ ಸುಮ್ಮನಿದ್ದಾರೆ. ಕೆಲವು ಪೊಲೀಸರು ಬಂದೋಬಸ್ತ್ ಕೆಲಸ ಹಾಗೂ ಅಪರಾಧ ತಡೆಯುವ ಕೆಲಸ ಮಾಡುವುದನ್ನು ಬಿಟ್ಟು ರಿಯಲ್ ಎಸ್ಟೇಟ್ ಕೆಲಸ ಮಾಡುತ್ತಿದ್ದಾರೆ. ನೂತನ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಅದಕ್ಷ ಹಾಗೂ ಹಲವು ವರ್ಷದಿಂದ ಒಂದೇ ಕಡೆ ನೆಲೆಯೂರಿರುವ ಪೊಲೀಸ್ ಅಧಿಕಾರಿಗಳನ್ನು ವರ್ಗಾಯಿಸಬೇಕು. ಅಲ್ಲದೆ, ಕಾನೂನು ಸುವ್ಯವಸ್ಥೆ ಕಾಪಾಡಲು ದಕ್ಷ ಅಧಿಕಾರಿಗಳನ್ನು ನಿಯೋಜಿಸಲು ಕ್ರಮ ಕೈಗೊಳ್ಳಬೇಕು. –ಶ್ರೀನಿವಾಸ್

ಡಾ.ಯತೀಂದ್ರರಿಗೆ ಪ್ರಬಲ ಖಾತೆಯೊಂದಿಗೆ ಡಿಸಿಎಂ ಹುದ್ದೆಗೆ ಕುರುಬರ ಸಂಘ ಆಗ್ರಹ



ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಅವರಿಗೆ ಪ್ರಬಲ ಖಾತೆ ಸಹಿತ ಉಪಮುಖ್ಯಮಂತ್ರಿ ಸ್ಥಾನ ನೀಡುವಂತೆ ಒತ್ತಾಯಿಸಿ ಪ್ರದೇಶ ಕುರುಬರ ಸಂಘದ ನಿಕಟಪೂರ್ವ ರಾಜ್ಯಾಧ್ಯಕ್ಷ ಬಿ.ಸುಬ್ರಹ್ಮಣ್ಯ ಅಧ್ಯಕ್ಷತೆಯಲ್ಲಿ ಸಭೆ ನಡೆಸಲಾಯಿತು

ಮೈಸೂರು, ಜೂ.2(ಎಂಕೆ)– ರಾಜ್ಯ ಸರ್ಕಾರದ ನೂತನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ಸಚಿವ ಸಂಪುಟದಲ್ಲಿ ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಅವರಿಗೆ ಪ್ರಬಲ ಖಾತೆ ಸಹಿತ ಉಪ ಮುಖ್ಯಮಂತ್ರಿ ಸ್ಥಾನಮಾನ ನೀಡುವಂತೆ ಕರ್ನಾಟಕ ಪ್ರದೇಶ ಕುರುಬರ ಸಂಘದ ಮೈಸೂರು ಜಿಲ್ಲಾ ಮತ್ತು ತಾಲೂಕು ಸಮಿತಿಗಳ ವತಿಯಿಂದ ಒತ್ತಾಯಿಸಲಾಯಿತು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿ ಖಾಸಗಿ ಹೋಟೆಲ್‌ನಲ್ಲಿ ಮಂಗಳವಾರ ಕರ್ನಾಟಕ ಪ್ರದೇಶ ಕುರುಬರ ಸಂಘದ ನಿಕಟಪೂರ್ವ ರಾಜ್ಯಾಧ್ಯಕ್ಷ ಬಿ.ಸುಬ್ರಹ್ಮಣ್ಯ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕಾಂಗ್ರೆಸ್ ಹೈಕಮಾಂಡ್, ಡಾ.ಯತೀಂದ್ರ ಅವರಿಗೆ ಮೊದಲ ಹಂತದಲ್ಲೇ ಸೂಕ್ತ ಸ್ಥಾನಮಾನ ನೀಡುವಂತೆ ಆಗ್ರಹಿಸಲಾಯಿತು.

ರಾಜ್ಯ ಕಂಡ ಧೀಮಂತ ನಾಯಕ ಸಿದ್ದರಾಮಯ್ಯ ಅವರ ರಾಜೀನಾಮೆ ಬಳಿಕ ಮುಖ್ಯಮಂತ್ರಿ ಸ್ಥಾನಕ್ಕೆ ಆಯ್ಕೆಯಾಗಿ ಪ್ರಮಾಣವಚನ ಸ್ವೀಕರಿಸುತ್ತಿರುವ ಡಿ.ಕೆ. ಶಿವಕುಮಾರ್ ಅವರಿಗೆ ಇಡೀ ಕುರುಬರ ಸಮಾಜ ಅಭಿನಂದನೆ ಸಲ್ಲಿಸಲಿದೆ. ದೇಶದಲ್ಲಿಯೇ ಕರ್ನಾಟಕ ರಾಜ್ಯವನ್ನು ಅಭಿವೃದ್ಧಿಯಲ್ಲಿ ನಂಬರ್ ಒನ್ ಸ್ಥಾನಕ್ಕೆ ತಂದು ನಿಲ್ಲಿಸಿರುವ ಹಾಗೂ ಬುದ್ಧ, ಬಸವ ಮತ್ತು ಅಂಬೇಡ್ಕರ್ ಅವರ ಸಿದ್ಧಾಂತಗಳ ಅಡಿಯಲ್ಲಿ ಸರ್ವರಿಗೂ ಸಮಪಾಲು ಎಂಬಂತೆ ಆಡಳಿತ ನಡೆಸಿದ ಸಿದ್ದರಾಮಯ್ಯ ಅವರ ಪುತ್ರ ಡಾ.ಯತೀಂದ್ರ ಸಿದ್ದರಾಮಯ್ಯ ಅವರನ್ನು ಮೊದಲ ಹಂತದಲ್ಲೇ ಮಂತ್ರಿ ಮಂಡಲಕ್ಕೆ ಸೇರ್ಪಡೆ ಮಾಡಬೇಕು ಎಂದು ಕೋರಲಾಯಿತು.

ಕುರುಬ ಸಮಾಜ ಸೇರಿದಂತೆ ಅಹಿಂದ ವರ್ಗದ ಶೇ.90ಕ್ಕಿಂತ ಹೆಚ್ಚು ಮತಗಳು ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಪಕ್ಷಕ್ಕೆ ಬಿದ್ದಿವೆ. ಅಹಿಂದ ವರ್ಗಗಳನ್ನು ಮುನ್ನಡೆಸಲು ಯುವ ನಾಯಕ ಡಾ.ಯತೀಂದ್ರ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕು. ಇದರೊಂದಿಗೆ ಹೈಕಮಾಂಡ್ ಹೇಳಿದಂತೆ ಪ್ರಬಲ ಸಚಿವ ಖಾತೆ ನೀಡಿ, ಉತ್ತಮ ಜನಸೇವೆಗೆ ಅವಕಾಶ ಮಾಡಿಕೊಡಬೇಕು. ಸಿದ್ದರಾಮಯ್ಯ ಅವರನ್ನು ಡಿ.ಕೆ.ಶಿವಕುಮಾರ್ ಅವರ ಸಂಪುಟ ಹಾಗೂ ಹೈಕಮಾಂಡ್ ಗೌರವಯುತವಾಗಿ ನಡೆಸಿಕೊಳ್ಳಬೇಕು ಎಂದು ಒತ್ತಾಯಿಸಲಾಯಿತು.

ಸಭೆಯಲ್ಲಿ ಮಾಜಿ ಮೇಯರ್‌ಗಳಾದ ಟಿ.ಬಿ.ಚಿಕ್ಕಣ್ಣ, ಪುಷ್ಪಲತಾ ಚಿಕ್ಕಣ್ಣ, ನಗರಪಾಲಿಕೆ ಮಾಜಿ ಸದಸ್ಯ ಜೆ.ಗೋಪಿ, ಕಾಂಗ್ರೆಸ್ ಮುಖಂಡ ಬೀರಿಹುಂಡಿ ಬಸವಣ್ಣ, ಕರ್ನಾಟಕ ಪ್ರದೇಶ ಕುರುಬರ ಸಂಘದ ನಿರ್ದೇಶಕ ಕುರಿಹುಂಡಿ ರಾಜು, ಜಿಲ್ಲಾಧ್ಯಕ್ಷ ಶಿವಪ್ಪ, ಮೈಸೂರು ತಾಲೂಕು ಅಧ್ಯಕ್ಷ ಬಸವರಾಜು, ಪಿರಿಯಾಪಟ್ಟಣ ತಾಲೂಕು ಅಧ್ಯಕ್ಷ ಗಣೇಶ್, ಕಾರ್ಯದರ್ಶಿ ಸುನೀಲ್, ಹೆಚ್.ಡಿ. ಕೋಟೆ ತಾಲೂಕು ಅಧ್ಯಕ್ಷ ಆನಂದ್, ಹುಣಸೂರು ತಾಲೂಕು ಅಧ್ಯಕ್ಷ ಕುನ್ನೇ ಗೌಡ, ಟಿ.ನರಸೀಪುರ ತಾಲೂಕು ಅಧ್ಯಕ್ಷ ಮಹೇಶ್, ಕೆ.ಆರ್.ನಗರ ತಾಲೂಕು ಅಧ್ಯಕ್ಷ ಶಿವಣ್ಣ, ಕುರುಬ ಸಮುದಾಯದ ಮುಖಂಡರಾದ ಬಸಪ್ಪ, ತ್ರಿವೇಣಿ, ಭಾಗ್ಯಮ್ಮ ಮತ್ತಿತರರು ಉಪಸ್ಥಿತರಿದ್ದರು.

ನೆಲಮಂಗಲದಲ್ಲಿ 10 ಲಕ್ಷ ಲಾಡು ತಯಾರಿ



ನೆಲಮಂಗಲ: ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿ ಆಗುತ್ತಿರುವ ಹಿನ್ನೆಲೆಯಲ್ಲಿ ನೆಲಮಂಗಲದಲ್ಲಿ ಸಂಭ್ರಮ ಮನೆ ಮಾಡಿದೆ. ಈ ಹಿನ್ನೆಲೆಯಲ್ಲಿ ತಾಲೂಕಿನ ಪ್ರತಿ ಮನೆಗೆ ಲಾಡು ಬಾಕ್ಸ್ ಹಂಚಲು ಭರ್ಜರಿ ಸಿದ್ಧತೆ ನಡೆಸಲಾಗುತ್ತಿದೆ.

ಸುಮಾರು 9 ರಿಂದ 10 ಲಕ್ಷ ಲಾಡುಗಳನ್ನು ತಯಾರಿಸಲಾಗುತ್ತಿದ್ದು, ನೆಲಮಂಗಲ ತಾಲೂಕಿನ 80 ರಿಂದ 90 ಸಾವಿರ ಮನೆಗಳಿಗೆ ಲಾಡು ಬಾಕ್ಸ್ ವಿತರಿಸಲು ಯೋಜನೆ ರೂಪಿಸಲಾಗಿದೆ. ನೆಲಮಂಗಲ ಶಾಸಕ ಶ್ರೀನಿವಾಸ್ ನೇತೃತ್ವದಲ್ಲಿ ಲಾಡು ತಯಾರಿ ಕಾರ್ಯ ನಡೆಯುತ್ತಿದೆ. ಸುಮಾರು 250 ರಿಂದ 300 ಮಂದಿ ಬಾಣಸಿಗರಿಂದ ಲಾಡು ತಯಾರಿಸಲಾಗುತ್ತಿದೆ.

ಜಿಎಸ್‌ಟಿ ಪ್ರಧಾನ ಆಯುಕ್ತರಾಗಿ ಡಾ.ರವೀಂದ್ರ ಬಂಗಾರ್ ಅಧಿಕಾರ ಸ್ವೀಕಾರ

ಮೈಸೂರು, ಜೂ.2(ಎಸ್‌ಪಿಎನ್)– ಇತ್ತೀಚೆಗೆ ಜಿಎಸ್‌ಟಿ ಮೈಸೂರು ಆಯುಕ್ತಾಲಯದ



ನೂತನ ಪ್ರಧಾನ ಆಯುಕ್ತರಾಗಿ ಹಿರಿಯ ಐಆರ್‌ಎಸ್ ಅಧಿಕಾರಿ ಡಾ. ರವೀಂದ್ರ ರಾಮಚಂದ್ರ ಬಂಗಾರ್ (ಮೇ 26ರಂದು) ಅಧಿಕಾರ ಸ್ವೀಕರಿಸಿದರು. ಇದಕ್ಕೂ ಮೊದಲು ಡಾ.ರವೀಂದ್ರ ರಾಮಚಂದ್ರ ಬಂಗಾರ್ ಅವರು ಮುಂಬೈ ವಲಯದ ಪಾಲ್ಘರ್ ಜಿಎಸ್‌ಟಿ ಮತ್ತು ಸಿಎಕ್ಸ್ ಆಯುಕ್ತಾಲಯದಲ್ಲಿ ಪ್ರಧಾನ ಆಯುಕ್ತರಾಗಿ ಸೇವೆ ಸಲ್ಲಿಸುತ್ತಿದ್ದರು.

1996ರ ಬ್ಯಾಚ್‌ನ (ಕಸ್ಟಮ್ಸ್ ಮತ್ತು ಪರೋಕ್ಷ ತೆರಿಗೆಗಳು) ಐಆರ್‌ಎಸ್ ಅಧಿಕಾರಿಯಾಗಿ ಸೇವೆ ಆರಂಭಿಸಿರುವ ಇವರು, ಗುವಾಹಟಿ ವಲಯದ ಜಿಎಸ್ಟಿ ಮತ್ತು ಸಿಎಕ್ಸ್‌ನಲ್ಲಿ, ಮುಂಬೈನ ಕಸ್ಟಮ್ಸ್ ಮತ್ತು ಸೆಂಟ್ರಲ್ ಅಬಕಾರಿ ಸೆಟಲ್‌ಮೆಂಟ್ ಕಮಿಷನ್ನರ್ ಸೇವೆ ಸಲ್ಲಿಸಿದ್ದಾರೆ.







ಸೇವಾ ಶ್ರೇಷ್ಠತೆ ತಾವೇ ನಿರ್ಧರಿಸುವ ಮೈಸೂರು ಪೊಲೀಸ್ ಮಹಾಶಯರು!

'ಲೋಕ ಸ್ಪಂದನ' ಉತ್ತಮ ಕಾರ್ಯಕ್ರಮಕ್ಕೆ ಪೊಲೀಸರಿಂದಲೇ ಅಪಚಾರ!!

ಮೈಸೂರು, ಜೂ.2(ಕೆಎಸ್, ಎಂಕೆ)– ರಾಜ್ಯದಲ್ಲಿ ಜನಸ್ನೇಹಿ ಪೊಲೀಸ್ ವ್ಯವಸ್ಥೆ ಜಾರಿಗೊಳಿಸುವ ನಿಟ್ಟಿನಲ್ಲಿ ಸಾರ್ವಜನಿಕರಿಂದ ಮುಕ್ತ ಅನಿಸಿಕೆ-ಅಭಿಪ್ರಾಯ ಸಂಗ್ರಹಕ್ಕೆಂದು ರೂಪಿಸಲಾದ 'ಲೋಕ ಸ್ಪಂದನ' ಕಾರ್ಯಕ್ರಮಕ್ಕೆ ಪೊಲೀಸರಿಂದಲೇ ಅಪಚಾರ!

ಪೊಲೀಸ್ ಠಾಣೆಗಳಲ್ಲಿ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿ ಪಾರದರ್ಶಕತೆ, ಹೊಣೆಗಾರಿಕೆಯಿಂದ ಸಾರ್ವಜನಿಕರೊಂದಿಗೆ ಸ್ನೇಹಯುತವಾಗಿ ವರ್ತಿಸುತ್ತಿದ್ದಾರೆಯೇ... ನೊಂದವರಿಗೆ ಸಕಾಲದಲ್ಲಿ ಸ್ಪಂದಿಸುತ್ತಿದ್ದಾರೆಯೇ ಎಂಬುದರ ಕುರಿತು ಹಿರಿಯ ಅಧಿಕಾರಿಗಳಿಗೆ ಮುಕ್ತವಾಗಿ ಪ್ರತಿಕ್ರಿಯೆ ನೀಡಲು ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆ ವತಿಯಿಂದ ಜಾರಿಗೊಳಿಸಲಾದ 'ಲೋಕ ಸ್ಪಂದನ' ಕಾರ್ಯಕ್ರಮದ ಉದ್ದೇಶವನ್ನೇ ಹಾಳುಮಾಡಲಾಗುತ್ತಿದೆ.

ಎರಡು ವರ್ಷದ ಹಿಂದೆ ಜಾರಿಯಾದ 'ಲೋಕ ಸ್ಪಂದನ' ಕಾರ್ಯಕ್ರಮದ ಅಂಗವಾಗಿ ಪ್ರತೀ ಪೊಲೀಸ್ ಠಾಣೆಯಲ್ಲೂ ಕ್ಯೂಆರ್ ಕೋಡ್ ಅಳವಡಿಸಿದ್ದು, ಠಾಣೆಗೆ ಭೇಟಿ ನೀಡುವವರು, ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ ಇಲಾಖೆಯ ವೆಬ್‌ಸೈಟ್ ಮೂಲಕ ಪೊಲೀಸ್ ಠಾಣೆಯಿಂದ ದೊರೆಯುವ ಅನುಕೂಲತೆಗಳು, ಪೊಲೀಸರ ಸಹಕಾರ, ನಡೆದುಕೊಂಡ ರೀತಿ, ದೂರಿಗೆ ನೀಡಿದ ಸ್ಪಂದನೆ ಕುರಿತು ಮುಕ್ತವಾಗಿ ತಮ್ಮ ಅನಿಸಿಕೆ-ಅಭಿಪ್ರಾಯಗಳನ್ನು ಹಂಚಿಕೊಳ್ಳಬಹುದಾಗಿದೆ. ವಿಪರ್ಯಾಸವೆಂದರೆ, ಸಾರ್ವಜನಿಕರು ನೀಡಬೇಕಾದ ಪ್ರತಿಕ್ರಿಯೆಯನ್ನು ಪೊಲೀಸ್ ಸಿಬ್ಬಂದಿಗಳೇ ನೀಡುವ ಮೂಲಕ ತಮ್ಮ ಮೇಲಧಿಕಾರಿಗಳಿಗೆ ವಂಚಿಸುತ್ತಿದ್ದಾರೆ.

ಜನಪ್ರಿಯ ಕಾರ್ಯಕ್ರಮಕ್ಕೆ ಅಪಚಾರ: 'ಲೋಕ ಸ್ಪಂದನ' ಕಾರ್ಯಕ್ರಮದ ಉದ್ದೇಶಕ್ಕೆ ವಿರುದ್ಧವಾಗಿ ಪೊಲೀಸ್ ಸಿಬ್ಬಂದಿಗಳೇ ನಡೆದುಕೊಳ್ಳುತ್ತಿದ್ದು, ಠಾಣೆಗೆ ಭೇಟಿ ನೀಡುವವರ ಮೊಬೈಲ್ ಸಂಖ್ಯೆಯನ್ನು ಪಡೆದು, ತಾವೇ 'ಲೋಕ ಸ್ಪಂದನ' ಕಾರ್ಯಕ್ರಮದ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ ಇಲಾಖೆ ವೆಬ್‌ಪೇಜ್‌ಗೆ ಲಾಗಿನ್ ಆಗಿ, ಸಾರ್ವಜನಿಕರು ನೀಡಬೇಕಾದ ಅನಿಸಿಕೆ-ಅಭಿಪ್ರಾಯಗಳನ್ನು ನೀಡುತ್ತಿದ್ದಾರೆ. ಠಾಣೆಗೆ ಭೇಟಿ ನೀಡಿ ಯಾವುದೇ ಪ್ರಯೋಜನವಾಗದಿದ್ದರೂ ಉತ್ತಮ ಸ್ಪಂದನೆ ದೊರೆತಿದೆ ಎಂಬುದಾಗಿ ಸಾರ್ವಜನಿಕರ ಬದಲಿಗೆ ಪೊಲೀಸ್ ಸಿಬ್ಬಂದಿಗಳೇ ಅಭಿಪ್ರಾಯ ನೀಡುವ ಮೂಲಕ ತಮ್ಮ ಇಲಾಖೆಯ ಜನಪ್ರಿಯ ಕಾರ್ಯಕ್ರಮಕ್ಕೆ ಅಪಚಾರವೆಸಗುತ್ತಿದ್ದಾರೆ.

ಇದಕ್ಕೆ ಪುಷ್ಟಿ ನೀಡುವಂತೆ ಮೇ 30ರಂದು ದೂರುದಾರರೊಬ್ಬರು, ತಮ್ಮ ವಕೀಲರ ಸಲಹೆಯಂತೆ ಸಿವಿಲ್ ವಿವಾದಕ್ಕೆ ಸಂಬಂಧಿಸಿದಂತೆ ನ್ಯಾಯಾಲಯ ಹೊರಡಿಸಿದ್ದ ತಡೆಯಾಜ್ಞೆ ಆದೇಶವನ್ನು ಸಲ್ಲಿಸಲು ಮೇಟಗಳ್ಳಿ ಪೊಲೀಸ್ ಠಾಣೆಗೆ ಭೇಟಿ ನೀಡಿದ್ದಾರೆ. ಈ ವೇಳೆ ಠಾಣೆಯೊಳಗೆ ಸ್ವಾಗತಿಸಿದ ಪೊಲೀಸ್ ಸಿಬ್ಬಂದಿ ಸಂದರ್ಶಕರ ರಿಜಿಸ್ಟರ್‌ನಲ್ಲಿ ದೂರುದಾರರ ಹೆಸರು, ವಿಳಾಸ ಮತ್ತು ಮೊಬೈಲ್ ನಂಬರ್ ಪಡೆದು ಯಾರನ್ನು ಭೇಟಿ ಮಾಡಬೇಕು ಎಂದಿದ್ದಾರೆ. ಇದಕ್ಕೆ ದೂರುದಾರರು, ಪೊಲೀಸ್ ಇನ್ಸ್‌ಪೆಕ್ಟರ್ ನೋಡಬೇಕು ಎಂದಿದ್ದಕ್ಕೆ ಸಿಬ್ಬಂದಿಗಳು ಕೂಡ ಸಮ್ಮತಿಸಿ, ಇನ್ಸ್‌ಪೆಕ್ಟರ್ ಬಳಿ ಕಳಿಸಿದ್ದಾರೆ.

ಬರೀ ಸನ್ನೆ ಅಷ್ಟೇ: ಆದರೆ, ದೂರುದಾರರು ಇನ್ಸ್‌ಪೆಕ್ಟರ್ ಬಳಿ ಹೋಗುತ್ತಿದ್ದಂತೆ ನೀವು ಸಬ್ ಇನ್ಸ್‌ಪೆಕ್ಟರ್ ಕಾಣುವಂತೆ ಸನ್ನೆಯ ಮೂಲಕ ತಿಳಿಸಿದ್ದಾರೆ. ಅದರಂತೆ ಸಬ್ ಇನ್ಸ್‌ಪೆಕ್ಟರ್ ಬಳಿ ಹೋದಾಗ ಅವರು, ನ್ಯಾಯಾಲಯ ನೀಡಿದ ತಡೆಯಾಜ್ಞೆ ಏನೆಂಬುದನ್ನು ಗಮನಿಸದೆ, ಸಿಬ್ಬಂದಿಯೊಬ್ಬರಿಗೆ ನೀಡಿ ಸ್ವೀಕೃತಿ ಪಡೆಯುವಂತೆ ತಿಳಿಸಿದ್ದಾರೆ. ಈ ವೇಳೆ ತಡೆಯಾಜ್ಞೆ ಪ್ರತಿ ಗಮನಿಸಿ, ಇದಕ್ಕೆ ಸ್ವೀಕೃತಿ ನೀಡಲು ಬರುವುದಿಲ್ಲ ಎಂದಿದ್ದಾರೆ. ಕೆಲಕಾಲ ಅಲ್ಲಿಯೇ ನಿಂತು ಪ್ರಶ್ನಿಸಿದಾಗ ಸ್ಥಳಕ್ಕಾಗಮಿಸಿದ ಸಬ್‌ಇನ್ಸ್‌ಪೆಕ್ಟರ್, ತಡೆಯಾಜ್ಞೆ ಪ್ರತಿ ಪಡೆದು ಸ್ವೀಕೃತಿ ನೀಡುವಂತೆ ಸೂಚಿಸಿದ ಬೆನ್ನಲ್ಲೆ ದೂರುದಾರರಿಗೆ ತಡೆಯಾಜ್ಞೆಯ ನಕಲು ಪ್ರತಿಗೆ ಠಾಣೆಯ ಸೀಲ್ ಹಾಕಿ ಪಡೆಯಲಾಗಿದೆ ಎಂದು ಸ್ವೀಕೃತಿ ನೀಡಿದ್ದಾರೆ.

ನಂತರ ದೂರುದಾರರು ಠಾಣೆಯಿಂದ ಹೊರ ಬರುತ್ತಿದ್ದಂತೆ ಠಾಣೆಗೆ ಭೇಟಿ ನೀಡಿದ್ದರ ಕುರಿತು ಪ್ರತಿಕ್ರಿಯೆ ನೀಡುವಂತೆ ಸಿಬ್ಬಂದಿ ತಿಳಿಸಿದ್ದಾರೆ. ಅವರ ಮಾತಿನಂತೆ ದೂರುದಾರರು ಮೊಬೈಲ್ ಹೊರತೆಗೆದು 'ಲೋಕ ಸ್ಪಂದನ' ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಲು ಮುಂದಾಗುತ್ತಿದ್ದಂತೆ ತಡೆದ ಸಿಬ್ಬಂದಿ, ನಿಮ್ಮ ಮೊಬೈಲ್ ನಂಬರ್‌ಗೆ ಒಟಿಪಿ ನಂಬರ್ ಬರಲಿದ್ದು, ಆ ನಂಬರ್ ಹೇಳಿದರೆ ಸಾಕು ನಾವೇ ನಿಮ್ಮ ಪರವಾಗಿ ಪ್ರತಿಕ್ರಿಯೆ ನೀಡುತ್ತೇವೆ ಎಂದು ತಿಳಿಸಿದ್ದಾರೆ. ಇದರಿಂದ ಸಾರ್ವಜನಿಕರು ಮುಕ್ತವಾಗಿ ನೀಡಬೇಕಾದ ಸ್ವಾತಂತ್ರ್ಯವನ್ನು ಕಸಿದಿರುವ ಪೊಲೀಸರು, ತಮ್ಮ ಕಾರ್ಯಕ್ಷಮತೆ ಕುರಿತು ತಾವೇ ಹೆಮ್ಮೆಯಿಂದ ಹೇಳಿಕೊಳ್ಳುವ ಮೂಲಕ ಕಾನೂನಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದಾರೆ ಎಂದು ಮೇಟಗಳ್ಳಿ ಠಾಣೆಗೆ ಭೇಟಿ ನೀಡಿದ ದೂರುದಾರರು ತಮಗಾದ ಅನುಭವ ಕುರಿತು 'ಮೈಸೂರು ಮಿತ್ರ'ನಲ್ಲಿ ವಿವರಿಸಿದ್ದಾರೆ.

ಜನಸ್ನೇಹಿ ಅಲ್ಲ: ನೊಂದವರ ನೋವಿಗೆ ಸ್ಪಂದಿಸದೆ ಸನ್ನೆ ಮಾಡಿ ಟೇಬಲ್‌ನಿಂದ ಟೇಬಲ್‌ಗೆ ಸಾಗ ಹಾಕುವ ಪೊಲೀಸರ ವರ್ತನೆ ಜನಸ್ನೇಹಿಯಾಗಿಲ್ಲ. ಮಾತಿಗಷ್ಟೇ ಅಭಿಪ್ರಾಯ ನೀಡಿ ಎನ್ನುವುದು. ನಂತರ ಬೇಡವೆಂದು ತಮ್ಮನ್ನು ತಾವೇ ಹೊಗಳಿಕೊಳ್ಳುವುದನ್ನು ಪೊಲೀಸರು ಮಾಡುತ್ತಿದ್ದಾರೆ. ಜನರ ಕಣ್ಣೀರು ಹೊರೆಸಬೇಕಾದವರೇ ಕಣ್ಣು ತಪ್ಪಿಸಿ ಮೋಸ ಮಾಡುತ್ತಿದ್ದಾರೆ ಎಂದು ಮೈಸೂರಿನ ಪ್ರಜ್ಞಾವಂತ ನಾಗರೀಕರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.



ಮೇಟಗಳ್ಳಿ ಠಾಣೆಯಲ್ಲಿ ಸಾರ್ವಜನಿಕ ಪ್ರತಿಕ್ರಿಯೆಗಾಗಿ QR ಕೋಡ್ ಅಳವಡಿಸಿರುವುದು

• ಯಾವ ಪುರುಷಾರ್ಥಕ್ಕಾಗಿ 'ಲೋಕ ಸ್ಪಂದನ' •

ಪೊಲೀಸ್ ಠಾಣೆಗೆ ಭೇಟಿ ನೀಡಿದ ಸಂದರ್ಶಕರು, ದೂರುದಾರರು, ನೊಂದು ನ್ಯಾಯ ಕೇಳಲು ಬಂದವರು ನೀಡಬೇಕಾದ ಪ್ರತಿಕ್ರಿಯೆಯನ್ನು ಅಲ್ಲಿನ ಸಿಬ್ಬಂದಿಗಳೇ ನೀಡುವುದಾದರೆ ಈ 'ಲೋಕ ಸ್ಪಂದನ' ಕಾರ್ಯಕ್ರಮ ಯಾವ ಪುರುಷಾರ್ಥಕ್ಕಾಗಿ ಎಂಬ ಪ್ರಶ್ನೆ ಸಾರ್ವಜನಿಕ ವಲಯದಲ್ಲಿ ಆಕ್ರೋಶ ವ್ಯಕ್ತವಾಗಿದೆ. ಠಾಣೆಯಲ್ಲಿನ ಪೊಲೀಸ್ ಅಧಿಕಾರಿಗಳು ನೊಂದವರಿಗೆ ಸ್ಪಂದಿಸದಿದ್ದರೂ, ಯಾವುದೇ ಅನುಕೂಲತೆಗಳನ್ನು ಮಾಡಿಕೊಡದಿದ್ದರೂ ಮಾಡಿದ್ದೇವೆ ಎಂದು ತಮ್ಮ ಕೆಲಸದ ಬಗ್ಗೆ ತಾವೇ ಮೆಚ್ಚುಗೆ ವ್ಯಕ್ತಪಡಿಸಿಕೊಳ್ಳುತ್ತಿದ್ದಾರೆ.

'ಲೋಕ ಸ್ಪಂದನ' ಕಾರ್ಯಕ್ರಮ ಠಾಣೆಗೆ ಭೇಟಿ ನೀಡುವವರ ಅಭಿಪ್ರಾಯ ಸಂಗ್ರಹಕ್ಕಾಗಿ ಇರುವುದು. ಆದರೆ, ಮೇಟಗಳ್ಳಿ ಪೊಲೀಸ್ ಠಾಣೆಯಲ್ಲಿ ಸಾರ್ವಜನಿಕ ಪ್ರತಿಕ್ರಿಯೆ ವ್ಯವಸ್ಥೆಗೆ ಸಂಬಂಧಿಸಿದ ಸಮಸ್ಯೆಯ ಬಗ್ಗೆ



ತಿಳಿದುಕೊಂಡ ನಂತರ, ಇನ್ಸ್‌ಪೆಕ್ಟರ್ ಅವರಿಂದ ವರದಿ ಪಡೆದು ವಿಚಾರಣೆ ನಡೆಸುತ್ತೇನೆ.

-ಸೀಮಾ ಲಾಟ್ಕರ್, ಆಯುಕ್ತರು, ಮೈಸೂರು ನಗರ ಪೊಲೀಸ್

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	**(ದೂ: 2521923)**
ಬ್ಲಾಸ್ಟ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	**(ದೂ: 2422871)**
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	**(ದೂ: 2497199)**
ಕೆಡಿ (ಕ)	3 ಪ್ರದರ್ಶನಗಳು
ಮಹದೇಶ್ವರ	**(ಮೊ:9900820093)**
ರೆಬೆಲ್ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಲೋ ನವೀನ (ಕ)	4 ಪ್ರದರ್ಶನಗಳು
ರಾಜಕಮಲ್	
ಕರುಪ್ಪು (ತ)	4 ಪ್ರದರ್ಶನಗಳು
ಸಂಗಂ	
ಕಾಟಾಳನ್ (ಕ)	4 ಪ್ರದರ್ಶನಗಳು
ಲಿಡೋ	
ಆತುಡು(ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಕುಚುಕು (ಕ)	4 ಪ್ರದರ್ಶನಗಳು

ಮೈಸೂರು ಬೇಸಿಗೆ ರೇಸ್

2ನೇ ದಿನ, ಬುಧವಾರ, 3–6–2026

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 1.30 ಗಂಟೆಗೆ

I. ಬಲಮುರಿ ಪ್ಲೇಟ್ ಡಿII–1400 ಮೀ. ರೇಟೆಡ್ 00 ರಿಂದ 25. ಮ.1.30ಕ್ಕೆ
1. ಅಲ್ಲುರಿಂಗ್ ಬ್ಯೂಟಿ 2. ಆರ್ಟಿಕಲ್ ಫಿಫ್ಟೀನ್

II. ಪ್ರಿನ್ಸ್ ರೀಜೆಂಟ್ ಪ್ಲೇಟ್ –1100 ಮೀ. ರೇಟೆಡ್ 20 ರಿಂದ 45. ಮ.2.00ಕ್ಕೆ
1 ಕಿಂಗ್ಸ್ ಸ್ಕಾರಾ ಫೇಸ್ 2. ಬಯೋಮೆಟ್ರಿಕ್

III. ಬಲಮುರಿ ಪ್ಲೇಟ್ ಡಿI–1400 ಮೀ. ರೇಟೆಡ್ 00 ರಿಂದ 25. ಮ.2.30ಕ್ಕೆ
1. ಪರ್ಫೆಕ್ಟ್ ಹಾರ್ಟ್ 2. ಗಿಮ್ಮಿ

IV. ಕೋಲಾರ ಪ್ಲೇಟ್ ಡಿ II -1400 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1. ಸ್ಯಾಂಡ್ಸ್ ಆಫ್ ದುಬೈ 2. ನ್ಯಾಚುರಲ್ ಲುಕ್

V. ರೇಡ್ ಸ್ಯಾಟಿನ್ ಪ್ಲೇಟ್ 1200ಮೀ ರೇಟೆಡ್ 60 ಮತ್ತು ಮೇಲ್ವರ್ಗ. ಮ.3.30ಕ್ಕೆ
1. ಡೆಕಾ ಕಾರನ್ 2. ವಂಡಿಯ ದೇವನ್

VI. ವರಾಹಿ ಟ್ರೋಫಿ 1200 ಮೀ ರೇಟೆಡ್ 40 ರಿಂದ 65. ಸಂ.4.00ಕ್ಕೆ 1.
1. ರಿವರ್ ಆಫ್ ಗೋಲ್ಡ್ 2. ಶೀಬಾ

VII. ಕೋಲಾರ ಪ್ಲೇಟ್ ಡಿI -1400 ಮೀ. ರೇಟೆಡ್ 20 ರಿಂದ 45. ಸಂ.4.30ಕ್ಕೆ
1. ಕೊಸೆಟ್ಟಿ 2. ಮೈಂಡ್ ಗೇಮ್

VIII. ನಾಗಮಂಗಲ ಪ್ಲೇಟ್ 1400 ಮೀ ರೇಟೆಡ್ 40 ರಿಂದ 65. ಸಂ.5.00ಕ್ಕೆ
1. ಪ್ರಿನ್ಸ್ ಕಾರ್ಪೊರೇಟ್ 2. ಲರಾಡೋ

ದಿನದ ಅತ್ಯುತ್ತಮ..........: ಸ್ಯಾಂಡ್ಸ್ ಆಫ್ ದುಬೈ
ಡಬಲ್..........: ರಿವರ್ ಆಫ್ ಗೋಲ್ಡ್, ಡೆಕಾ ಕಾರನ್
ಜಾಕ್‌ಪಾಟ್..........: 4, 5, 6, 7 ಮತ್ತು 8
ಮಿನಿ ಜಾಕ್‌ಪಾಟ್..........: 5, 6, 7 ಮತ್ತು 8
I ಟ್ರಿಬಲ್..........: 1, 2 ಮತ್ತು 3
II ಟ್ರಿಬಲ್..........: 3, 4 ಮತ್ತು 5
III ಟ್ರಿಬಲ್..........: 6, 7 ಮತ್ತು 8
ಎಕ್ಸ್‌ಆಕ್ಟ್..........: 1 ರಿಂದ 8

ಟಿಪ್‌ಸ್ಟರ್ ಪಿಜಿಸಿ

ಸಂಗೀತವು ಸಂಸ್ಕಾರ, ಶಿಸ್ತು, ಸಾಧನೆ, ಸೌಂದರ್ಯದ ಸಂಗಮ

ಸ್ವರಾಲಯ ಸಾಂಸ್ಕೃತಿಕ ಸಂಭ್ರಮದಲ್ಲಿ ವಿದುಷಿ ಡಾ.ಮಾಲತಿ ಗೋಪಾಲಕೃಷ್ಣ ಅಭಿಮತ

ಮೈಸೂರು, ಜೂ.2– ಮೈಸೂರಿನ ರಾಮಕೃಷ್ಣನಗರದ ಸ್ವರಾಲಯ ಸಂಗೀತ ಸಂಸ್ಥೆಯು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ವಿಜಯನಗರ ಒಂದನೇ ಹಂತದಲ್ಲಿರುವ ಜಿಲ್ಲಾ ಸಾಹಿತ್ಯ ಭವನದಲ್ಲಿ 'ಸ್ವರಾಲಯ ಸಾಂಸ್ಕೃತಿಕ ಸಂಭ್ರಮ-2026' ಕಾರ್ಯಕ್ರಮವನ್ನು ಆಯೋಜಿಸಿತ್ತು.

ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಸಂಗೀತ ಶಿಕ್ಷಕಿ ವಿದುಷಿ ಡಾ.ಮಾಲತಿ ಗೋಪಾಲಕೃಷ್ಣ ಅವರು ಮಾತನಾಡಿ, ಸ್ವರಾಲಯ ಸಂಗೀತ ಸಂಸ್ಥೆ ಅನೇಕ ಹೃದಯಗಳಲ್ಲಿ ಸಂಗೀತದಿಂದ ದೀಪ ಹಚ್ಚುತ್ತಿರುವ ಪವಿತ್ರ ಯಜ್ಞ ನಡೆಸುತ್ತಿದೆ. 35 ವರ್ಷಗಳಿಂದ ಅಚಲ ಸಮರ್ಪಣಾ ಮನೋಭಾವ, ತಾಳ್ಮೆ ಮತ್ತು ಮಹಿಳಾ ಶಕ್ತಿಯ ಸಹಕಾರದಿಂದ ವಿದುಷಿ ಡಾ. ಸುಮ ಹರಿನಾಥ್ ಅವರು ಸಂಸ್ಥೆಯನ್ನು ಬೆಳೆಸಿದ್ದಾರೆ ಎಂದು ಪ್ರಶಂಸಿಸಿದರು.

ಮಹಿಳೆ ಸಂಕಲ್ಪ ಮಾಡಿದರೆ ಎಂತಹ ಮಹತ್ತರ ಸಾಧನೆಯೂ ಸಾಧ್ಯ ಎಂಬುದಕ್ಕೆ ಇವರು ಉದಾಹರಣೆ. ಇವರು ಹಲವು ಮನೆಗಳಲ್ಲಿ ಸಂಗೀತದ ನಾದವನ್ನು ಉಸಿರಾಗಿಸಿದ್ದಾರೆ. ಅನೇಕರ ಕಂಠದಲ್ಲಿ ಆತ್ಮವಿಶ್ವಾಸದ ಸ್ವರ ತುಂಬಿದ್ದಾರೆ. ಸ್ವ-ಎಂದರೆ ಸ್ವಚ್ಛ ಭಾವನೆಗಳ ಸ್ವರ, ರಾ-ಎಂದರೆ ರಾಗಗಳ ರಮ್ಯಲೋಕ, ಲ-ಲಯದ ಲಾಲಿತ್ಯ, ಯ-ಯುಗ ಯುಗಾಂತರ ಉಳಿಯುವ ಸಂಸ್ಕೃತಿಯೇ ಸ್ವರಾಲಯ. ಇದು ಸಂಸ್ಕಾರ, ಶಿಸ್ತು, ಸಾಧನೆ ಮತ್ತು ಸೌಂದರ್ಯದ ಸಂಗಮ ಎಂದರು.

ಸಂಗೀತ ಎಂಬುದು ಕೇವಲ ಕಲೆಯಲ್ಲ, ಮನಸ್ಸಿಗೆ ಮುದ, ಆತ್ಮಕ್ಕೆ ಆಧಾರ. ಭಾವನೆಗಳಿಗೆ ಭಾಷೆಯ ಮಾತುಗಳು ತಲುಪದಿದ್ದಾಗ ಸಂಗೀತ ಮನಸ್ಸನ್ನು ಸಮಾಧಾನಪಡಿಸುತ್ತದೆ. ಸಂಗೀತ ಸಂತೋಷವನ್ನು ಇನ್ನಷ್ಟು ಸುಂದರಗೊಳಿಸುವ ಮಂತ್ರವಾಗಿದೆ ಎಂದು ಅಭಿಪ್ರಾಯಿಸಿದರು.



'ಸ್ವರಾಲಯ ಸಾಂಸ್ಕೃತಿಕ ಸಂಭ್ರಮ–2026' ಕಾರ್ಯಕ್ರಮಕ್ಕೆ ಸಂಗೀತ ಶಿಕ್ಷಕಿ ವಿದುಷಿ ಡಾ.ಮಾಲತಿ ಗೋಪಾಲಕೃಷ್ಣ ಜ್ಯೋತಿ ಬೆಳಗಿ ಚಾಲನೆ ನೀಡಿದರು.

ಡಿಪ್ಲೋಮಾ ಕೋರ್ಸುಗಳಿಗೆ ಪ್ರವೇಶ ಪ್ರಕ್ರಿಯೆ ವಿಸ್ತರಣೆ

ಮೈಸೂರು, ಜೂ.2– ಜೆಎಸ್‌ಎಸ್ ಮಹಿಳಾ ಪಾಲಿಟೆಕ್ನಿಕ್‌ನಲ್ಲಿ 2026-27ನೇ ಸಾಲಿನಲ್ಲಿ ಸರ್ಕಾರಿ ಕೋಟಾದಡಿ ಖಾಲಿ ಉಳಿದಿರುವ ಪ್ರಥಮ ಸೆಮಿಸ್ಟರ್ ಡಿಪ್ಲೋಮಾ ಕೋರ್ಸುಗಳಿಗೆ ಪ್ರವೇಶ ಪ್ರಕ್ರಿಯೆಯನ್ನು ಜೂ.30 ರವರೆಗೆ ವಿಸ್ತರಿಸಲಾಗಿದೆ.

ಎಸ್‌ಎಸ್‌ಎಲ್‌ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಶೇ.35 ಅಂಕಗಳೊಂದಿಗೆ ಉತ್ತೀರ್ಣರಾದ ಅರ್ಹ ವಿದ್ಯಾರ್ಥಿಗಳು ಮೂಲ ದಾಖಲಾತಿಗಳೊಂದಿಗೆ ಸಂಸ್ಥೆಗೆ ಭೇಟಿ ನೀಡಿ, ಪ್ರವೇಶ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಶ್ರೀಮತಿ ಎಂ.ಸವಿತ (9591650765) ಅಥವಾ ಪ್ರಾಂಶುಪಾಲರಾದ ಶ್ರೀಮತಿ ಮಂಜುಳಾ ಕೆ.ಶ್ರೀಧರ್ (ಮೊ. 9449049345) ಅವರನ್ನು ಸಂಪರ್ಕಿಸಬಹುದು.

ಡಾ.ಮಹದೇವಪ್ಪ, ಡಾ.ಯತೀಂದ್ರರಿಗೆ ಸೂಕ್ತ ಪ್ರಾತಿನಿಧ್ಯಕ್ಕೆ ಆಗ್ರಹ

ಮೈಸೂರು,ಜೂ.2(ಎಂಟಿವೈ)– ನೂತನ ಸರ್ಕಾರದಲ್ಲಿ ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಹಾಗೂ ಮಾಜಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅವರಿಗೆ ಸೂಕ್ತ ಪ್ರಾತಿನಿಧ್ಯ ನೀಡಬೇಕೆಂದು ಮಳವಳ್ಳಿಯ ಕಾಂಗ್ರೆಸ್ ಮುಖಂಡ ಬಿ.ಎಂ. ಮಹೇಂದ್ರಕುಮಾರ್ ಒತ್ತಾಯಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿ ಸಚಿವರಾಗಿದ್ದ ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ವೈದ್ಯರಾಗಿದ್ದು, ತಮ್ಮ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿಭಾಯಿಸಿದ್ದಾರೆ. ಅಲ್ಲದೆ ರಾಜ್ಯದ ಅಭಿವೃದ್ಧಿಗೂ ಶ್ರಮಿಸಿದ್ದಾರೆ. ಹೀಗಾಗಿ ಯತೀಂದ್ರ ಅವರನ್ನು ಡಿಸಿಎಂ ಮಾಡಬೇಕು ಹಾಗೂ ಹೆಚ್.ಸಿ. ಮಹದೇವಪ್ಪ ಅವರಿಗೆ ವೈದ್ಯಕೀಯ ಖಾತೆ ನೀಡಬೇಕು ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಮಾರಶೆಟ್ಟಿಹಳ್ಳಿ ರಂಗಪ್ಪ, ರೇಣಕಕುಮಾರ್ ಇದ್ದರು.

ನಾಲ್ವಡಿ ಪ್ರಶಸ್ತಿಗೆ ಬನ್ನೂರು ರಾಜು ಭಾಜನ

ಮೈಸೂರು, ಜೂ.2– 'ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್' ಪ್ರಶಸ್ತಿಗೆ ಸಾಹಿತ್ಯ ಕ್ಷೇತ್ರದಿಂದ ಸಾಹಿತಿ, 'ಮೈಸೂರು ಮಿತ್ರ'ನ ಅಂಕಣ ಬರಹಗಾರ ಬನ್ನೂರು ಕೆ.ರಾಜು ಅವರು ಭಾಜನರಾಗಿದ್ದಾರೆ. ಮೈಸೂರಿನ ಕಲಾಮಂದಿರದಲ್ಲಿ ಜೂ.4ರಂದು ನಡೆಯಲಿರುವ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿಯ ರಾಜ್ಯಮಟ್ಟದ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.



ಆರ್‌ಸಿಬಿ ಗೆಲುವಿನ ಸಂಭ್ರಮ



ಐಪಿಎಲ್‌ನಲ್ಲಿ ಆರ್‌ಸಿಬಿ ಎರಡನೇ ಬಾರಿ ಚಾಂಪಿಯನ್ ಆದ ಹಿನ್ನೆಲೆಯಲ್ಲಿ ಮೈಸೂರಿನ ದೇವರಾಜ ಅರಸು ರಸ್ತೆಯಲ್ಲಿ ಕ್ರಿಕೆಟ್ ಅಭಿಮಾನಿಗಳು ಶಾಸಕ ಹರೀಶ್‌ಗೌಡ ನೇತೃತ್ವದಲ್ಲಿ ಆರ್‌ಸಿಬಿ ತಂಡದ ಆಟಗಾರರ ಬೃಹತ್ ಕಟೌಟ್ ಅಳವಡಿಸಿ, ಪಟಾಕಿ ಸಿಡಿಸಿ, ಕೇಕ್ ಕತ್ತರಿಸಿ, ಸಾರ್ವಜನಿಕರಿಗೆ ಸಿಹಿ ಹಂಚುವ ಮೂಲಕ ಸಂಭ್ರಮಿಸಲಾಯಿತು. ಈ ವೇಳೆ ಕ್ರಿಕೆಟ್ ಅಭಿಮಾನಿಗಳಾದ ನವೀನ್, ಗುರುರಾಜ್, ಪ್ರಮೋದ್, ರವಿಚಂದ್ರ, ಎಸ್.ಎನ್.ರಾಜೇಶ್, ಸಂತೋಷ್, ಮಂಜುನಾಥ್, ಹರೀಶ್ ಗೌಡ, ಕಿರಣ್, ಅಭಿ, ಹರ್ಷ, ವರುಣ್, ಶ್ರೀನಿವಾಸ್ ಶೆಟ್ಟಿ, ಮಂಜು, ಶಿವು ಮತ್ತಿತರರು ಉಪಸ್ಥಿತರಿದ್ದರು.



ಹುಟ್ಟುಹಬ್ಬದ ಶುಭಾಶಯ

ಮೈಸೂರು ನಗರದ ಸಂಚಾರ ಮತ್ತು ಅಪರಾಧ ವಿಭಾಗದ ಡಿಸಿಪಿ ಸುಂದರ್ ರಾಜ್ ಅವರಿಗೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಹುಟ್ಟುಹಬ್ಬದ ಶುಭಾಶಯ ಕೋರಿ, ಅಭಿನಂದಿಸಿದರು. ಈ ವೇಳೆ ಪ್ರೊ.ಎಂ.ಕೃಷ್ಣೇಗೌಡ, ನಿವೃತ್ತ ಪೊಲೀಸ್ ಅಧಿಕಾರಿ ಮೋಹನ್, ಜೈನಹಳ್ಳಿ ಸತ್ಯನಾರಾಯಣಗೌಡ, ಪ್ರಕಾಶ್ ಚಿಕ್ಕಪಾಳ್ಯ, ಸಿದ್ದರಾಜು ಮತ್ತಿತರರು ಉಪಸ್ಥಿತರಿದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು,ಜೂ,2–ಮೈಸೂರು–ಚಾಮರಾಜನಗರ ಜಿಲ್ಲಾ ವೀರಶೈವ–ಲಿಂಗಾಯತ ಮಠಾಧಿಪತಿಗಳ ಗೋಷ್ಠಿ ಸಂಘದ ವತಿಯಿಂದ ಜಗದ್ಗುರು ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ 111ನೇ ಜಯಂತಿ ಅಂಗವಾಗಿ ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ವೀರಶೈವ–ಲಿಂಗಾಯತ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಿದೆ. ಅರ್ಜಿ ಸಲ್ಲಿಸಲು ಜೂನ್ 30 ಕೊನೆಯ ದಿನ. ಹೆಚ್ಚಿನ ಮಾಹಿತಿಗೆ ಮೊ: ಇಮ್ಮಡಿ ಉದ್ದಾನ ಸ್ವಾಮಿಗಳು– 9980906762, ಸಿ,\.ಮಹದೇವಪ್ರಸಾದ್– 9449030588 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಅಮೆರಿಕದಲ್ಲಿ ಗ್ರೀನ್‌ಕಾರ್ಡ್ ಅರ್ಜಿ ಸಲ್ಲಿಕೆಗೆ ಹೊಸ ಆದೇಶ

ವಾಷಿಂಗ್ಟನ್, ಜೂ.2– ಅಮೆರಿಕದಲ್ಲಿ ಗ್ರೀನ್‌ಕಾರ್ಡ್ ಸಂಚಲನ ಸೃಷ್ಟಿಸಿದೆ. ಖಾಯಂ ನಿವಾಸಿ ಪ್ರಮಾಣಪತ್ರ (ಗ್ರೀನ್ ಕಾರ್ಡ್) ಪಡೆಯಲು ಅರ್ಜಿ ಸಲ್ಲಿಸುವವರು ತಮ್ಮ ಮಾತೃ ದೇಶಗಳಿಗೆ ಹಿಂತಿರುಗಿ ಅಲ್ಲಿಂದಲೇ ಅಮೆರಿಕ ಕಾನ್ಸುಲೇಟ್ ಕಚೇರಿ ಮೂಲಕ ಅರ್ಜಿ ಸಲ್ಲಿಸಬೇಕು ಅಂತ ಅಮೆರಿಕ ಪೌರತ್ವ ಮತ್ತು ವಲಸೆ ವಿಭಾಗವು ಆದೇಶ ಹೊರಡಿಸಿದೆ.

ಇದರಿಂದಾಗಿ, ತಾತ್ಕಾಲಿಕ ವೀಸಾದಲ್ಲಿ ಇರುವವರು, ಅಕ್ರಮವಾಗಿ ವಾಸಿಸುತ್ತಿರುವವರು, ಗಂಡ/ಹೆಂಡತಿ ಅಥವಾ ಮಕ್ಕಳ ಪ್ರಾಯೋಜಕತ್ವ ಮೂಲಕ ಕಾನೂನು ಬದ್ಧ ವಲಸಿಗ ಸ್ಥಾನ ಪಡೆಯಲು ಪ್ರಯತ್ನಿಸುತ್ತಿರುವವರು ಈ ನಿಯಮದ ಅನ್ವಯ ದೇಶ ತೊರೆಯಬೇಕಿದೆ. ಎಚ್1ಬಿ ವೀಸಾ, ಎಲ್1 ವೀಸಾ ಹಾಗೂ ವಿದ್ಯಾರ್ಥಿ ವೀಸಾದಡಿ ಅಮೆರಿಕಕ್ಕೆ ಹೋಗಿದ್ದವರು ಅಲ್ಲಿಯೇ ಉಳಿದುಕೊಂಡು ಗ್ರೀನ್‌ಕಾಡ್‌ಗೆ ಅರ್ಜಿ ಸಲ್ಲಿಸಬಹುದಿತ್ತು. ಇದೀಗ ಮಾತೃದೇಶಗಳಿಗೆ ತೆರಳಿ ಅಲ್ಲಿಂದ ಅರ್ಜಿ ಸಲ್ಲಿಸಬೇಕಿದೆ.

ಮೈಸೂರು ರೈಲು ನಿಲ್ದಾಣ ಮೇಲ್ದರ್ಜೆ, ತೃತೀಯ ದ್ವಾರ ಯೋಜನೆ ಶೀಘ್ರ ಅನುಮೋದನೆಗೆ ಯದುವೀರ್ ಮನವಿ

ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಭೇಟಿ: ಚೆನ್ನೈ–ಮೈಸೂರು ಹೈಸ್ಪೀಡ್ ರೈಲು ಸಂಪರ್ಕ ವಿಸ್ತರಣೆಗೂ ಒತ್ತಾಯ

ಮೈಸೂರು, ಜೂ.2– ಮೈಸೂರು ರೈಲು ನಿಲ್ದಾಣದ ಬಹುಕಾಲದ ನಿರೀಕ್ಷೆಯಾದ ತೃತೀಯ ಪ್ರವೇಶ ದ್ವಾರ ಹಾಗೂ ನಿಲ್ದಾಣದ ಮೇಲ್ದರ್ಜೆಗೇರಿಸುವ ಕಾಮಗಾರಿಗಳಿಗೆ ತಕ್ಷಣ ಆಡಳಿತಾತ್ಮಕ ಮತ್ತು ಆರ್ಥಿಕ ಅನುಮೋದನೆ ನೀಡುವಂತೆ ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರಿಗೆ ಮನವಿ ಮಾಡಿದ್ದಾರೆ.

ಸೋಮವಾರ ಸಚಿವರನ್ನು ಭೇಟಿ ಮಾಡಿದ ಒಡೆಯರ್, ನಿಲ್ದಾಣ ಮೇಲ್ದರ್ಜೆ ಕಾಮಗಾರಿಗೆ ಅನುಮೋದನೆ ಜೊತೆಗೆ ಚೆನ್ನೈ–ಮೈಸೂರು ಹೈಸ್ಪೀಡ್ ರೈಲು(ಬುಲೆಟ್ ಟ್ರೈನ್) ಸಂಪರ್ಕವನ್ನು ವಿಸ್ತರಿಸುವ ಸಾಧ್ಯತೆಯನ್ನು ಪರಿಗಣಿಸುವಂತೆ ಕೋರಿದರು.

ಮೈಸೂರು ನಗರವು ಕರ್ನಾಟಕದ ಪ್ರಮುಖ ಸಾಂಸ್ಕೃತಿಕ, ಶೈಕ್ಷಣಿಕ, ಪ್ರವಾಸೋದ್ಯಮ ಹಾಗೂ ಆರ್ಥಿಕ ಕೇಂದ್ರವಾಗಿ ಬೆಳೆಯುತ್ತಿದೆ. ಈ ಹಿನ್ನೆಲೆಯಲ್ಲಿ ಹೆಚ್ಚುತ್ತಿರುವ ಪ್ರಯಾಣಿಕರ ಸಂಖ್ಯೆಗೆ ಅನುಗುಣವಾಗಿ ರೈಲ್ವೆ ಮೂಲಸೌಕರ್ಯಗಳನ್ನು ಮತ್ತಷ್ಟು ಬಲಪಡಿಸುವ ಅಗತ್ಯವಿದೆ. ಮೈಸೂರು ರೈಲು ನಿಲ್ದಾಣದ ತೃತೀಯ ಪ್ರವೇಶ ದ್ವಾರ ಹಾಗೂ ನಿಲ್ದಾಣ ಮೇಲ್ದರ್ಜೆ ಯೋಜನೆ ಸಂಬಂಧ ತಮ್ಮ ನಿರ್ದೇಶನದಂತೆ ವಾಸ್ತುಶಿಲ್ಪಿಗಳು ಹಾಗೂ ರೈಲ್ವೆ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿದ್ದು, ವಿನ್ಯಾಸ ಸೇರಿದಂತೆ ಯೋಜನಾ ಪ್ರಕ್ರಿಯೆಗಳು ಈಗಾಗಲೇ ಪೂರ್ಣಗೊಂಡಿವೆ. ಹಾಗಾಗಿ ಈ ಯೋಜನೆಗೆ ಶೀಘ್ರದಲ್ಲೇ ಆಡಳಿತಾತ್ಮಕ ಹಾಗೂ ಆರ್ಥಿಕ ಅನುಮೋದನೆ ನೀಡಿ, ಕಾಮಗಾರಿಗಳನ್ನು ತ್ವರಿತವಾಗಿ ಆರಂಭಿಸುವಂತೆ ಒತ್ತಾಯಿಸಿದರು.

ಸುಮಾರು 422 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗುವ ಈ ಯೋಜನೆಯು ಪ್ರಯಾಣಿಕರ ಅನುಕೂಲತೆಯನ್ನು ಗಣನೀಯವಾಗಿ ಹೆಚ್ಚಿಸುವುದರ ಜೊತೆಗೆ, ಪ್ರಸ್ತುತ ಇರುವ ಪ್ರವೇಶ ಮಾರ್ಗಗಳ ಮೇಲಿನ ಒತ್ತಡವನ್ನು ಕಡಿಮೆ ಮಾಡಲಿದೆ. ಅಲ್ಲದೆ, ವಿವಿಧ ಸಾರಿಗೆ ವ್ಯವಸ್ಥೆಗಳ ನಡುವಿನ ಸಂಪರ್ಕವನ್ನು ಸುಧಾರಿಸಿ, ದಕ್ಷಿಣ ಭಾರತದ ಪ್ರಮುಖ ರೈಲು ಕೇಂದ್ರವಾಗಿ ಮೈಸೂರಿನ ಸ್ಥಾನಮಾನವನ್ನು ಮತ್ತಷ್ಟು ಬಲಪಡಿಸಲಿದೆ ಎಂದು ತಿಳಿಸಿದರು.

ಚೆನ್ನೈ–ಮೈಸೂರು ಹೈಸ್ಪೀಡ್ ರೈಲು ಮಾರ್ಗ ವಿಸ್ತರಣೆ ಸಾಧ್ಯತೆಯನ್ನು ಭವಿಷ್ಯದ ಯೋಜನೆಗಳು ಹಾಗೂ ಕಾರ್ಯಸಾಧ್ಯತಾ ಅಧ್ಯಯನಗಳಲ್ಲಿ ಪರಿಗಣಿಸಬೇಕು. ಈ ಯೋಜನೆಯು ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳ ನಡುವಿನ ಆರ್ಥಿಕ ಏಕೀಕರಣವನ್ನು ಬಲಪಡಿಸುವುದರ ಜೊತೆಗೆ ಪ್ರವಾಸೋದ್ಯಮ, ವ್ಯಾಪಾರ ಹಾಗೂ ಹೂಡಿಕೆ ಅವಕಾಶಗಳಿಗೆ ಉತ್ತೇಜನ ನೀಡಲಿದೆ. ವೇಗ ಹಾಗೂ ಪರಿಸರಸ್ನೇಹಿ ನಗರಾಂತರ ಸಾರಿಗೆ ವ್ಯವಸ್ಥೆಯು ಉದ್ಯೋಗ ಸೃಷ್ಟಿಗೆ ಸಹಕಾರಿಯಾಗಲಿದೆ. ಇದರಿಂದ ಮೈಸೂರಿನ ಕೈಗಾರಿಕಾ ಮತ್ತು ಶೈಕ್ಷಣಿಕ ಪರಿಸರ ವ್ಯವಸ್ಥೆಯ ಬೆಳವಣಿಗೆಗೂ ಸಹಕಾರಿಯಾಗಲಿದೆ. ಈ ಎರಡೂ ಮಹತ್ವದ ಯೋಜನೆಗಳು ಪ್ರಯಾಣಿಕರ ಅನುಭವವನ್ನು ಉತ್ತಮಗೊಳಿಸುವುದರ ಜೊತೆಗೆ ದಕ್ಷಿಣ ಭಾರತದಲ್ಲಿ ವಿಶ್ವಮಟ್ಟದ ಸಾರಿಗೆ ಮೂಲಸೌಕರ್ಯಗಳ ನಿರ್ಮಾಣದ ಗುರಿಗೆ ಮಹತ್ವದ ಕೊಡುಗೆ ನೀಡಲಿವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.



ಯದುವೀರ್





ಅಶ್ವಿನಿ ವೈಷ್ಣವ್

ಇಂದು ದತ್ತಿ ಕಾರ್ಯಕ್ರಮಗಳ ಉದ್ಘಾಟನೆ

ಮೈಸೂರು, ಜೂ.2– ಮೈಸೂರು ಜಿಲ್ಲಾ ಮತ್ತು ತಾಲೂಕು ಶರಣ ಸಾಹಿತ್ಯ ಪರಿಷತ್, ಬಸವ ಅಧ್ಯಯನ ಕೇಂದ್ರ, ಶೇಷಾದ್ರಿಪುರಂ ಕಾಲೇಜು ಸಹಯೋಗದಲ್ಲಿ 2026–27ನೇ ಸಾಲಿನ ದತ್ತಿ ಕಾರ್ಯಕ್ರಮಗಳ ಉದ್ಘಾಟನೆ, ದತ್ತಿ ಉಪನ್ಯಾಸ ಹಾಗೂ ಶತಾಯುಷಿ ಬಸವಮಾರ್ಗಿಗಳಿಗೆ ಸನ್ಮಾನ–ಜಾನಪದ ಸಂಭ್ರಮ ಕಾರ್ಯಕ್ರಮವನ್ನು ಜೂನ್ 3 ರಂದು ಹೆಬ್ಬಾಳು ರಿಂಗ್ ರಸ್ತೆಯಲ್ಲಿರುವ ಶೇಷಾದ್ರಿ ಪುರಂ ಪದವಿ ಪೂರ್ವ ಕಾಲೇಜಲ್ಲಿ ಬೆಳಗ್ಗೆ 10.30ಕ್ಕೆ ಏರ್ಪಡಿಸಲಾಗಿದೆ.

ಕಾರ್ಯಕ್ರಮವನ್ನು ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಉದ್ಘಾಟಿಸಲಿದ್ದಾರೆ. ಶೇಷಾದ್ರಿ ಪುರಂ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ನಾಡೋಜ ವೂಡೇ ಪಿ ಕೃಷ್ಣ ಅಧ್ಯಕ್ಷತೆ ವಹಿಸುವರು, ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಡಾ.ಎಸ್.ಶಿವರಾಜಪ್ಪ ಶ್ರೀ ಮಲೆ ಮಹದೇಶ್ವರರ ಸಾಮಾಜಿಕ ಪ್ರಜ್ಞೆ ವಿಚಾರದ ಕುರಿತು ದತ್ತಿ ಉಪನ್ಯಾಸ ನೀಡಲಿದ್ದಾರೆ. ಖ್ಯಾತ ಗಾಯಕ ದೇವಾನಂದ ವರಪ್ರಸಾದ್ ಜಾನಪದ ಗಾಯನ ಪ್ರಸ್ತುತ ಪಡಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ದೊಡ್ಡ ಆಲಹಳ್ಳಿಯಿಂದ ಮುಖ್ಯಮಂತ್ರಿ ಗದ್ದುಗೆಗೆ

ಡಿಕೆಶಿ ಹೋರಾಟದ ರೋಚಕ ಪಯಣ



ರಾಜಕೀಯ ಮಾಡೋಕೆ ಕನಕಪುರ ತಾಲೂಕು ದೊಡ್ಡ ಆಲಹಳ್ಳಿಯಿಂದ ಬಂದಿದ್ದೇನೆ ಎಂದು ಹೇಳುತ್ತಲೇ ಬಂದ ದೊಡ್ಡ ಆಲಹಳ್ಳಿ ಕೆಂಪೇಗೌಡ ಶಿವಕುಮಾರ್ ಇಂದು ನಾಡಿನ ದೊರೆಯಾಗಿ ಸಂವಿಧಾನಾತ್ಮಕ ಪ್ರಜಾಪ್ರಭುತ್ವದಡಿ ಪ್ರಮಾಣ ವಚನ ಸ್ವೀಕರಿಸುತ್ತಿದ್ದಾರೆ.

ಸದ್ಯ, ಜೀವನ ಸಾರ್ಥಕವಾಯಿತು ಎಂಬ ಭಾವ ಮನದಲ್ಲಿದ್ದರೂ ದೇವರು ಕೊಟ್ಟರೆ ಬೇಡ ಅನ್ನಲಾದೀತೆ... ಅವನಿಚ್ಛೆ ಇದ್ದರೆ ಪ್ರಧಾನಿಯೂ ಆಗಲಿಬಿಡಿ ಎಂಬ ಛಲಗಾರ ಡಿ.ಕೆ.ಶಿವಕುಮಾರ್.

ಕನಕಪುರ ಬಂಡೆ ಖ್ಯಾತಿಯ ಡಿ.ಕೆ.ಶಿವಕುಮಾರ್ ಅವರ ಪ್ರಾರ್ಥನೆ ಕಡೆಗೂ ಫಲಿಸಿದ್ದು, ಕರ್ನಾಟಕ ಮುಖ್ಯಮಂತ್ರಿ ಗದ್ದಿಗೆಗೇರುವ ಭಾಗ್ಯ ಒದಗಿ ಬಂದಿದೆ.

ಕಳೆದ 2023ರ ವಿಧಾನಸಭಾ ಚುನಾವಣೆ ವೇಳೆ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಜೋಡಿ ಸಮರೋಪಾದಿಯಲ್ಲಿ ಪ್ರವಾಸ ನಡೆಸಿ, ಪಂಚ ಗ್ಯಾರಂಟಿಗಳ ಬಗ್ಗೆ ಜನರ ಮನಮುಟ್ಟಿಸಿದ ಪರಿಣಾಮ ಕಾಂಗ್ರೆಸ್ ಬಹುಮತದೊಂದಿಗೆ ಅಧಿಕಾರಕ್ಕೇರಲು ಸಾಧ್ಯವಾಯಿತು. ಹಾಗಾಗಿ ಈ ಸಾಧನೆಗೆ ಕಾರಣರಾದ ಉಭಯ ನಾಯಕರಿಗೂ ಸಮಾನ ಪ್ರತಿಫಲ ಕಲ್ಪಿಸಿಕೊಡಬೇಕೆಂಬ ನಿಟ್ಟಿನಲ್ಲಿ ಕಾಂಗ್ರೆಸ್ ಹೈಕಮಾಂಡ್ ಮಹತ್ವದ ನಿರ್ಧಾರ ಕೈಗೊಂಡಿದೆ.

ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿ ಮೂರು ವರ್ಷವಾಗುತ್ತಿದ್ದಂತೆ ಇನ್ನುಳಿದ ಎರಡು ವರ್ಷಗಳ ಆಡಳಿತವನ್ನು ಡಿ.ಕೆ.ಶಿವಕುಮಾರ್ ಹೆಗಲಿಗೆ ಹಾಕುತ್ತಿದೆ. ಕಾಂಗ್ರೆಸ್ ಕಟ್ಟಾಳು, ಪಕ್ಷದ ಟ್ರಬಲ್ ಶೂಟರ್ ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷರಾಗಿ ಪಕ್ಷವನ್ನು ಯಶಸ್ಸಿನ ಹಾದಿಯಲ್ಲಿ ಕೊಂಡೊಯ್ದಿದ್ದಾರೆ. ಹಲವು ಸಂಕಷ್ಟದ ಸಮಯದಲ್ಲಿ ಪಕ್ಷಕ್ಕಾಗಿ ಎದೆಕೊಟ್ಟು ನಿಂತಿದ್ದಾರೆ. ಇದಕ್ಕಾಗಿಯೇ ಟ್ರಬಲ್ ಶೂಟರ್ ಎಂಬ ಬಿರುದಿಗೆ ಪಾತ್ರರಾಗಿದ್ದಾರೆ. ಇದರಿಂದಲೇ ಸಾಕಷ್ಟು ವೈಯಕ್ತಿಕ ಸವಾಲು ಎದುರಿಸಿದ್ದಾರೆ. ಐಟಿ, ಇಡಿ, ಸಿಬಿಐ ಸೇರಿದಂತೆ ಹಲವು ತನಿಖಾ ಸಂಸ್ಥೆಗಳ ನಿರಂತರ ವಿಚಾರಣೆ ಎದುರಿಸಿದ್ದಾರೆ. ಒಮ್ಮೆ ತಿಹಾರ್ ಜೈಲಿಗೂ ಹೋಗಿ ಬಂದಿದ್ದಾರೆ. ಇಂತಹ ಅದೆಷ್ಟೋ ಸಂದಿಗ್ಧ ಪರಿಸ್ಥಿತಿಗಳನ್ನು ಡಿಕೆಶಿ, ಕಲ್ಲುಬಂಡೆಯಂತೆ ನಿಂತು ಸಹಿಸಿಕೊಂಡಿದ್ದಾರೆ.

ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿ ಆಗಬೇಕೆಂದು ಬಯಸುತ್ತಿದ್ದ ಬೆಂಬಲಿಗರು, ಬಹಿರಂಗವಾಗಿ ಹೇಳಿಕೆ ನೀಡಿದಾಗಲೂ ಡಿಕೆಶಿ ಸಮಾಧಾನದಿಂದ ಪರಿಸ್ಥಿತಿ ನಿಭಾಯಿಸಿದ್ದಾರೆ. ಎಷ್ಟೇ ಅವಮಾನ, ದುಃಖ-ದುಮ್ಮಾನಗಳಿದ್ದರೂ ತಮ್ಮ ಗಟ್ಟಿತನವನ್ನು ಎಂದೂ ಬಿಟ್ಟುಕೊಟ್ಟವರಲ್ಲ. ನಾಯಕತ್ವ ಬದಲಾವಣೆ ವಿಚಾರ ಹೆಚ್ಚು ಚರ್ಚೆಯಾದಾಗ ಡಿಕೆಶಿ, 'ಪ್ರಯತ್ನ ವಿಫಲವಾಗಬಹುದು ಆದರೆ ಪ್ರಾರ್ಥನೆ ಎಂದಿಗೂ ಫಲಿಸುತ್ತದೆ' ಎಂದು ನಯವಾಗಿ ಉತ್ತರಿಸಿದ್ದರು. ಮಹಾ ದೈವ ಭಕ್ತರಾದ ಇವರು ನಂಬಿದ ದೇವರು ಕೈಬಿಡುವುದಿಲ್ಲ ಎಂಬ ಅಚಲ ನಂಬಿಕೆಯೊಂದಿಗೆ ಕಾದಿದ್ದರು. ಅಂತೂ ಡಿಕೆಶಿ ಪರಿಶ್ರಮ ಹಾಗೂ ಪ್ರಾರ್ಥನೆ ಫಲಿಸಿದೆ.

ಓದಿನ ಜೊತೆ ಕೃಷಿ

ರಾಮನಗರ ಜಿಲ್ಲೆ, ಕನಕಪುರ ತಾಲೂಕಿನ ದೊಡ್ಡ ಆಲಹಳ್ಳಿ ಗ್ರಾಮದ ರೈತ ಕುಟುಂಬದ ಕೆಂಪೇಗೌಡ ಮತ್ತು ಗೌರಮ್ಮ ದಂಪತಿಯ ಪುತ್ರನಾಗಿ 1962ರ ಮೇ 15ರಂದು ಜನಿಸಿದ ಡಿ.ಕೆ.ಶಿವಕುಮಾರ್, ಅತ್ಯಂತ ಸಾಮಾನ್ಯ ಹಿನ್ನೆಲೆಯಲ್ಲಿ ಬೆಳೆದವರು. ಬಾಲ್ಯದಿಂದಲೇ ಓದಿನ ಜೊತೆಗೆ ಕೃಷಿ ಕೆಲಸದಲ್ಲೂ ತೊಡಗಿಸಿಕೊಳ್ಳುತ್ತಿದ್ದರು. ಕನಕಪುರದಲ್ಲಿ ಕರಿಯಪ್ಪ ಅವರ ವಿದ್ಯಾಸಂಸ್ಥೆಯಲ್ಲಿ ಶಾಲಾ ಶಿಕ್ಷಣ, ಬೆಂಗಳೂರಿನ ವಿದ್ಯಾವರ್ಧಕ ಸಂಘದಲ್ಲಿ ಎಸ್‌ಎಸ್‌ಎಲ್‌ಸಿ, ಹೈದರಾಬಾದ್ ಕರ್ನಾಟಕ ಎಜುಕೇಶನ್ ಸೊಸೈಟಿಯಲ್ಲಿ ಪಿಯುಸಿ ಮುಗಿಸಿದರು. ಜಗದ್ಗುರು ರೇಣುಕಾಚಾರ್ಯ ಕಾಲೇಜಿನಿಂದ ಬಿಎ ಪದವಿ ಪಡೆದರು. ಕೆಲ ವರ್ಷಗಳ ಬಳಿಕ ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ ರಾಜ್ಯಶಾಸ್ತ್ರದಲ್ಲಿ ಎಂಎ ಸ್ನಾತಕೋತ್ತರ ಪದವಿ ಪಡೆದರು.



ಹದಿಹರೆಯದಲ್ಲೇ ಕಾಂಗ್ರೆಸ್ ಕಟ್ಟಾಳು

ಡಿ.ಕೆ.ಶಿವಕುಮಾರ್ ತಮ್ಮ 18ನೇ ವಯಸ್ಸಿನಲ್ಲೇ ಎನ್‌ಎಸ್‌ಯುಐ ಕಾರ್ಯಕರ್ತನಾಗಿ ತಮ್ಮ ಹೋರಾಟ ಆರಂಭಿಸಿದರು. 1981-83ರ ತನಕ ಬೆಂಗಳೂರು ಜಿಲ್ಲಾ ಘಟಕದ ಅಧ್ಯಕ್ಷರಾಗಿದ್ದರು. ಬೆಂಗಳೂರಿನ ಆರ್‌ಸಿ ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗ ಯುವ ಕಾಂಗ್ರೆಸ್ ರಾಜ್ಯ ಘಟಕದ ಕಾರ್ಯದರ್ಶಿಯಾಗಿ ಆಯ್ಕೆಗೊಂಡರು. ಪಕ್ಷದಲ್ಲಿ ಕೇವಲ ನಾಯಕನಾಗಿ ಮಾತ್ರವಲ್ಲದೇ, ನಿಷ್ಠೆ, ಬದ್ಧತೆ, ನಿಪುಣತೆ ಮತ್ತು ದೃಢ ಸಂಕಲ್ಪದೊಂದಿಗೆ ಕೆಲಸ ಮಾಡುವ ಮೂಲಕ ನಾಯಕರಾಗಿ ಹೊರಹೊಮ್ಮಿದರು.

ವಿರೋಧಿಗಳಿಗೆ ಸಹೋದರರ ಸವಾಲ್




ಡಿ.ಕೆ.ಶಿವಕುಮಾರ್ ಮತ್ತು ಅವರ ಕಿರಿಯ ಸಹೋದರ ಡಿ.ಕೆ.ಸುರೇಶ್ ನಡುವಿನ ಬಾಂಧವ್ಯ ಮಾದರಿಯಾಗಿದೆ. ಪರಸ್ಪರ ಅಚಲ ನಂಬಿಕೆ ಮತ್ತು ಬೆಂಬಲದೊಂದಿಗೆ ಯಾವುದೇ ಸಮಸ್ಯೆಯನ್ನು ಒಗ್ಗಟ್ಟಿನಿಂದ ಎದುರಿಸುತ್ತಾರೆ. ತಮ್ಮನ ಬಗ್ಗೆ ಅಪಾರ ಪ್ರೀತಿ ಹೊಂದಿರುವ ಡಿ.ಕೆ.ಶಿವಕುಮಾರ್, 'ಸುರೇಶ್ ಕೇವಲ ತಮ್ಮನಲ್ಲ, ಅವನು ನನಗೆ ಮಗನಿದ್ದಂತೆ' ಎಂದು ಹಲವು ಬಾರಿ ಬಹಿರಂಗವಾಗಿ ಹೇಳಿಕೊಂಡಿದ್ದಾರೆ.

ಘಟಾನುಘಟಿ ವಿರುದ್ಧ ಚೊಚ್ಚಲ ಸ್ಪರ್ಧೆ



ಧೈರ್ಯ, ಹೋರಾಟದ ಕಿಚ್ಚು ಹೊಂದಿದ್ದ ಡಿ.ಕೆ.ಶಿವಕುಮಾರ್ 1985ರಲ್ಲಿ ಮೊದಲ ಬಾರಿಗೆ ಸಾತನೂರು ಕ್ಷೇತ್ರದಲ್ಲಿ ಜೆಡಿಎಸ್‌ನ ಹೆಚ್.ಡಿ.ದೇವೇಗೌಡರ(ಮಾಜಿ ಪ್ರಧಾನಿ) ವಿರುದ್ಧ ಚುನಾವಣಾ ಕಣಕ್ಕಿಳಿದು ಎಲ್ಲರ ಹುಬ್ಬೇರಿಸಿದರು. ಘಟಾನುಘಟಿ ನಾಯಕರ ವಿರುದ್ಧ ಯುವಕ ಸ್ಪರ್ಧೆ ಮಾಡುತ್ತಿದ್ದಾನೆಂದು ಎಲ್ಲರೂ ಚಕಿತಗೊಂಡಿದ್ದರು. ಆ ಚುನಾವಣೆಯಲ್ಲಿ ಡಿಕೆಶಿ ಪರಾಜಿತರಾದರೂ ಪ್ರಬಲ ಪೈಪೋಟಿ ನೀಡಿದರು. ದೇವೇಗೌಡರು ಪ್ರಯಾಸದ ಗೆಲುವು ಪಡೆದಾಗ ಡಿಕೆಶಿ ಭವಿಷ್ಯದಲ್ಲಿ ದೊಡ್ಡ ನಾಯಕರಾಗುತ್ತಾರೆಂಬ ಮುನ್ಸೂಚನೆ ದೊರಕಿತು.

ಜಿ.ಪಂ.ನಿಂದ ವಿಧಾನಸಭೆಗೆ!



1987ರಲ್ಲಿ ಸಾತನೂರು ಕ್ಷೇತ್ರದಿಂದ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿ ಸದಸ್ಯರಾಗಿ ಆಯ್ಕೆಯಾದರು. ಬಳಿಕ 1989ರ ವಿಧಾನಸಭಾ ಚುನಾವಣೆಯಲ್ಲಿ ಸಾತನೂರು ಕ್ಷೇತ್ರದಿಂದಲೇ ಸ್ಪರ್ಧಿಸಿ, ಜನತಾ ಪಕ್ಷದ ಯು.ಕೆ.ಸ್ವಾಮಿ ವಿರುದ್ಧ ಗೆಲುವು ದಾಖಲಿಸಿ, ವಿಧಾನಸಭೆ ಪ್ರವೇಶಿಸಿದರು. ಅಂದಿನಿಂದ ಈವರೆಗೆ ನಾಲ್ಕು ದಶಕಗಳ ರಾಜಕೀಯ ಪಯಣದಲ್ಲಿ ಹಲವು ಏಳು-ಬೀಳುಗಳನ್ನು ಕಂಡಿದ್ದಾರೆ. ರಾಜಕಾರಣ ಹೂವಿನ ಹಾದಿಯಲ್ಲ ಎಂಬುದನ್ನು ಬಹುಬೇಗ ಅರಿತುಕೊಂಡ ಡಿಕೆಶಿ, ಹಲವು ಸವಾಲುಗಳನ್ನು ದಿಟ್ಟವಾಗಿ ಎದುರಿಸಿದ್ದಾರೆ. ಇಂಧನ, ನಗರಾಭಿವೃದ್ಧಿ, ಸಹಕಾರ ಇಲಾಖೆ, ಹೀಗೆ ವಿವಿಧ ಇಲಾಖೆಗಳ ಸಚಿವರಾಗಿ ಸಮರ್ಥವಾಗಿ ಕಾರ್ಯ ನಿರ್ವಹಿಸಿದ್ದಾರೆ. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಸಾರಥ್ಯದ ಜೊತೆಗೆ ಉಪಮುಖ್ಯಮಂತ್ರಿಯಾಗಿ ಪಕ್ಷಕ್ಕೆ ಬಲ ತುಂಬಿದ್ದಾರೆ. ಹೀಗೆ ಸಮಚಿತ್ತತೆಯಿಂದ ಒಂದೊಂದೇ ಮೆಟ್ಟಿಲುಗಳನ್ನೇರಿ ರಾಜ್ಯದ ಮುಖ್ಯಮಂತ್ರಿಯಾಗುವ ಹೊಸ್ತಿಲಲ್ಲಿದ್ದಾರೆ.

ದೇಶದ ಶ್ರೀಮಂತ ರಾಜಕಾರಣಿಗಳ ಪಟ್ಟಿಯಲ್ಲಿ ಡಿಕೆಶಿ

ರಾಜಕೀಯ, ಕೃಷಿ ಜೊತೆಗೆ ಹಲವು ಉದ್ಯಮಗಳನ್ನು ಹೊಂದಿರುವ ಡಿಕೆಶಿ, ಭಾರತದ ಅತ್ಯಂತ ಶ್ರೀಮಂತ ರಾಜಕಾರಣಿಗಳ ಪಟ್ಟಿಯಲ್ಲಿ ನಿರಂತರವಾಗಿ ಸ್ಥಾನ ಪಡೆದಿದ್ದಾರೆ. ರಿಯಲ್ ಎಸ್ಟೇಟ್, ಹೋಟೆಲ್, ಶಿಕ್ಷಣ ಸಂಸ್ಥೆಗಳು, ವೈಯಕ್ತಿಕ ಹೂಡಿಕೆಗಳನ್ನು ಹೊಂದಿರುವ ಯಶಸ್ವಿ ಉದ್ಯಮಿಯಾಗಿದ್ದಾರೆ. ಡಿಕೆಎಸ್ ಚಾರಿಟೆಬಲ್ ಟ್ರಸ್ಟ್ ಮತ್ತು ರಾಷ್ಟ್ರೀಯ ಶಿಕ್ಷಣ ಪ್ರತಿಷ್ಠಾನದಿಂದ ನಿರ್ವಹಿಸಲ್ಪಡುವ ಬಹು ಶಿಕ್ಷಣ ಸಂಸ್ಥೆಗಳ ಸ್ಥಾಪಕರು ಮತ್ತು ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅಲ್ಲದೆ ಡಿಕೆಎಸ್ ಚಾರಿಟೆಬಲ್ ಟ್ರಸ್ಟ್ ಮೂಲಕ ಹಳ್ಳಿಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಿದ್ದಾರೆ. 2023ರ ಚುನಾವಣಾ ನಾಮಪತ್ರ ಸಲ್ಲಿಸುವ ಸಂದರ್ಭದಲ್ಲಿ ಅವರು 1,413 ಕೋಟಿ ರೂ ಮೌಲ್ಯದ ಆಸ್ತಿಯನ್ನು ಘೋಷಿಸಿಕೊಂಡಿದ್ದರು. ಇವರ ಸಹೋದರ ಡಿ.ಕೆ.ಸುರೇಶ್ ಕೂಡ ರಾಜಕಾರಣಿ. ಶಿವಕುಮಾರ್ 1993ರಲ್ಲಿ ಉಷಾ ಅವರನ್ನು ವಿವಾಹವಾದರು. ದಂಪತಿಗೆ ಐಶ್ವರ್ಯ ಮತ್ತು ಆಭರಣ ಎಂಬ ಪುತ್ರಿಯರು ಮತ್ತು ಆಕಾಶ್ ಎಂಬ ಪುತ್ರನಿದ್ದಾನೆ.

ಕಾಂಗ್ರೆಸ್ ಟ್ರಬಲ್ ಶೂಟರ್

2006ರ ಲೋಕಸಭಾ ಚುನಾವಣೆಯಲ್ಲಿ ಹೆಚ್.ಡಿ.ದೇವೇಗೌಡರ ವಿರುದ್ಧ ತೇಜಸ್ವಿನಿ ಗೌಡ ಅವರನ್ನು ಕಣಕ್ಕಿಳಿಸಿ ಗೆಲ್ಲಿಸಿದ ಡಿ.ಕೆ.ಶಿವಕುಮಾರ್ ಪಕ್ಷದ ಟ್ರಬಲ್ ಶೂಟರ್. ಮಹಾರಾಷ್ಟ್ರದಲ್ಲಿ ವಿಲಾಸ್ ರಾವ್ ದೇಶ್‌ಮುಖ್ ಸರ್ಕಾರ ಅಲ್ಪಮೊತ್ತಕ್ಕೆ ಕುಸಿಯುವ ಭೀತಿ ಎದುರಾದಾಗ ಅಲ್ಲಿನ ಶಾಸಕರನ್ನು ಡಿಕೆಶಿ ರಕ್ಷಣೆ ಮಾಡಿ ಬೆಂಗಳೂರಿಗೆ ಕರೆತಂದು ದೇಶ್‌ಮುಖ್ ಸರ್ಕಾರವನ್ನು ಉಳಿಸಿದರು. 2017ರಲ್ಲಿ ಗುಜರಾತ್ ವಿಧಾನಸಭೆಯಿಂದ ರಾಜ್ಯಸಭೆಗೆ ಚುನಾವಣೆ ನಡೆಯುವಾಗ ಹೈಕಮಾಂಡ್ ಸೂಚನೆಯಂತೆ ಪಕ್ಷದ 42 ಶಾಸಕರನ್ನು ಬೆಂಗಳೂರಿಗೆ ಕರೆತಂದು ಕುದುರೆ ವ್ಯಾಪಾರವಾಗದಂತೆ ನೋಡಿಕೊಂಡು ಅಹ್ಮದ್ ಪಟೇಲ್ ಚುನಾವಣೆಯಲ್ಲಿ ಗೆಲ್ಲಲು ಸಹಾಯ ಮಾಡಿದರು. ನೆರೆಯ ತೆಲಂಗಾಣ, ಕೇರಳ ವಿದಾನಸಬಾ ಚುನಾವಣೆಯಲಿ ಕಾಂಗೆಸ್ ಗೆಲುವಿನಲೂ ಡಿಕೆಶಿ ಪಾತ್ರ ಮಹತದಾಗಿತು.



ಮಾಜಿ ಮುಖ್ಯಮಂತ್ರಿಗಳಾದ ರಾಮಕೃಷ್ಣ ಹೆಗ್ಡೆ ಹಾಗೂ ಬಂಗಾರಪ್ಪ ಅವರೊಂದಿಗೆ ಡಿ.ಕೆ.ಶಿವಕುಮಾರ್.

ತಿಹಾರ್ ಜೈಲು ವಾಸ ಅನುಭವಿಸಿದರು



ಕಾಕತಾಳೀಯ ಎಂಬಂತೆ 2017ರಲ್ಲಿ ಗುಜರಾತ್ ಕಾಂಗ್ರೆಸ್ ಶಾಸಕರನ್ನು ಬೆಂಗಳೂರಿನ ರೆಸಾರ್ಟ್‌ನಲ್ಲಿ ಇರಿಸಿದ್ದ ಸಂದರ್ಭದಲ್ಲೇ ಡಿ.ಕೆ.ಶಿವಕುಮಾರ್ ಅವರ ನಿವಾಸ ಮತ್ತು ಕಚೇರಿಗಳ ಮೇಲೆ ಐಟಿ ದಾಳಿ ನಡೆಯಿತು. ಅಂದಿನಿಂದ ಈವರೆಗೂ ಐಟಿ, ಇಡಿ ಮತ್ತು ಸಿಬಿಐನಿಂದ ಹಲವು ಬಾರಿ ತನಿಖೆ ಎದುರಿಸಿದ್ದಾರೆ. ಹಣ ಅಕ್ರಮ ವರ್ಗಾವಣೆ ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ಇಡಿ ಅಧಿಕಾರಿಗಳು 2019ರಲ್ಲಿ ಡಿಕೆಶಿ ಅವರ ವಿಚಾರಣೆ ನಡೆಸಿ, ನವದೆಹಲಿಯಲ್ಲಿ ಅವರ ಬಂಧನವೂ ಆಗಿತ್ತು. ನಂತರ ಅವರನ್ನು ಸುಮಾರು ಒಂದೂವರೆ ತಿಂಗಳ ಕಾಲ ದೆಹಲಿಯ ತಿಹಾರ್ ಜೈಲಿನಲ್ಲಿ ನ್ಯಾಯಾಂಗ ಬಂಧನದಲ್ಲಿಡಲಾಗಿತ್ತು. ಆ ವೇಳೆ ಹೆಚ್.ಡಿ.ಕುಮಾರಸ್ವಾಮಿ ಸೇರಿದಂತೆ ಹಲವು ನಾಯಕರು ಭೇಟಿ ಮಾಡಿ, ಧೈರ್ಯ ತುಂಬಿದ್ದರು. ಮುಖ್ಯವಾಗಿ ಆಗ ಕಾಂಗ್ರೆಸ್ ಅಧ್ಯಕ್ಷೆಯಾಗಿದ್ದ ಸೋನಿಯಾ ಗಾಂಧಿ, ಜೈಲಿನಲ್ಲಿದ್ದ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿ ಮಾಡಿದ್ದರು. ಡಿಕೆಶಿ ಹೈಕಮಾಂಡ್‌ಗೆ ಎಷ್ಟು ನಿಷ್ಠರು ಮತ್ತು ನಂಬಿಕಸ್ಥರು ಎಂಬುದಕ್ಕೆ ಈ ಸಂದರ್ಭ ಸಾಕ್ಷಿಯಾಯಿತು. ಜಾಮೀನಿನ ಮೇಲೆ ಅಕ್ಟೋಬರ್ 23ರಂದು ಕಾರಾಗೃಹದಿಂದ ಹೊರಬಂದ ಡಿಕೆಶಿ, ಕೆಲ ತಿಂಗಳಲ್ಲೇ ಕೆಪಿಸಿಸಿ ಅಧ್ಯಕ್ಷರಾಗಿ ಜವಾಬ್ದಾರಿ ವಹಿಸಿಕೊಂಡು, ವಿವಿಧ ತನಿಖಾ ಸಂಸ್ಥೆಗಳ ವಿಚಾರಣೆ ನಡುವೆಯೂ ಪಕ್ಷವನ್ನು ಬಲಗೊಳಿಸುವಲ್ಲಿ ಯಶಸ್ವಿಯಾದರು.

ಎಸ್‌ಎಂಕೆ-ಡಿಕೆಶಿ ಗುರು-ಶಿಷ್ಯರು



ಮಾಜಿ ಮುಖ್ಯಮಂತ್ರಿ ದಿವಂಗತ ಎಸ್.ಎಂ.ಕೃಷ್ಣ ಹಾಗೂ ಡಿ.ಕೆ.ಶಿವಕುಮಾರ್ ನಡುವೆ ಗುರು-ಶಿಷ್ಯರ ಸಂಬಂಧವಿತ್ತು. ಎಸ್.ಎಂ.ಕೃಷ್ಣ ಅವರು ಕೆಪಿಸಿಸಿ ಅಧ್ಯಕ್ಷರಾಗಿ 1999ರ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಪರವಾಗಿ ಮೈಸೂರಿನಿಂದ ಆರಂಭಿಸಿ ರಾಜ್ಯಾದ್ಯಂತ 'ಪಾಂಚಜನ್ಯ' ಯಾತ್ರೆ ನಡೆಸಿ, ಪಕ್ಷ ಅಧಿಕಾರಕ್ಕೇರಲು ಕಾರಣರಾದರು. ಆ ಪಾಂಚಜನ್ಯ ಯಶಸ್ಸಿನಲ್ಲಿ ಡಿಕೆಶಿಯವರ ಪಾತ್ರ ಅತ್ಯಂತ ಮಹತ್ವದ್ದಾಗಿತ್ತು. ಡಿ.ಕೆ.ಶಿವಕುಮಾರ್ ಅವರು ಎಸ್.ಎಂ.ಕೃಷ್ಣ ಅವರನ್ನು ತಮ್ಮ ರಾಜಕೀಯ ಗುರು, ರಾಜಕೀಯ ಬೆಳವಣಿಗೆಗೆ ತಂದೆಯ ಸ್ಥಾನದಲ್ಲಿ ನಿಂತು ಮಾರ್ಗದರ್ಶನ ನೀಡಿದ್ದಾರೆ ಎಂದು ಹಲವು ವೇದಿಕೆಗಳಲ್ಲಿ ಹೇಳಿಕೊಂಡಿದ್ದಾರೆ. ಕೃಷ್ಣ ಅವರ ನಾಯಕತ್ವದ ಶೈಲಿ ಮತ್ತು ಆಡಳಿತದಿಂದ ಡಿಕೆಶಿ ಹೆಚ್ಚು ಪ್ರಭಾವಿತರಾಗಿದ್ದರು. ರಾಜಕೀಯ ಹೊರತು ಎಸ್‌ಎಂಕೆ ಹಾಗೂ ಡಿಕೆಶಿ ನಡುವೆ ಕೌಟುಂಬಿಕ ನಂಟು ಬೆಳೆಯಿತು. ಎಸ್‌ಎಂಕೆ ಮೊಮ್ಮಗ ಅಮರ್ತ್ಯ ಹೆಗಡೆಗೆ ತಮ್ಮ ಮೊದಲ ಪುತ್ರಿ ಐಶ್ವರ್ಯಾಳನ್ನು ಮದುವೆ ಮಾಡಿಕೊಟ್ಟಿದ್ದರು. ಈಗ ಡಿಕೆಶಿ ತಾತಾ!


ಅಂದುಕೊಂಡಿದ್ದನ್ನು ಸಾಧಿಸುವ ಛಲ



ಡಿ.ಕೆ.ಶಿವಕುಮಾರ್ ಅಂದುಕೊಂಡಿದ್ದನ್ನು ಸಾಧಿಸುವ ಛಲಗಾರ. 1991ರಲ್ಲಿ ಎಸ್.ಬಂಗಾರಪ್ಪನವರು ಮುಖ್ಯಮಂತ್ರಿಯಾಗಿ ಆಯ್ಕೆಯಾಗುವಲ್ಲಿ ಡಿಕೆಶಿ ಮಹತ್ವದ ಪಾತ್ರ ವಹಿಸಿದ್ದರು. ಬಂಗಾರಪ್ಪನವರು ತಮ್ಮ ಸಂಪುಟದಲ್ಲಿ ಡಿಕೆಶಿಗೆ ಬಂಧಿಖಾನೆ ಖಾತೆ ಹೊಣೆ ನೀಡಿದರು. 1994ರ ಚುನಾವಣೆಯಲ್ಲಿ ಕೆಲ ನಾಯಕರ ಪಿತೂರಿಯಿಂದಾಗಿ ಕಾಂಗ್ರೆಸ್ ಟಿಕೆಟ್ ಕೈತಪ್ಪಿತು. ಆಗಲೂ ಬೇರೆ ಪಕ್ಷ ಸೇರದೆ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿದು ಜಯ ಗಳಿಸಿದರು.

ಬಳಿಕ 1999ರ ಚುನಾವಣೆಯಲ್ಲಿ ಸಾತನೂರು ಕ್ಷೇತ್ರದಿಂದ ಕಾಂಗ್ರೆಸ್‌ನಿಂದಲೇ ಸ್ಪರ್ಧಿಸಿ, ಆಯ್ಕೆಗೊಂಡರು. ಆ ವೇಳೆ ಎಸ್.ಎಂ.ಕೃಷ್ಣ ಅವರ ಸಂಪುಟದಲ್ಲಿ ನಗರಾಭಿವೃದ್ಧಿ ಸಹಕಾರ ಸಚಿವರಾದರು. 2002ರಲ್ಲಿ ನಗರಾಭಿವೃದ್ಧಿ ಖಾತೆ ಸಚಿವರಾದರು. 2008ರಲ್ಲಿ ಕ್ಷೇತ್ರ ಪುನರ್ ವಿಂಗಡನೆ ಬಳಿಕ ಸಾತನೂರು ಕ್ಷೇತ್ರ ಇಲ್ಲವಾದಾಗ ಡಿಕೆಶಿ ಕನಕಪುರ ಕ್ಷೇತ್ರಕ್ಕೆ ಬಂದರು. 2008, 2013 ಮತ್ತು 2018ರ ಚುನಾವಣೆಯಲ್ಲಿ ಕನಕಪುರದಿಂದ ನಿರಂತರವಾಗಿ ಗೆಲುವು ಸಾಧಿಸಿದರು. 2013ರ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದು ಸಿದ್ದರಾಮಯ್ಯ ಮುಖ್ಯಮಂತ್ರಿಯಾದರೂ ಡಿ.ಕೆ.ಶಿವಕುಮಾರ್‌ಗೆ ಸುಲಭವಾಗಿ ಸಚಿವ ಸ್ಥಾನ ದೊರಕಲಿಲ್ಲ. ಅಂತಿಮವಾಗಿ ಹೈಕಮಾಂಡ್ ಒಪ್ಪಿದ ಮೇಲೆ ಸಂಪುಟ ಸೇರಿ ಇಂಧನ ಖಾತೆ ವಹಿಸಿಕೊಂಡರು. 2018ರ ಜೆಡಿಎಸ್-ಕಾಂಗ್ರೆಸ್ ಮೈತ್ರಿ ಸರ್ಕಾರದ ಹೆಚ್.ಡಿ.ಕುಮಾರಸ್ವಾಮಿ ಸಂಪುಟದಲ್ಲಿ ಡಿಕೆಶಿ, ಜಲಸಂಪನ್ಮೂಲ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾಗಿ ಕಾರ್ಯ ನಿರ್ವಹಿಸಿದರು. 2023ರ ಮೇ 20ರಿಂದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸದಸ್ಯರಾಗಿ, 2020ರಿಂದ ಕೆಪಿಸಿಸಿ ಅಧ್ಯಕ್ಷರಾಗಿ ರಾಜ್ಯದಲ್ಲಿ ಪಕ್ಷ ಮುನ್ನಡೆಸಿದ್ದಾರೆ.

ಅಜ್ಜಯ್ಯ ಎಂದರೆ ಅಪಾರ ಭಕ್ತಿ



ಡಿ.ಕೆ.ಶಿವಕುಮಾರ್ ಶಿವಭಕ್ತ. ಅಲ್ಲದೆ, ತುಮಕೂರು ನೊಣವಿನಕೆರೆಯ ಕರಿವೃಷಭ ದೇಶಿಕೇಂದ್ರ ಶಿವಯೋಗೀಶ್ವರ ಶ್ರೀಗಳು ಅರ್ಥಾತ್ ಅಜ್ಜಯ್ಯ ಅವರ ಬಗ್ಗೆ ಅಪಾರಭಕ್ತಿ. ಸಂದಿಗ್ಧ ಪರಿಸ್ಥಿತಿ ಎದುರಾದಾಗಲೆಲ್ಲಾ ಅಜ್ಜಯ್ಯ ಅವರ ಆಶೀರ್ವಾದ ಪಡೆದು, ಅವರ ಸೂಚನೆಯಂತೆಯೇ ನಡೆದುಕೊಳ್ಳುತ್ತಾರೆ. ಸರ್ಕಾರ ರಚನೆಯಾಗಿ ಎರಡೂವರೆ ವರ್ಷಗಳಾಗುತ್ತಿದ್ದಂತೆ ಡಿ.ಕೆ.ಶಿವಕುಮಾರ್‌ಗೆ ಅಧಿಕಾರ ಹಸ್ತಾಂತರಿಸುವ ಒಪ್ಪಂದವಾಗಿತ್ತಂತೆ. ಸೂಚಿತ ಅವಧಿ ಮುಗಿದರೂ ಡಿಕೆಶಿ, ಹೈಕಮಾಂಡ್‌ಗೆ ಮುಜುಗರ ತರುವ ಕೆಲಸ ಮಾಡಲಿಲ್ಲ. ಎಲ್ಲಿಯೂ ಅಧಿಕಾರ ಹಂಚಿಕೆ ಬಗ್ಗೆ ತುಟಿ ಬಿಚ್ಚಲಿಲ್ಲ. ಕಾಲ ಬಂದಾಗ ಧಕ್ಕುತ್ತದೆ ಎಂದು ಶಾಂತಚಿತ್ತತೆಯಿಂದಲೇ ನಡೆದುಕೊಳ್ಳುತ್ತಿದ್ದರು. ತಮ್ಮ ಶಕ್ತಿ, ಸಾಮರ್ಥ್ಯ, ಪರಿಶ್ರಮದೊಂದಿಗೆ ದೈವಕೃಪೆ, ಗುರುಹಿರಿಯರ ಆಶೀರ್ವಾದವೂ ಬಹಳ ಮುಖ್ಯ ಎಂಬುದು ಡಿಕೆಶಿ ನಂಬಿಕೆ. ಹಾಗೆಯೇ ನಡೆದು ಬಂದಿರುವುದರಿಂದ ಇದೀಗ ರಾಜ್ಯದ ಮುಖ್ಯಮಂತ್ರಿಯಾಗಿ ಜನರ ಸೇವೆ ಮಾಡುವ ಸುವರ್ಣಾವಕಾಶ ಎದುರಿಗಿದೆ.



ಮೈಸೂರು ಮಿತ್ರ

ಮೈಸೂರು ಜಿಲ್ಲಾ ಪೊಲೀಸರ ಭರ್ಜರಿ ಬೇಟೆ

189 ಕೋಟಿ ವಂಚನೆ; ಅಂತಾರಾಜ್ಯ ಖತರ್ನಾಕ್ ಸೈಬರ್ ವಂಚಕರ ಬಂಧನ

●ಭಾರೀ ಲಾಭದ ಆಸೆ ತೋರಿಸಿ ಅಮಾಯಕರಿಗೆ ಮೋಸ ●ಮೈಸೂರಿನ ಒಂದು ಪ್ರಕರಣದಿಂದ ಇವರ ಇಡೀ ಜಾತಕ ಬಯಲು ●ದೇಶಾದ್ಯಂತ ಬಹುತೇಕ ರಾಜ್ಯಗಳಲ್ಲಿ ಇವರ ಕೈಚಳಕ ●ವಿವಿಧ ಬ್ಯಾಂಕ್‌ಗಳ 56 ಖಾತೆಗಳಲ್ಲಿ ವ್ಯವಹಾರ

ಮೈಸೂರು, ಜೂ.2(ಬಿಎಲ್‌ಯು)– ಕಡಿಮೆ ಬೆಲೆಗೆ ಚಿನ್ನ ಮಾರಾಟ, ಸುಲಭ ದರದಲ್ಲಿ ಸಾಲ ಸೌಲಭ್ಯ, ಸ್ಟಾಕ್ ಮಾರ್ಕೆಟ್ ಹೂಡಿಕೆಯಿಂದ ಹಣ ದುಪ್ಪಟ್ಟಿನ ಆಸೆ ತೋರಿಸಿ 189 ಕೋಟಿ ವಂಚನೆ ಮಾಡಿದ್ದ ಮೂವರು ಅಂತಾರಾಜ್ಯ ಖತರ್ನಾಕ್ ಸೈಬರ್ ವಂಚಕರನ್ನು ಮೈಸೂರು ಜಿಲ್ಲಾ ಪೊಲೀಸರು ಬಂಧಿಸಿದ್ದಾರೆ.

ಮೈಸೂರಿನ ಎಸ್ಪಿ ಕಚೇರಿ ಸಭಾಂಗಣದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಈ ಬಗ್ಗೆ ಸಮಗ್ರ ವಿವರ ನೀಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಅವರು, ಕಡಿಮೆ ಬೆಲೆಗೆ ಚಿನ್ನ ನೀಡುವ ಆಸೆ ತೋರಿಸಿ ಮೈಸೂರಿನ ಕೆ.ಆರ್.ನಗರದ ಚಿನ್ನದ ವ್ಯಾಪಾರಿಗೆ ವಂಚನೆ ಮಾಡಿದ ಪ್ರಕರಣವನ್ನು ಸೈಬರ್ ಪೊಲೀಸರು ಬೆನ್ನತ್ತಿದಾಗ ಈ ಪ್ರಕರಣ ಬಯಲಾಯಿತು ಎಂದು ತಿಳಿಸಿದರು.

ಪಂಜಾಬ್‌ನ ಅಮಿತ್ ಸಿಂಗ್ ಅಲಿಯಾಸ್ ಅನಿ, ಮಹಾರಾಷ್ಟ್ರದ ಯತೀನ್ ರಮೇಶ್ ಜೈನ್ ಹಾಗೂ ಮೊಹಮ್ಮದ್ ಶಾದಾಬ್ ಅಂಜುಮ್ ಸೈಬರ್ ಅಪರಾಧಿಗಳಾಗಿದ್ದಾರೆ. ಇವರಲ್ಲಿ ಪ್ರಮುಖ ಆರೋಪಿ ಅಮಿತ್ ಸಿಂಗ್ ತಲೆ ಮರೆಸಿಕೊಂಡಿದ್ದರೆ, ಯತೀನ್ ರಮೇಶ್ ಜೈನ್ ಹಾಗೂ ಮೊಹಮ್ಮದ್ ಶಾದಾಬ್ ಅಂಜುಮ್ ಅವರನ್ನು ಬಂಧಿಸಲಾಗಿದೆ.

ಕೆ.ಆರ್.ನಗರದ ಚಿನ್ನದ ವ್ಯಾಪಾರಿ ಜಿತೇಂದ್ರ ಕುಮಾರ್ ಖಂಡೇಲ್ ಅವರನ್ನು ವಾಟ್ಸಾಪ್ ಕಾಲ್ ಮೂಲಕ ಸಂಪರ್ಕಿಸಿದ ಸೈಬರ್ ಅಪರಾಧಿಗಳು, ಪ್ರತಿ ಗ್ರಾಂ ಚಿನ್ನಕ್ಕೆ 600 ರೂಪಾಯಿ ಕಡಿಮೆ ಬೆಲೆ ನೀಡುವುದಾಗಿ ನಂಬಿಸಿದ್ದಾರೆ. ಈಗ ಚಿನ್ನಕ್ಕೆ ದುಬಾರಿ ಬೆಲೆ ಇರುವ ಹಿನ್ನೆಲೆಯಲ್ಲಿ ಕಡಿಮೆ ಬೆಲೆಗೆ ಚಿನ್ನ ಖರೀದಿಸಿದರೆ ಬಾರೀ ಲಾಭ ಮಾಡಬಹುದು ಎಂಬ ಆಸೆಯಿಂದ ವಂಚಕರು ಎಣೆದ ಬಲೆಗೆ ಈ ವ್ಯಾಪಾರಿ ಬಿದ್ದಿದ್ದಾರೆ ಎಂದರು.

ಅತಿಯಾದ ಲೆಕ್ಕಾಚಾರದಿಂದ ದುರಾಸೆಗೆ ಬಿದ್ದ ಜಿತೇಂದ್ರ ಕುಮಾರ್ ಖಂಡೇಲ್ ಅವರು 100 ಗ್ರಾಂ ಚಿನ್ನಕ್ಕೆ 13,69,000 ರೂಪಾಯಿಗಳನ್ನು ಸೈಬರ್ ಅಪರಾಧಿಗಳ ಬ್ಯಾಂಕ್ ಖಾತೆಗೆ ಜಮಾ ಮಾಡಿದರು. ಚಿನ್ನ ತಲುಪಿಸುವುದಾಗಿ ವಂಚಕರು ನೀಡಿದ ಭರವಸೆ ಹುಸಿಯಾಯಿತು. ತಾನು ಮೋಸ ಹೋಗಿರುವುದು ದೃಢಪಟ್ಟ ನಂತರ ಜಿತೇಂದ್ರ ಕುಮಾರ್ ಖಂಡೇಲ್ ಅವರು ಮೈಸೂರು ಜಿಲ್ಲೆಯ ಸೈಬರ್ ಕ್ರೈಂ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಈ ಬಗ್ಗೆ ಇನ್ಸ್‌ಪೆಕ್ಟರ್ ಸುನೀಲ್ ಎಸ್.ಪಿ. ಅವರ ನೇತೃತ್ವದ ತಂಡ ಮಹಾರಾಷ್ಟ್ರದಲ್ಲಿ ಜಾಲಾಡಿ ಇಬ್ಬರನ್ನು ಬಂಧಿಸಿದ್ದು, ಪ್ರಮುಖ ಆರೋಪಿ ಅಮೀತ್ ಸಿಂಗ್ ಬಂಧಕ್ಕೆ ಬಲೆ ಬೀಸಿದ್ದಾರೆ ಎಂದು ತಿಳಿಸಿದರು.

ಕಳೆದ ನಾಲ್ಕೈದು ವರ್ಷಗಳಿಂದ ಸಕ್ರಿಯರಾಗಿರುವ ಇವರು ಈ ತನಕ 56 ಬ್ಯಾಂಕ್ ಖಾತೆಗಳನ್ನು ಹೊಂದಿದ್ದು, ದೇಶದ ವಿವಿಧ ರಾಜ್ಯಗಳಲ್ಲಿ 196 ಪ್ರಕರಣಗಳು ಇವರ ವಿರುದ್ಧ ದಾಖಲಾಗಿದೆ. ಇವರ ಬ್ಯಾಂಕ್ ಅಕೌಂಟ್ ಪರಿಶೀಲನೆ ನಡೆಸಿದಾಗ ಸುಮಾರ್ 189.49 ಕೋಟಿ ರೂಪಾಯಿ ಸೈಬರ್ ವಂಚನೆ ಮಾಡಿರುವುದು ಬೆಳಕಿಗೆ ಬಂದಿದೆ. ಮೈಸೂರಿನಲ್ಲಿ ಒಂದು ಪ್ರಕರಣ ಸೇರಿದಂತೆ ಕರ್ನಾಟಕದಲ್ಲಿ 12 ದೂರುಗಳು ಇವರ ವಿರುದ್ಧ ದಾಖಲಾಗಿದೆ ಎಂದು ಮಲ್ಲಿಕಾರ್ಜುನ ಬಾದಲಂಡಿ ವಿವರ ನೀಡಿದರು.

35 ಲಕ್ಷ ಮೌಲ್ಯದ ಮೊಬೈಲ್ ಪತ್ತೆ: ಮೈಸೂರು ಜಿಲ್ಲೆಯಲ್ಲಿ ಈ ತನಕ ಕಳೆದು ಹೋದ ಹಾಗೂ ಕಳುವಾಗಿದ್ದ 173 ಆಂಡ್ರಾಯ್ಡ್ ಮೊಬೈಲ್ ಫೋನ್‌ಗಳನ್ನು ಪತ್ತೆ ಮಾಡಲಾಗಿದೆ ಎಂದು ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದರು.

ಕಡಿಮೆ ಬೆಲೆಗೆ ದೊರೆಯುತ್ತದೆ ಎಂಬ ಆಸೆಯಿಂದ ಕಳವು ಮಾಡಿದ ಅಥವಾ ಕಳೆದು ಹೋದ ಮೊಬೈಲ್‌ಗಳನ್ನು ಕೆಲವರು ಖರೀದಿ ಮಾಡುತ್ತಾರೆ. ಕೇಂದ್ರ ಸರ್ಕಾರದ ದೂರ ಸಂಪರ್ಕ ಇಲಾಖೆಯ ಸಿಇಐಆರ್ (ಸೆಂಟರ್ ಎಕ್ಯೂಪ್‌ಮೆಂಟ್ ಐಡೆಂಟಿಟಿ ರಿಜಿಸ್ಟರ್) ಪೋರ್ಟಲ್‌ನಲ್ಲಿ ಇಂತಹ ಮೊಬೈಲ್ ಫೋನ್‌ಗಳ ಬಗ್ಗೆ ದೂರು ನೀಡಿ ನೋಂದಣಿ ಮಾಡಿಸಿದರೆ ಸುಲಭವಾಗಿ ಪತ್ತೆ ಮಾಡಬಹುದು ಎಂದರು.

ಪತ್ತೆಯಾಗುವ ಮೊಬೈಲ್‌ಗೆ ನಮ್ಮ ಪೊಲೀಸರು ಕರೆ ಮಾಡಿ ಪೊಲೀಸ್ ಠಾಣೆಗೆ ಒಪ್ಪಿಸುವಂತೆ ಸೂಚನೆ ನೀಡುತ್ತಾರೆ. ಶೇಕಡ 50 ರಷ್ಟು ಮಂದಿ ವಾಪಾಸು ನೀಡಿದರೆ, ಉಳಿದವರು ಪೊಲೀಸ್ ಠಾಣೆಗೆ ಒಪ್ಪಿಸದೆ ಉದ್ಧಟತನ ತೋರುತ್ತಾರೆ. ತರುವಾಯ ನಮ್ಮ ಪೊಲೀಸರೇ ಅವರು ಇರುವ ಸ್ಥಳಕ್ಕೆ ಹೋಗಿ ಮೊಬೈಲ್ ವಶಕ್ಕೆ ಪಡೆಯುತ್ತಾರೆ. ಹೀಗೆ ಮಹಾರಾಷ್ಟ್ರ ಹಾಗೂ ಕೇರಳಗೆ ಮಾರಾಟವಾದ ಬಹಳಷ್ಟು ಮೊಬೈಲ್ ಗಳನ್ನು ಪಡೆಯಲಾಗಿದೆ ಎಂದು ಹೇಳಿದರು.

ಮೈಸೂರು ಜಿಲ್ಲೆಯಲ್ಲಿ 2024 ರಲ್ಲಿ 2,315 ಮಂದಿ ಪೋರ್ಟಲ್ ನಲ್ಲಿ ನೋಂದಣಿ ಮಾಡಿಸಿದ್ದರು, ಇದರಲ್ಲಿ 300 ಮೊಬೈಲ್ ಪತ್ತೆ ಮಾಡಲಾಗಿದೆ. 2025 ರಲ್ಲಿ 2,220 ನೋಂದಣಿ ಯಾಗಿತ್ತು, ಇದರಲ್ಲಿ 372 ಮೊಬೈಲ್ ಪತ್ತೆ ಹಚ್ಚಲಾಗಿದೆ. 2026 ರಲ್ಲಿ 1,075 ನೋಂದಣಿಯಾಗಿತ್ತು, ಇದರಲ್ಲಿ 445 ಮೊಬೈಲ್ ಪತ್ತೆ ಮಾಡಲಾಗಿದೆ. ಈ ಮೂಲಕ ಶೇಖಡ 66 ರಷ್ಟು ಪತ್ತೆ ಕಾರ್ಯದಲ್ಲಿ ನಮ್ಮ ಪೊಲೀಸರು ಯಶಸ್ವಿಯಾಗಿದ್ದಾರೆ ಎಂದು ತಿಳಿಸಿದರು.

ನೇಪಾಳದಲ್ಲಿ ಅಡಗಿದ್ದಾನೆ: ಹುಣಸೂರಿನ ಚಿನ್ನ ದರೋಡೆ ಪ್ರಕರಣದಲ್ಲಿ ಈಗಾಗಲೇ ಐವರನ್ನು ವಶಕ್ಕೆ ಪಡೆಯಲಾಗಿದೆ. ಆದರೆ ಪ್ರಮುಖ ಆರೋಪಿ ಪತ್ತೆಯಾಗದ ಹಿನ್ನೆಲೆಯಲ್ಲಿ ದರೋಡೆಯಾದ ಪೂರ್ತಿ ಚಿನ್ನ ಪತ್ತೆಯಾಗಿಲ್ಲ ಎಂದರು.

ಮೂಲ ಆರೋಪಿ ಪತ್ತೆಯಾದರೆ ಪೂರ್ತಿ ಚಿನ್ನ ವಶಕ್ಕೆ ಪಡೆಯಬಹುದು. ಈಗಾಗಲೇ ಇವನ ಬಂಧನಕ್ಕೆ ನಮ್ಮ ಪೊಲೀಸರು ಬಿಹಾರ, ಒಡಿಶಾ ಸೇರಿದಂತೆ ಇತರೆ ರಾಜ್ಯಗಳಲ್ಲಿ ಕಾರ್ಯಾಚರಣೆ ನಡೆಸಿದ್ದಾರೆ. ಆದರೆ ಈಗ ಬಂದಿರುವ ಮಾಹಿತಿ ಪ್ರಕಾರ ಪ್ರಮುಖ ಆರೋಪಿ ನೇಪಾಳದಲ್ಲಿ ಅಡಗಿದ್ದಾನೆ ಎನ್ನಲಾಗಿದೆ. ಆತ ಎಲ್ಲೆ ಅಡಗಿ ಕುಳಿತ್ತಿದ್ದರೂ ಅವನನ್ನು ಶೀಘ್ರವೇ ಬಂಧಿಸಲಾಗುವುದು ಎಂದು ಮಲ್ಲಿಕಾರ್ಜುನ ಬಾಲದಂಡಿ ವಿಶ್ವಾಸ ವ್ಯಕ್ತಪಡಿಸಿದರು.

ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕ್, ಡಿವೈಎಸ್ಪಿ ಶ್ರೀಕಾಂತ್, ಇನ್ಸ್‌ಪೆಕ್ಟರ್ ಎಸ್.ಪಿ.ಸುನೀಲ್ ಅವರು ಪತ್ರಿಕಾ ಗೋಷ್ಠಿಯಲ್ಲಿ ಉಪಸ್ಥಿತರಿದ್ದರು.



ಮೈಸೂರು ಎಸ್ಪಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಅವರು ಮೈಸೂರು ಜಿಲ್ಲೆಯಲ್ಲಿ ಕಳುವಾದ ಹಾಗೂ ಕಳೆದುಕೊಂಡ ಮೊಬೈಲ್‌ಗಳನ್ನು ಅದರ ವಾರಸುದಾರರಿಗೆ ಹಿಂದಿರುಗಿಸಿದರು.

ಮೈಸೂರಿನಲ್ಲಿ ಬಾಂಗ್ಲಾ ವಲಸಿಗರ ಪತ್ತೆಗೆ ಕಾರ್ಯಾಚರಣೆ

ಮೈಸೂರು ಜಿಲ್ಲೆಯಲ್ಲಿ ಅಕ್ರಮವಾಗಿ ವಾಸ ಮಾಡುತ್ತಿರುವ ಬಾಂಗ್ಲಾದೇಶದ ವಲಸಿಗರನ್ನು ಪತ್ತೆ ಮಾಡುವ ಕಾರ್ಯಾಚರಣೆ ಆರಂಭಿಸಲಾಗಿದೆ ಎಂದು ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದರು.

ಕಾರ್ಖಾನೆಗಳು ಹೆಚ್ಚಾಗಿರುವ ನಂಜನಗೂಡು ಸೇರಿದಂತೆ ಮೈಸೂರು ಜಿಲ್ಲೆಯ ಕಾರ್ಖಾನೆಗಳಿಗೆ ನಮ್ಮ ಪೊಲೀಸರು ಖುದ್ದು ಭೇಟಿ ನೀಡುತ್ತಿದ್ದಾರೆ. ಅಲ್ಲಿ ಕೆಲಸ ಮಾಡುವ ಪ್ರತಿಯೊಬ್ಬ ಕಾರ್ಮಿಕರ ಡಾಟಾ ಸಂಗ್ರಹಿಸುತ್ತಿದ್ದಾರೆ ಎಂದು ಹೇಳಿದರು.

ಕಾರ್ಮಿಕರ ಹೆಸರು, ವೃತ್ತಿ, ಹಾಲಿ ವಾಸ ಸ್ಥಳ, ಮೂಲತಃ ಎಲ್ಲಿಯವರು, ಎಷ್ಟು ವರ್ಷದಿಂದ ಕೆಲಸ ನಿರ್ವಹಿಸುತ್ತಿದ್ದಾರೆ ಎಂಬ ವಿವರ ಕಲೆ ಹಾಕಲಿದ್ದಾರೆ. ಇದರಿಂದ ಭಾರತೀಯರು ಯಾರು, ಬಾಂಗ್ಲಾದೇಶದ ವಲಸಿಗರು ಯಾರೆಂಬುದನ್ನು ಸುಲಭವಾಗಿ ಪತ್ತೆ ಮಾಡಬಹುದು ಎಂದು ಮಲ್ಲಿಕಾರ್ಜುನ ಬಾಲದಂಡಿ ಅಭಿಪ್ರಾಯಪಟ್ಟರು.

ಬೇನಾಮಿ ಬ್ಯಾಂಕ್ ಖಾತೆ ವ್ಯವಹಾರಕ್ಕೆ ಕೂಲಿ ಕಾರ್ಮಿಕರೇ ಟಾರ್ಗೆಟ್

ವಂಚನೆ ಎಸಗಿ ಬ್ಯಾಂಕ್ ಖಾತೆಗೆ ಬಂದ ಕೋಟ್ಯಾಂತರ ರೂಪಾಯಿ ಹಣವನ್ನು ಖತರ್ನಾಕ್ ಕ್ರಿಮಿನಲ್‌ಗಳು ಬುದ್ಧಿವಂತಿಕೆಯಿಂದ ಯಾವ ರೀತಿ ಬೇನಾಮಿ ಬ್ಯಾಂಕ್ ಖಾತೆಗಳಿಗೆ ವರ್ಗಾವಣೆ ಮಾಡುತ್ತಿದ್ದರು ಎಂಬ ಕುತೂಹಲಕಾರಿ ವಿಚಾರವನ್ನು ಮಲ್ಲಿಕಾರ್ಜುನ ಬಾಲದಂಡಿ ಅವರು ವಿವರಿಸಿದರು.

ಬ್ಯಾಂಕ್ ಅಕೌಂಟ್ ತೆರೆದು ಬೇನಾಮಿಯಾಗಿ ವ್ಯವಹಾರ ಮಾಡಲು ಅನಕ್ಷರಸ್ಥ ಕೂಲಿ ಕಾರ್ಮಿಕರೇ ಇವರ ಟಾರ್ಗೆಟ್. ದೇಶದ ಹಲವು ಸ್ಥಳಗಳ ಮುಗ್ಧ ಕೂಲಿ ಕಾರ್ಮಿಕರನ್ನು ಭೇಟಿ ಮಾಡುತ್ತಿದ್ದ ಇವರು ಸಾವಿರ ರೂಪಾಯಿ ಆಸೆ ತೋರಿಸುತ್ತಿದ್ದರು. ಬಳಿಕ ಅವರ ಬ್ಯಾಂಕ್ ಪಾಸ್ ಪುಸ್ತಕ, ಎಟಿಎಂ ಕಾರ್ಡ್, ಓಟಿಪಿ ಸೇರಿದಂತೆ ಇತರೆ ವಿವರವನ್ನು ಸಂಗ್ರಹಿಸುತ್ತಿದ್ದರು ಎಂದರು.

ಸೈಬರ್ ವಂಚನೆಯ ಹಣವನ್ನು ಕೂಲಿ ಕಾರ್ಮಿಕರ ಅಕೌಂಟ್‌ಗೆ ವರ್ಗಾವಣೆ ಮಾಡಿಸಿಕೊಂಡು ಅವರಿಂದ ಡ್ರಾ ಮಾಡಿಸಿಕೊಳ್ಳುತ್ತಿದ್ದರು. ಒಂದು ಚೆಕ್‌ಗೆ ಸಹಿ ಮಾಡಿದರೆ ಸಾವಿರಾರು ರೂಪಾಯಿ ಹಣ ಬರುತ್ತದೆ ಎಂಬ ಆಸೆಯಿಂದ ಕೂಲಿ ಕಾರ್ಮಿಕರು ತಮ್ಮ ಅರಿವಿಗೆ ಬಾರದೆ ಇವರ ವಂಚನೆ ಜಾಲಕ್ಕೆ ಸಿಲುಕುತ್ತಿದ್ದರು ಎಂದು ಮಲ್ಲಿಕಾರ್ಜುನ ಬಾದಲಂಡಿ ತಿಳಿಸಿದರು.

ದೇಶಾದ್ಯಂತ ವಿವಿಧ ರಾಜ್ಯಗಳಲ್ಲಿ ಬೇನಾಮಿ ಹೆಸರಿನಲ್ಲಿ ಇವರು ನಡೆಸುತ್ತಿದ್ದ ವಂಚನೆ ಈಗ ಬಹಿರಂಗವಾಗಿದೆ. ದುಬಾರಿ ಲಾಭದ ಆಸೆಗೆ ಮರುಳಾಗಿ ಇವರು ಬೀಸುವ ಜಾಲಕ್ಕೆ ಸಿಲುಕಿ ನೂರಾರು ಮಂದಿ ಹಣ ಕಳೆದುಕೊಂಡಿದ್ದಾರೆ. ಈ ತನಕ ಇವರು ಸುಮಾರು 189 ಕೋಟಿ ಹಣ ದೋಚಿರುವುದು ತನಿಖೆಯಿಂದ ತಿಳಿದು ಬಂದಿದೆ ಎಂದು ಹೇಳಿದರು. ಸೈಬರ್ ಅಪರಾಧ ಎಸಗಲು ಇವರೇನು ನುರಿತ ತಂತ್ರಜ್ಞರಲ್ಲ. ಪದವಿ ಪಡೆದು ಸೈಬರ್ ಅಪರಾಧವನ್ನೆ ಮೂಲ ವೃತ್ತಿಯಾಗಿ ಮಾಡಿಕೊಂಡಿದ್ದರು. ಈಗ ಇವರ ಮೂಲ ಖಾತೆ ಹಾಗೂ ಬೇನಾಮಿಯಾಗಿ ವ್ಯವಹಾರ ನಡೆಸುತ್ತಿದ್ದ ಎಲ್ಲಾ ಬ್ಯಾಂಕ್ ಖಾತೆಗಳನ್ನು ಫ್ರೀಜ್ ಮಾಡಲಾಗಿದೆ. ನ್ಯಾಯಾಲಯದ ಅನುಮತಿ ಪಡೆದು ಮೋಸ ಹೋದವರಿಗೆ ಹಣ ವಾಪಾಸು ಕೊಡಿಸಲಾಗುವುದು ಎಂದು ಮಲ್ಲಿಕಾರ್ಜುವ ಬಾದಲಂಡಿ ಭರವಸೆ ನೀಡಿದರು.

ಲಾಕ್ಡ್ ಹೌಸ್ ಬೀಟ್ ಸಿಸ್ಟಂ ಪರಿಚಯ: ಪರ ಸ್ಥಳಗಳಿಗೆ ಹೋಗುವವರು ಚಿಂತೆ ಬಿಡಿ!

ಮನೆಗೆ ಬೀಗ ಹಾಕಿ ಪರ ಸ್ಥಳಗಳಿಗೆ ಹೋಗುವವರ ಮನೆಗಳಲ್ಲಿ ಕಳ್ಳತನ ತಡೆಗಾಗಿ ಲಾಕ್ಡ್ ಹೌಸ್ ಬೀಟ್ ಸಿಸ್ಟಂ ಪರಿಚಯಿಸಲಾಗಿದೆ ಎಂದು ಮಲ್ಲಿಕಾರ್ಜುನ ಬಾಲದಂಡಿ ಅವರು ತಿಳಿಸಿದರು. ಮನೆಯಿಂದ ಪರ ಸ್ಥಳಗಳಿಗೆ ಹೋಗುವವರು ಗೂಗಲ್ ಫಾರಂ ಅಥವಾ ವಾಟ್ಸಾಪ್ ಮೂಲಕ ಸಮಗ್ರ ಮಾಹಿತಿ ನೀಡಬೇಕು. ಮನೆಯ ವಿಳಾಸ, ಮನೆ ಮುಂದೆ ನಿಂತು ಒಂದು ಸೆಲ್ಫಿ ಫೋಟೋ, ಗೂಗಲ್ ಮ್ಯಾಪ್ ಲೋಕೇಷನ್, ಸಿಸಿಟಿವಿ ಸೌಲಭ್ಯದ ಬಗ್ಗೆ ಮಾಹಿತಿ ಹಾಗೂ ಯಾವ ದಿನಾಂಕದಿಂದ ಯಾವ ದಿನಾಂಕದವರೆಗೆ ಪರ ಸ್ಥಳಕ್ಕೆ ಹೋಗುವ ಬಗ್ಗೆ ವಿವರ ನೀಡಬೇಕು ಎಂದು ತಿಳಿಸಿದರು.

ನಮ್ಮ ಕಂಟ್ರೋಲ್ ರೂಂನಲ್ಲಿರುವ ಪ್ರತ್ಯೇಕ ಸೆಲ್‌ನಲ್ಲಿ ಈ ಮಾಹಿತಿಗಳು ನಮೂದಾಗಲಿದೆ. ತರುವಾಯ ಕಂಟ್ರೋಲ್ ರೂಂನಿಂದ ಆ ವ್ಯಾಪ್ತಿಯ ಪೊಲೀಸ್ ಠಾಣೆಗೆ ಮಾಹಿತಿ ನೀಡಲಾಗುವುದು. ಅಲ್ಲಿನ ಬೀಟ್ ಪೊಲೀಸರು ಬೀಗ ಹಾಕಿರುವ ಮನೆಯ ಬಳಿ ಆಗಾಗ ಗಸ್ತು ತಿರುಗಲಿದ್ದು, ಕಳ್ಳತನ ತಪ್ಪಿಸಲಿದ್ದಾರೆ ಎಂದು ಭರವಸೆ ನೀಡಿದರು.

ಮೈಸೂರು ಜಿಲ್ಲೆಯಲ್ಲಿ 26 ಪೊಲೀಸ್ ಠಾಣೆಗಳಿದ್ದು, 155 ಪೊಲೀಸ್ ಪೇದೆಗಳ ಹುದ್ದೆ ಖಾಲಿ ಇವೆ. ಈ ಹಿನ್ನೆಲೆಯಲ್ಲಿ ವಿಶೇಷ ಕರ್ತವ್ಯಕ್ಕೆ ನಿಯೋಜಿಸುತ್ತಿದ್ದ ಸಿಬ್ಬಂದಿಗಳನ್ನೆ ರಾತ್ರಿ ಬೀಟ್‌ಗೆ ನೇಮಕ ಮಾಡಲಾಗಿದೆ ಎಂದು ಮಲ್ಲಿಕಾರ್ಜುನ ಬಾಲದಂಡಿ ಹೇಳಿದರು.

ಹಫ್ತಾ ವಸೂಲಿ: ಮೈಸೂರಿನ ಎಪಿಎಂಪಿ ಮಾರುಕಟ್ಟೆಯಲ್ಲಿ ರೌಡಿ ಶೀಟರ್ ಗೌತಮ್ ಅಲಿಯಾಸ್ ಅಪ್ಪಿಕ್ ಎಂಬಾತ ಮಾರಾಟಗಾರರನ್ನು ಹೆದರಿಸಿ ಹಫ್ತಾ ವಸೂಲಿ ಮಾಡುತ್ತಿದ್ದ. ಈತನ ಬಗ್ಗೆ ಪ್ರಕರಣ ದಾಖಲಿಸಿಕೊಂಡಿದ್ದ ಮೈಸೂರು ದಕ್ಷಿಣ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ ಎಂದು ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದರು.

ಈತನ ವಿರುದ್ಧ ಕೊಲೆ, ಕೊಲೆ ಯತ್ನ, ಹಫ್ತಾ ವಸೂಲಿ ಸೇರಿದಂತೆ ಇತರೆ ಆರೋಪದ ಬಗ್ಗೆ ವಿವಿಧ ಪೊಲೀಸ್ ಠಾಣೆಗಳಲ್ಲಿ 7 ಪ್ರಕರಣ ದಾಖಲಾಗಿತ್ತು. ಆರೋಪಿ ಗೌತಮ್‌ನನ್ನು ಬಂಧಿಸಿದ್ದು, ಸದ್ಯ ಈತ ನ್ಯಾಯಾಂಗ ಬಂಧನದಲ್ಲಿದ್ದಾನೆ. ಮತ್ತೆ ಇವನು ಇಂತಹ ಕೃತ್ಯ ಎಸಗದಂತೆ ಕಾನೂನಾತ್ಮಕ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಇ-ಖಾತೆಗೆ 25 ಸಾವಿರ ಲಂಚಕ್ಕೆ ಬೇಡಿಕೆ; ಲೋಕಾಯುಕ್ತ ದಾಳಿ

ಇಬ್ಬರು ಕಂದಾಯ ಅಧಿಕಾರಿಗಳು, ಮಧ್ಯವರ್ತಿ ಬಂಧನ

ಚಾಮರಾಜನಗರ, ಜೂ.2– ಇ-ಖಾತೆ ಮಾಡಿಕೊಡಲು ಲಂಚ ಸ್ವೀಕರಿಸುತ್ತಿದ್ದ ಇಬ್ಬರು ಅಧಿಕಾರಿಗಳು ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ನಗರಸಭೆ ಕಚೇರಿ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿ, ಲಂಚ ಪಡೆಯುತ್ತಿದ್ದ ಆರೋಪದಡಿ ಕಂದಾಯ ಅಧಿಕಾರಿ ಹೇಮಕುಮಾರ್, ಕಂದಾಯ ನಿರೀಕ್ಷಕ ಶಕೀಲ್ ಅಹಮದ್ ಹಾಗೂ ಸಹಕರಿಸಿದ ಮಧ್ಯವರ್ತಿ ಹಬೀಬ್‌ನನ್ನು ಬಂಧಿಸಿದ್ದಾರೆ.

25 ಸಾವಿರ ಲಂಚ: 14ನೇ ವಾರ್ಡ್‌ನಲ್ಲಿರುವ ಖಾಲಿ ನಿವೇಶನದ ಇ-ಖಾತೆ ಬದಲಾವಣೆಗಾಗಿ ಮೀಸೆ ನಾಗರಾಜು ಎಂಬುವರು ನಗರಸಭೆಗೆ ಅರ್ಜಿ ಸಲ್ಲಿಸಿದ್ದರು. ಆದರೆ, ಅರ್ಜಿ ವಿಲೇವಾರಿ ಮಾಡಿ ಇ-ಖಾತೆ ಮಾಡಿಕೊಡಲು ಕಂದಾಯ ವಿಭಾಗದ ಅಧಿಕಾರಿಗಳು 25 ಸಾವಿರ ಲಂಚ ನೀಡುವಂತೆ ಬೇಡಿಕೆ ಇಟ್ಟಿದ್ದರು. ಇದರಿಂದ ಬೇಸತ್ತ ಅರ್ಜಿದಾರ ಮೀಸೆ ನಾಗರಾಜು, ಲೋಕಾಯುಕ್ತ ಅಧಿಕಾರಿಗಳಿಗೆ ಸೋಮವಾರ ದೂರು ನೀಡಿದ್ದರು.

ಲೋಕಾಯುಕ್ತ ಎಸ್‌ಪಿ ಮಾರ್ಗದರ್ಶನ, ಡಿವೈಎಸ್ಪಿ ಗಜೇಂದ್ರ ಪ್ರಸಾದ್ ನಿರ್ದೇಶನದಲ್ಲಿ ಇನ್‌ಸ್ಪೆಕ್ಟರ್ ಲೋಹಿತ್ ಕುಮಾರ್ ನೇತೃತ್ವದ ತಂಡ, ಮಂಗಳವಾರ ಸಂಜೆ ಕಾರ್ಯಾಚರಣೆ ನಡೆಸಿದ್ದಾರೆ. ಮೀಸೆ ನಾಗರಾಜು ಅವರಿಂದ 25 ಸಾವಿರ ಲಂಚ ಸ್ವೀಕರಿಸುತ್ತಿದ್ದ ಸಮಯದಲ್ಲೇ ಅಧಿಕಾರಿ ಹೇಮಕುಮಾರ್, ನಿರೀಕ್ಷಕ ಶಕೀಲ್ ಅಹಮದ್ ಹಾಗೂ ಮಧ್ಯವರ್ತಿ ಹಬೀಬ್ ಅವರನ್ನು ಬಂಧಿಸಿ, ಲಂಚದ ಹಣವನ್ನು ಜಪ್ತಿ ಮಾಡಿದ್ದಾರೆ.

ತನಿಖೆ ಪ್ರಗತಿಯಲ್ಲಿದೆ: ಇ-ಖಾತೆ ಬದಲಾವಣೆ ಮಾಡಿಕೊಡಲು 25 ಸಾವಿರ ರೂಪಾಯಿಗಳ ಲಂಚ ನೀಡುವಂತೆ ಬೇಡಿಕೆ ಇಟ್ಟಿರುವ ಬಗ್ಗೆ ಅರ್ಜಿದಾರರು ನೀಡಿದ ದೂರಿನ ಆಧಾರದಲ್ಲಿ ಕಾರ್ಯಾಚರಣೆ ನಡೆಸಿ, ಇಬ್ಬರು ಅಧಿಕಾರಿಗಳು ಹಾಗೂ ಮಧ್ಯವರ್ತಿಯನ್ನು ಬಂಧಿಸಿ, ವಿಚಾರಣೆಗೆ ಒಳಪಡಿಸಲಾಗಿದೆ. ಈ ಸಂಬಂಧ ತನಿಖೆ ಮುಂದುವರೆದಿದೆ ಎಂದು ಲೋಕಾಯುಕ್ತ ಡಿವೈಎಸ್‌ಪಿ ಗಜೇಂದ್ರ ಪ್ರಸಾದ್ ಸುದ್ದಿಗಾರರಿಗೆ ತಿಳಿಸಿದ್ದಾರೆ.

ನಾಳೆಯಿಂದ ಶ್ರೀ ರಾಮಕೃಷ್ಣ ಆಶ್ರಮದಲ್ಲಿ ಪ್ರವಚನ

ಮೈಸೂರು,ಜೂ.2–ಮೈಸೂರಿನ ಯಾದವಗಿರಿಯಲ್ಲಿರುವ ಶ್ರೀ ರಾಮಕೃಷ್ಣ ಆಶ್ರಮದಲ್ಲಿ ಜೂನ್ 4 ರಿಂದ 7ರವರೆಗೆ ವಿವಿಧ ಪ್ರವಚನಗಳನ್ನು ಆಶ್ರಮದ ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣದಲ್ಲಿ ಸಂಜೆ 6 ರಿಂದ 6.50 ರವರೆಗೆ ಹಮ್ಮಿಕೊಳ್ಳಲಾಗಿದೆ.

ಜೂನ್ 4 ರಂದು ಶ್ರೀ ಮದ್ಭಗವದ್ಗೀತಾ ಕುರಿತು ಸ್ವಾಮಿ ಜ್ಞಾನಯೋಗಾನಂದರು ಪ್ರವಚನ ನೀಡಲಿದ್ದಾರೆ. ಜೂನ್ 6 ರಂದು Disciples & Devotees of sri Ramaskrishna ವಿಷಯದ ಕುರಿತು ಸ್ವಾಮಿ ಪರಮಹಂಸಾನಂದರು ಆಂಗ್ಲ ಭಾಷೆಯಲ್ಲಿ ಪ್ರವಚನ ನೀಡುವರು. ಜೂನ್ 7 ರಂದು ಶ್ರೀಮಾತೆ ಶಾರದಾದೇವಿಯವರ ಕುರಿತು ಸ್ವಾಮಿ ಯುಕ್ತೇಶಾನಂದರು ಪ್ರವಚನ ನೀಡಲಿದ್ದಾರೆ ಎಂದು ಆಶ್ರಮದ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದ ಸ್ವಾಮೀಜಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಐದನೇ ಪುಟದಿಂದ

ಮುಖ್ಯಮಂತ್ರಿಯಾಗುತ್ತಿದ್ದೇನೆ...!!

ಸಚಿವರಾಗುವವರ ಕುಟುಂಬ ವರ್ಗ, ಅಧಿಕಾರಿಗಳು ಒಂದಡೆ ಯಾದರೆ, ಮತ್ತೊಂದೆಡೆ ಧರ್ಮಗುರುಗಳು ಮತ್ತು ವಿಶೇಷ ಆಹ್ವಾನಿತ ಗಣ್ಯರಿಗೆ ಸ್ಥಳ ಕಾಯ್ದಿರಿಸಲಾಗಿದೆ. ಶಿವಕುಮಾರ್ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಲೋಕಭವನದಿಂದ ವಿಧಾನಸೌಧದ ವರೆಗೂ ತೆರೆದ ಜೀಪ್‌ನಲ್ಲಿ ಬರಲಿದ್ದಾರೆ.

ಮುಖ್ಯಮಂತ್ರಿಯವರ ಕೊಠಡಿಗೆ ಆಗಮಿಸುತ್ತಿದ್ದಂತೆ ಅಜ್ಜಯ್ಯ ಅವರ ಪೋಟೋ ಮತ್ತು ಕುರ್ಚಿಗೆ ಪೂಜೆ ಸಲ್ಲಿಸಿ ನಂತರ ಸಂಪುಟ ಸಭೆ ನಡೆಸಲಿದ್ದಾರೆ. ಈ ಸಲುವಾಗಿ ವಿಧಾನಸೌಧ ಹಾಗೂ ಲೋಕಭವನದ ಪ್ರಮುಖ ಮಾರ್ಗಗಳಲ್ಲಿ ಸಂಚಾರ ನಿಷೇಧ ಮಾಡುವುದರ ಜೊತೆಗೆ ಇಲ್ಲಿನ ಆಸುಪಾಸಿನ ಸರ್ಕಾರಿ ಕಚೇರಿಗಳಿಗೆ ಮಧ್ಯಾಹ್ನದ ನಂತರ ರಜೆ ಘೋಷಣೆ ಮಾಡಲಾಗಿದೆ.

ಅಭಿಮಾನಿಗಳು ಮತ್ತು ಕಾರ್ಯಕರ್ತರು ಪ್ರಮಾಣವಚನದ ಕಾರ್ಯಕ್ರಮ ವೀಕ್ಷಿಸಲು ರಾಜಭವನದಿಂದ ಕೆ.ಆರ್.ವೃತ್ತದ ವರೆಗೂ ದೊಡ್ಡ ಎಲ್‌ಇಡಿ ಪರದೆಗಳನ್ನು ಅಳವಡಿಸಲಾಗಿದೆ. ಗಣ್ಯರಿಗೆ ಹೊರತುಪಡಿಸಿ, ಉಳಿದ ಪಕ್ಷದ ಕಾರ್ಯಕರ್ತರಿಗಾಗಲಿ, ಸಾರ್ವಜನಿಕರಿಗಾಗಲೀ ಲೋಕಭವನದಲ್ಲಿ ಪ್ರವೇಶವಿರುವುದಿಲ್ಲ. ವಿಧಾನಸೌಧ ಮತ್ತು ಲೋಕಭವನ ಸರಹದ್ದಿನಲ್ಲಿ ಮೆರವಣಿಗೆ ಮಾಡುವುದನ್ನು ನಿಷೇಧಿಸಲಾಗಿದೆ.

ಸಹೋದರ ಡಿಕೆಸು ತಯಾರಿ: ಪ್ರಮಾಣ ವಚನ ಸುಲಲಿತವಾಗಿ ನಡೆಸುವ ದೃಷ್ಟಿಯಿಂದ ಶಿವಕುಮಾರ್ ಸಹೋದರ ಡಿ.ಕೆ. ಸುರೇಶ್ ಸಿದ್ಧತೆಗಳ ಉಸ್ತುವಾರಿ ವಹಿಸಿಕೊಂಡು ಕಾರ್ಯಕ್ರಮ ಸಿದ್ಧತೆ ನಡೆಸಿದ್ದಾರೆ. ಅವರ ಸಲಹೆ ಮೇರೆಗೆ ಅಧಿಕಾರಿಗಳು, ಅತ್ಯಂತ ಬಿಗಿ ಕ್ರಮಗಳನ್ನು ಕೈಗೊಂಡಿರುವುದಲ್ಲದೆ, ಪ್ರವೇಶ ಪತ್ರ ಹೊಂದಿರುವವರಿಗೆ ಮಾತ್ರ ಲೋಕಭವನ ಪ್ರವೇಶಿಸಲು ಅವಕಾಶವಿರುತ್ತದೆ.

ಎಐಸಿಸಿಯ ಮಾರ್ಗದರ್ಶನದಂತೆ ಸುರೇಶ್ ಎಲ್ಲಾ ಪೂರ್ವ ಸಿದ್ಧತೆ ಮಾಡಿದ್ದು, ಯಾವುದೇ ರೀತಿಯ ಅಹಿತಕರ ಘಟನೆ ನಡೆಯಬಾರದೆಂದು ಬಂದೋಬಸ್ತ್‌ಗಾಗಿ ಹಿರಿಯ ಪೊಲೀಸ್ ಅಧಿಕಾರಿಗಳನ್ನೇ ನಿಯೋಜಿಸಲಾಗಿದೆ. ಶಿವಕುಮಾರ್ ಅಧಿಕಾರ ವಹಿಸಿಕೊಳ್ಳುತ್ತಿದ್ದಂತೆ ಸರ್ಕಾರದ ಮಟ್ಟದಲ್ಲಿ ಕೆಲವು ಬದಲಾವಣೆಗಳನ್ನು ತರಲು ಐಎಎಸ್/ಐಪಿಎಸ್ ಅಧಿಕಾರಿಗಳನ್ನು ಬದಲಾವಣೆ ಮಾಡಲಿದ್ದಾರೆ.

ಮುಖ್ಯಮಂತ್ರಿ ಸಚಿವಾಲಯದ ಪ್ರಧಾನ ಕಾರ್ಯದರ್ಶಿ, ಬೆಂಗಳೂರು ಮಹಾನಗರ ಪಾಲಿಕೆ ಆಯುಕ್ತರೂ ಸೇರಿದಂತೆ ಕೆಲವು ಪ್ರಮುಖ ಹುದ್ದೆಗಳಿಗೆ ಯಾವ ಅಧಿಕಾರಿಗಳನ್ನು ನೇಮಕ ಮಾಡಬೇಕೆಂಬ ಪಟ್ಟಿ ಸಿದ್ಧಗೊಂಡಿದೆ.

ಸಿಬಿಐನಲ್ಲಿ ಸೇವೆ ಸಲ್ಲಿಸಿದ್ದ ಎಡಿಜಿಪಿ ಹಿತೇಂದ್ರ ಅವರನ್ನು ಶಿವಕುಮಾರ್, ಗುಪ್ತಚರದ ಮುಖ್ಯಸ್ಥರಾಗಿ ನೇಮಕ ಮಾಡಿಕೊಳ್ಳುತ್ತಿದ್ದು, ಅವರು ಈಗಾಗಲೇ ಬಾಹ್ಯವಾಗಿ ತಮ್ಮ ಕೆಲಸ ಆರಂಭಿಸಿ ದ್ದಾರೆ. ಪ್ರಮಾಣ ವಚನ ಸಿದ್ಧತೆ ಜೊತೆಗೆ ಸುರೇಶ್ ಆಯಕಟ್ಟಿನ ಜಾಗದಲ್ಲಿ ದಕ್ಷ ಅಧಿಕಾರಿಗಳನ್ನು ನೇಮಕ ಮಾಡುವ ಸಂಬಂಧ ಆಡಳಿತ ಸೇವೆಯಲ್ಲಿ ನುರಿತ ಅಧಿಕಾರಿಗಳ ಮಾರ್ಗದರ್ಶನ ಪಡೆದುಕೊಂಡಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಗಾಂಧಿ ಕುಟುಂಬಕ್ಕೆ ಡಿಕೆಶಿ ಧನ್ಯವಾದ

ನಿರ್ಣಾಯಕ ಪಾತ್ರವನ್ನು ವಹಿಸಿದೆ, ಕೇವಲ ನಾಯಕತ್ವದ ಮೂಲಕವಲ್ಲ, ಆದರೆ ನನ್ನ ಜೀವನದ ವಿವಿಧ ಹಂತಗಳಲ್ಲಿ ಅವರು ನನ್ನ ಮೇಲೆ ಇಟ್ಟಿರುವ ನಂಬಿಕೆಯ ಮೂಲಕ ನಿರ್ಣಾಯಕ ಪಾತ್ರ ವಹಿಸಿದೆ ಎಂದು ಶಿವಕುಮಾರ್ Xನಲ್ಲಿ ಪೋಸ್ಟ್ ಮಾಡಿದ್ದಾರೆ.

ನಾನು ಆಗಾಗ್ಗ ರಾಜೀವ್ ಗಾಂಧಿಯವರ ಬಗ್ಗೆ ಯೋಚಿಸುತ್ತೇನೆ, ನಾನು ನನ್ನ ಸಾಮರ್ಥ್ಯವನ್ನು ಅರಿಯುವ ಮೊದಲೇ ಅವರು ನನ್ನಲ್ಲಿದ್ದ ಸಾಮರ್ಥ್ಯವನ್ನು ಕಂಡರು. ಅವರ ಪ್ರೋತ್ಸಾಹ ನನಗೆ ದೊಡ್ಡ ಕನಸು ಕಾಣಲು ಮತ್ತು ಸಾರ್ವಜನಿಕ ಸೇವೆಗೆ ನನ್ನನ್ನು ಅರ್ಪಿಸಿಕೊಳ್ಳಲು ಆತ್ಮವಿಶ್ವಾಸವನ್ನು ನೀಡಿತು ಎಂದು ಅವರು ಹೇಳಿದರು.

ಇತರರಲ್ಲಿನ ಸಾಧ್ಯತೆಗಳನ್ನು ಗುರುತಿಸುವವರು ಮತ್ತು ಅವರ ಸ್ವಂತ ನಿರೀಕ್ಷೆಗಳನ್ನು ಮೀರಿ ಮೇಲೇರಲು ಪ್ರೇರೇಪಿಸುವವರು ಶ್ರೇಷ್ಠ ನಾಯಕರು. ರಾಜೀವ್ ಗಾಂಧಿ ನನ್ನ ವಿಷಯದಲ್ಲಿ ಅದನ್ನೇ ಮಾಡಿದರು ಎಂದು ಅವರು ಹೇಳಿದರು. ಮಾಜಿ ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ನಾಯಕತ್ವದ ಮತ್ತೊಂದು ಪ್ರಮುಖ ಪಾಠವನ್ನು ಕಲಿಸಿದ್ದಾರೆ ಎಂದು ಗಮನಿಸಿದ ಶಿವಕುಮಾರ್, ನಿಜವಾದ ನಾಯಕರು ಯಶಸ್ಸಿನ ಕ್ಷಣಗಳಲ್ಲಿ ಮಾತ್ರ ನಿಮ್ಮೊಂದಿಗೆ ನಿಲ್ಲುವುದಿಲ್ಲ; ಅವರು ನಿಮ್ಮ ಅತ್ಯಂತ ಕಷ್ಟದ ಸಮಯದಲ್ಲಿ ನಿಮ್ಮೊಂದಿಗೆ ನಿಲ್ಲುತ್ತಾರೆ, ಶಕ್ತಿ, ಪ್ರೋತ್ಸಾಹ ಮತ್ತು ಅಚಲ ಬೆಂಬಲವನ್ನು ನೀಡುತ್ತಾರೆ. ರಾಹುಲ್ ಗಾಂಧಿ ಮಾರ್ಗದರ್ಶನ ಮತ್ತು ಸ್ಫೂರ್ತಿಯ ನಿರಂತರ ಮೂಲವಾಗಿದ್ದರು ಎಂದು ಹೇಳಿದ್ದಾರೆ

ತೆರವಿಗೆ ಸುಪ್ರೀಂ ಆದೇಶ

ನ್ಯಾಯಪೀಠವು, ಒತ್ತುವರಿದಾರರು ಎಂದು ಗುರುತಿಸಲಾದ 118 ಹಾಲಿ ಮತ್ತು ನಿವೃತ್ತ ಸರ್ಕಾರಿ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಮತ್ತು ಕಾನೂನು ಕ್ರಮ ಜರುಗಿಸುವಂತೆ ಸೂಚಿಸಿದೆ. ಥೇಣಿ ಜಿಲ್ಲಾಧಿಕಾರಿಯವರು ಸಲ್ಲಿಸಿರುವ ವರದಿಯಲ್ಲಿ, ಜಿಲ್ಲೆಯಾದ್ಯಂತ ಇರುವ ಸಂರಕ್ಷಿತ ಅರಣ್ಯ ಪ್ರದೇಶದ 5.072 ಹೆಕ್ಟೇರ್ ಜಮೀನನ್ನು 4,601 ಮಂದಿ ಒತ್ತುವರಿ ಮಾಡಿಕೊಂಡಿದ್ದಾರೆ. ಅರಣ್ಯ ಜಮೀನಿನ ಒಳಗೆ ಅನುಮತಿ ಪಡೆಯದೆಯೇ 116 ಸರ್ಕಾರಿ ಮತ್ತು ಸಾರ್ವಜನಿಕ ಕಟ್ಟಡಗಳನ್ನು ನಿರ್ಮಿಸಲಾಗಿದೆ ಎಂಬ ಮಾಹಿತಿ ಇದೆ ಎಂದು ನ್ಯಾಯಪೀಠ ತಿಳಿಸಿದೆ. ಬಳಿಕ ಅರ್ಜಿಯ ವಿಚಾರಣೆಯನ್ನು ಸೆಪ್ಟೆಂಬರ್ 1ಕ್ಕೆ ಮುಂದೂಡಿದೆ.

ಬಸವಮಾರ್ಗ ಬಸವರಾಜುಗೆ ಶುಭಾಶಯ



ಮೈಸೂರು ಕೆ.ಜಿ.ಕೊಪ್ಪಲಿನ ಶ್ರೀ ಆದಿಶಕ್ತಿ ಬಂದಂತಮ್ಮ ಕಾಳಮ್ಮ ದೇವಸ್ಥಾನ ಟ್ರಸ್ಟ್ ವತಿಯಿಂದ ಬಸವಮಾರ್ಗ ಸಂಸ್ಥಾಪಕರಾದ ಬಸವರಾಜು ಅವರ ಹುಟ್ಟುಹಬ್ಬಕ್ಕೆ ಶುಭಕೋರಿ, ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ದೇವಸ್ಥಾನದ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಊರಿನ ಯಜಮಾನರುಗಳು ಉಪಸ್ಥಿತರಿದ್ದರು.

ಅರ್ಜಿ ಆಹ್ವಾನ

ಮೈಸೂರು, ಜೂನ್ 2–ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ಜಿಲ್ಲಾ ಒಕ್ಕಲಿಗರ ಸಂಘದ ವಿದ್ಯಾರ್ಥಿ ನಿಲಯ ಪ್ರವೇಶಕ್ಕೆ ಮೈಸೂರು ನಗರದ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿವಿಧ ಜಿಲ್ಲೆಗಳ ಒಕ್ಕಲಿಗ ಸಮಾಜದ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ. ಆಯ್ಕೆಯಾದ ವಿದ್ಯಾರ್ಥಿಗಳಿಗೆ ಕಡಿಮೆ ವೆಚ್ಚದಲ್ಲಿ ವಸತಿ ಮತ್ತು ಊಟದ ವ್ಯವಸ್ಥೆ ನೀಡಲಾಗುತ್ತದೆ ಹೆಚ್ಚಿನ ವಿವರಗಳಿಗೆ ಮೊ: 9483007564, 9880301279 ಗೆ ಸಂಪರ್ಕಿಸಿ.

ಹೆಚ್‌ಸಿಎಂಗೆ ಡಿಸಿಎಂ, ತನ್ವೀರ್ ಸೇಠ್‌ಗೆ ಸಚಿವ ಸ್ಥಾನಕ್ಕೆ ಆಗ್ರಹಿಸಿ ದಲಿತ ಮಹಾಸಭಾದಿಂದ ಪಂಜಿಡಿದು ಪ್ರತಿಭಟನೆ

ಮೈಸೂರು, ಜೂ 2(ವಿವಿಹೆಚ್)– ನೂತನ ಸಚಿವ ಸಂಪುಟದಲ್ಲಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ಕೊಡಬೇಕೆಂದು ಆಗ್ರಹಿಸಿ, ಮೈಸೂರಿನ ಗಾಂಧಿನಗರದ ಡಾ.ಅಂಬೇಡ್ಕರ್ ವೃತ್ತದಲ್ಲಿನ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಮುಂಭಾಗ ಮಂಗಳವಾರ ದಲಿತ ಮಹಾಸಭಾ ವತಿಯಿಂದ ಪಂಜಿಡಿದು ಪ್ರತಿಭಟನೆ ನಡೆಸಲಾಯಿತು.

ಈ ವೇಳೆ ದಲಿತ ಮಹಾಸಭಾ ಅಧ್ಯಕ್ಷ ಎಸ್.ರಾಜೇಶ್ ಮಾತನಾಡಿ, ಡಾ.ಹೆಚ್.ಸಿ.ಮಹದೇವಪ್ಪ ಅವರು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ನಿರ್ಗಮಿತ ಸಿಎಂ ಸಿದ್ದರಾಮಯ್ಯ ಅವರ ಸಂಪುಟದಲ್ಲಿ ಆರೋಗ್ಯ ಸಚಿವರಾಗಿ, ಲೋಕೋಪಯೋಗಿ ಹಾಗೂ ಸಮಾಜ ಕಲ್ಯಾಣ ಇಲಾಖಾ ಸಚಿವರಾಗಿ ತಮ್ಮ ಕಾರ್ಯವೈಖರಿಯಿಂದ ಎಲ್ಲರ ಮೆಚ್ಚುಗೆ ಗಳಿಸಿದ್ದಾರೆ.

ಹಾಗೆಯೇ ಸಮಾಜ ಕಲ್ಯಾಣ ಸಚಿವರಾಗಿ ಎಸ್‌ಸಿಯ 101 ಉಪ ಜಾತಿ ಗಳಿಗೆ ಸಂವಿಧಾನಾತ್ಮಕವಾಗಿ ಒಳಮೀಸಲಾತಿ ಜಾರಿಗೊಳಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇಂತಹ ನಾಯಕರನ್ನು ಸಂಪುಟದಲ್ಲಿ ಮುಂದುವರೆಸಬೇಕು. ಜೊತೆಗೆ ಡಿಸಿಎಂ ಸ್ಥಾನಮಾನ ನೀಡಬೇಕು ಎಂದು ತಿಳಿಸಿದರು.

ಹಳೇ ಮೈಸೂರು ಪ್ರಾಂತ್ಯದಲ್ಲಿ ಮಾಜಿ ಸಂಸದ ದಿ. ವಿ.ಶ್ರೀನಿವಾಸ್ ಪ್ರಸಾದ್ ಬಳಿಕ ದಲಿತ ಸಮುದಾಯದ ಜನಪ್ರಿಯ ನಾಯಕರಲ್ಲಿ ಹೆಚ್‌ಸಿಎಂ ಅಗ್ರಮಾನ್ಯರಾಗಿದ್ದಾರೆ. ಅವರ ದಕ್ಷ ಕಾರ್ಯವೈಖರಿ, ಪ್ರಾಮಾಣಿಕ ನಡೆಗೆ ಉತ್ತೇಜನ ನೀಡುವ ದೃಷ್ಟಿಯಿಂದ ಅವರಿಗೆ ಈ ಬಾರಿಯೂ ಸಂಪುಟದಲ್ಲಿ ಸ್ಥಾನಮಾನ ನೀಡಬೇಕು. ಜೊತೆಗೆ ಶಾಸಕ ತನ್ವೀರ್ ಸೇಠ್ ಅವರಿಗೂ ಡಿಸಿಎಂ ಸ್ಥಾನ ನೀಡಿ ಅವರ ಪಕ್ಷ ನಿಷ್ಠೆಯನ್ನು ಸ್ಮರಿಸಬೇಕು ಎಂದು ವಿವರಿಸಿದರು.

ಈ ವೇಳೆ ಚಂದ್ರಶೇಖರ್, ಚಳವಳಿ ರಂಗಸ್ವಾಮಿ, ಉದಯ್ ಕುಮಾರ್, ಉಸ್ತಾದ್ ರಮೇಶ್, ನರಸಿಂಹ, ರಾಮು, ಶಿವಕುಮಾರ್, ಕಿರಣ್ ಕುಮಾರ್, ಬಾಲು ನರಸಿಂಹಮೂರ್ತಿ, ನವೀನ್, ಜವರಪ್ಪ, ಪ್ರತಾಪ್, ಸುನೀಲ್ ನಾರಾಯಣ್, ಎಸ್.ಎ.ರಹೀಂ, ಮೋಹನ್ ಕುಮಾರ್, ಮರಿದೇವಯ್ಯ, ಶ್ಯಾಮ್, ಪ್ರವೀಣ್, ಹರೀಶ್, ರವಿ, ಸಲ್ಮಾನ್ ಪಾರ್ಸಿ ಸೈಯದ್ ಸಲೀಂ ಉಪಸ್ಥಿತರಿದ್ದರು.




ದಲಿತ ಮಹಾಸಭಾ ವತಿಯಿಂದ ಎಫ್‌ಟಿಎಸ್ ಅಂಬೇಡ್ಕರ್ ವೃತ್ತದಲ್ಲಿ, ಡಾ.ಹೆಚ್.ಸಿ.ಮಹದೇವಪ್ಪರಿಗೆ ಉಪಮುಖ್ಯಮಂತ್ರಿ ಸ್ಥಾನ ಹಾಗೂ ತನ್ವೀರ್ ಸೇಠ್‌ಗೆ ಸಚಿವ ಸ್ಥಾನ ನೀಡಬೇಕೆಂದು ಪಂಜಿಡಿದು ಪ್ರತಿಭಟನೆ ನಡೆಸಲಾಯಿತು.

ರಾಜ್ಯಕ್ಕೆ ಜೂ.5 ರಂದು ಮುಂಗಾರು ಪ್ರವೇಶ

ಮುಂದಿನ ಐದು ದಿನಗಳ ಕಾಲ ರಾಜ್ಯದ ಹಲವೆಡೆ ಮಳೆ

ಬೆಂಗಳೂರು: ರಾಜ್ಯಕ್ಕೆ ಜೂ.5 ರಂದು ಮುಂಗಾರು ಪ್ರವೇಶಿಸಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.




ಈ ಬಾರಿ ಮುಂಗಾರು ಪ್ರವೇಶ ತಡ ಆಗಲಿದೆ ಎನ್ನಲಾಗಿತ್ತು. ಆದರೆ ತಡ ಆಗಿಲ್ಲ ಸರಿಯಾದ ಸಮಯಕ್ಕೆ ಮುಂಗಾರು ಪ್ರವೇಶಿಸುತ್ತಿದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ.

ಇಂದಿನಿಂದ (ಜೂ.2) ಮುಂದಿನ ಐದು ದಿನಗಳ ಕಾಲ ರಾಜ್ಯದ ಹಲವೆಡೆ ಮಳೆಯಾಗಲಿದೆ. ಗದಗ, ಮೈಸೂರು ಸೇರಿ ಎಂಟು ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ಜೂ.3 ರಂದು ಬೆಂಗಳೂರಿನಲ್ಲಿ ಸಾಧಾರಣ ಮಳೆ ಆಗುವ ಸಾಧ್ಯತೆ ಇದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ. ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿ ಜೂ.3 ರಿಂದ ಜೂ.5ರ ವರೆಗೆ ಹಾಗೂ ಒಳನಾಡು ಜಿಲ್ಲೆಗಳಲ್ಲಿ ಜೂ.1 ರಿಂದ 4ರ ವರೆಗೆ ಒಂದು ಅಥವಾ ಎರಡು ಸ್ಥಳಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ.

ನಾರಾಯಣರಾವ್ ನಿಧನ

ಮೈಸೂರು, ಜೂ.2– ಮೈಸೂರಿನ ವಿಜಯಶ್ರೀಪುರದ ನಾರಾಯಣ ರಾವ್(73) ಹೃದಯಾಘಾತದಿಂದ ಸೋಮವಾರ ನಿಧನರಾದರು.



ಇವರು ಪತ್ನಿ ರೇವತಿ ಬಾಯ್, ಮೂವರು ಪುತ್ರಿಯರು, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಬನ್ನಿಮಂಟಪದ ಜೋಡಿ ತೆಂಗಿನಮರ ಸ್ಮಶಾನದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ನಾರಾಯಣರಾವ್ ನಿಧನಕ್ಕೆ ಪತ್ರಿಕಾ ವಿತರಕರ ಸಂಘದ ನಿರ್ದೇಶಕ ನಾಗೇಶ್ ಶಂಕರ್ ಸಂತಾಪ ಸೂಚಿಸಿದ್ದಾರೆ.


ನೂತನವಾಗಿ ಕರ್ನಾಟಕ ರಾಜ್ಯ ಮುಖ್ಯಮಂತ್ರಿಯಾಗಿ
ಅಧಿಕಾರ ಸ್ವೀಕರಿಸುತ್ತಿರುವ ಸನ್ಮಾನ್ಯ ಶ್ರೀ
ಡಿ.ಕೆ.ಶಿವಕುಮಾರ್
ರವರಿಗೆ
ಹೃತ್ಪೂರ್ವಕ ಅಭಿನಂದನೆಗಳು
ಶುಭಕೋರುವವರು
ಕನ್ನಡ ಸ್ನೇಹ ಬಳಗ, ಕೆ.ಜಿ.ಕೊಪ್ಪಲು,
ಮೈಸೂರು
ಪಿ.ಬಂದೀಗೌಡ
ಅಧ್ಯಕ್ಷರು, ಕನ್ನಡ ಸ್ನೇಹ ಬಳಗ
ಕೆ.ಜಿ.ಕೊಪ್ಪಲು, ಮೈಸೂರು
ಸಿ.ರಮೇಶ್
ಖಜಾಂಚಿ
ರಾಜಕುಮಾರ್
ಉಪಾಧ್ಯಕ್ಷರು
ಬಿ.ಮಹದೇವ್
ಬೈರವ ಗ್ರೂಪ್ಸ್


ಕರ್ನಾಟಕ ರಾಜ್ಯದ ನೂತನ ಮುಖ್ಯಮಂತ್ರಿಯಾದ
ಶ್ರೀ ಡಿ. ಕೆ. ಶಿವಕುಮಾರ್ ಅವರಿಗೆ
ಹೃತ್ಪೂರ್ವಕ ಅಭಿನಂದನೆಗಳು
VISMAYA ADVERTISERS
ಶುಭಕೋರುವವರು
ಶ್ರೀ ಚೇತನ್ ವಿಷಕಂಠೇಗೌಡ
(ಕುಂಬಾರಕೊಪ್ಪಲು)
ಪ್ರಧಾನ ಕಾರ್ಯದರ್ಶಿಗಳು, ಮೈಸೂರು ನಗರ ಕಾಂಗ್ರೆಸ್

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

'ಮಿತ್ರ'ನ ಮಿಣುಕು

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 47 | ಜೂನ್ 3 ಬುಧವಾರ 2026

ಪುಟಗಳು: IV

ಸಿಎಂ ಆಗಿ ಡಿ.ಕೆ.ಶಿವಕುಮಾರ್ ಪ್ರಮಾಣ ವಚನ ಸ್ವೀಕಾರ ಹಿನ್ನೆಲೆ; ಸಂಭ್ರಮಾಚರಣೆ



ಕಾಂಗ್ರೆಸ್ ಮುಖಂಡ ಎನ್.ಎಂ.ನವೀನ್‌ಕುಮಾರ್ ನೇತೃತ್ವದಲ್ಲಿ ಸಿಹಿ ವಿತರಿಸಲಾಯಿತು.

ಮೈಸೂರು,ಜೂ.2(ಪಿಎಂ)– ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಅವರು ಪ್ರಮಾಣ ವಚನ ಸ್ವೀಕರಿಸುವ ಹಿನ್ನೆಲೆಯಲ್ಲಿ ಕೆಆರ್ ಕ್ಷೇತ್ರದ ಕಾಂಗ್ರೆಸ್ ಮುಖಂಡ ಎನ್.ಎಂ.ನವೀನ್‌ಕುಮಾರ್ ನೇತೃತ್ವದಲ್ಲಿ ಪಕ್ಷದ ಮುಖಂಡರು, ಕಾರ್ಯಕರ್ತರು ಸಿಹಿ ಹಂಚಿ ಸಂಭ್ರಮಾಚರಣೆ ಮಾಡಿದರು.

ಮೈಸೂರಿನ ಚಾಮುಂಡಿಪುರಂ ವೃತ್ತದಲ್ಲಿ ಸಾರ್ವಜನಿಕರಿಗೆ ಸಿಹಿ ಹಂಚಿ ಸಂಭ್ರಮಿಸಿದರು. ಇದೇ ವೇಳೆ ಮಾತನಾಡಿದ ಎನ್.ಎಂ.ನವೀನ್‌ಕುಮಾರ್, ಕಾಂಗ್ರೆಸ್ ವರಿಷ್ಠರ ತೀರ್ಮಾನದಂತೆ ಡಿ.ಕೆ.ಶಿವಕುಮಾರ್ ಅವರು ನಾಳೆ ಸಂಜೆ ರಾಜ್ಯದ ಮುಖ್ಯಮಂತ್ರಿಗಳಾಗಿ ಪ್ರಮಾಣವಚನ ಸ್ವೀಕರಿಸುತ್ತಿದ್ದಾರೆ. ಕಳೆದ ಮೂರು ವರ್ಷಗಳಿಂದ ಸಿದ್ದರಾಮಯ್ಯನವರ ನೇತೃತ್ವದಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ ನಾಡಿನ ಜನತೆಗೆ ಉತ್ತಮ ಆಡಳಿತ ನೀಡಿದೆ. ಆ ಕಾರ್ಯವನ್ನು ನಾಳೆಯಿಂದ ಡಿ.ಕೆ.ಶಿವಕುಮಾರ್ ಅವರು ಮುಂದುವರೆಸಲಿದ್ದಾರೆ. ಕರ್ನಾಟಕ, ಹೊಸ ಪ್ರಗತಿಯ ದಿಕ್ಕಿನಲ್ಲಿ ಸಾಗಲಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಸಿದ್ದರಾಮಯ್ಯನವರು ಕಾಂಗ್ರೆಸ್ ಪಕ್ಷದಲ್ಲಿ 8ರಿಂದ 9 ವರ್ಷಗಳು ವಿರೋಧ ಪಕ್ಷದ ನಾಯಕರಾಗಿ, 8 ವರ್ಷಗಳ ಕಾಲ ಮುಖ್ಯಮಂತ್ರಿಗಳಾಗಿ ಉತ್ತಮವಾಗಿ ಸೇವೆ ಸಲ್ಲಿಸಿದ್ದಾರೆ. ನನಗೆ ಯಾವುದೇ ಬೇಸರವಿಲ್ಲ. ಹೈಕಮಾಂಡ್ ನಿರ್ದೇಶನದಂತೆ ಸಿಎಂ ಸ್ಥಾನ ಬಿಟ್ಟುಕೊಟ್ಟಿದ್ದೇನೆ ಎಂದು ಸಿದ್ದರಾಮಯ್ಯನವರೇ ಹೇಳಿದ್ದಾರೆ. ಡಿ.ಕೆ.ಶಿವಕುಮಾರ್ ಅವರಿಗೆ ಜವಾಬ್ದಾರಿ ವಹಿಸಿದ್ದು, ಮುಂದಿನ 2 ವರ್ಷಗಳ ಕಾಲ ಇಡೀ ಕರ್ನಾಟಕಕ್ಕೆ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಉತ್ತಮ ಆಡಳಿತ ದೊರೆ ಯುವ ಜೊತೆಗೆ ಪಕ್ಷ ಸಂಘಟನೆಯೂ ಆಗಲಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ನಿಗಮ–ಮಂಡಳಿ ಸದಸ್ಯ ಸ್ಥಾನ ಭರ್ತಿಗೆ ಕೋರಿಕೆ: ಡಿ.ಕೆ.ಶಿವಕುಮಾರ್ ಅವರು ಕೆಪಿಸಿಸಿ ಅಧ್ಯಕ್ಷರಾಗಿ ಇಡೀ ಕರ್ನಾಟಕ ಕಾಂಗ್ರೆಸ್‌ನಲ್ಲಿ ಸಂಚಲನ ಮೂಡಿಸಿದರು. ಅವರು ಮುಖ್ಯಮಂತ್ರಿಗಳಾಗಿ ಅಧಿಕಾರ ವಹಿಸಿಕೊಂಡ 2–3 ವಾರಗಳಲ್ಲಿ ಪಕ್ಷದ ಕಾರ್ಯಕರ್ತರನ್ನು ಗುರುತಿಸಿ ನಿಗಮ–ಮಂಡಳಿಗಳಲ್ಲಿ ಖಾಲಿ ಇರುವ ಸದಸ್ಯ ಸ್ಥಾನಗಳಿಗೆ ಅವಕಾಶ ಮಾಡಿಕೊಡಬೇಕೆಂದು ಅವರಲ್ಲಿ ಮನವಿ ಮಾಡುತ್ತೇನೆ. ನಿಗಮ ಮಂಡಳಿ ಸೇರಿದಂತೆ ಮೊದಲಾದ ಜವಾಬ್ದಾರಿ ನನಗೆ ನೀಡುವುದು ಪಕ್ಷದ ವರಿಷ್ಠರಿಗೆ ಬಿಟ್ಟ ವಿಚಾರ. ಆಕಾಂಕ್ಷೆಯಲ್ಲ ಎಂದು ಹೇಳುವುದಿಲ್ಲ. ಕಳೆದ ಬಾರಿ ಕೆಆರ್ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಆಗಬೇಕೆಂಬ ಆಕಾಂಕ್ಷೆ ಹೊಂದಿದ್ದೆ. ಮುಂದೆಯೂ ಆಕಾಂಕ್ಷೆಯಾಗಿರುತ್ತೇನೆ ಎಂದು ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದರು. ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಡಿ.ಕೆ.ಶಿವಕುಮಾರ್ ಅಭಿಮಾನಿ ಬಳಗದ ಜಿ.ರಾಘವೇಂದ್ರ, ಮುಖಂಡರಾದ ದಿನೇಶ್, ಪ್ರವೀಣ್‌ಕುಮಾರ್, ಪೈಲ್ವಾನ್ ಸುನಿಲ್, ಡೈರಿ ವೆಂಕಟೇಶ್, ಎಸ್.ಎನ್.ರಾಜೇಶ್, ಯೋಗೇಶ್ ಯಾದವ್, ಕೃಷ್ಣಪ್ಪ, ಮೋಹನ್, ಭರತ್ ಶೆಟ್ಟಿ, ಯುವ ಮುಖಂಡ ಶ್ರೀಧರ್ ಮತ್ತಿತರರು ಹಾಜರಿದ್ದರು.

ಪ್ರಿಯಾಂಕ್ ಖರ್ಗೆಗೆ ಡಿಸಿಎಂ ಜೊತೆಗೆ ಪ್ರಬಲ ಖಾತೆ ಕಲ್ಪಿಸುವಂತೆ ಆಗ್ರಹಿಸಿ ಅಭಿಮಾನಿ ಬಳಗ, ದಲಿತಪರ ಸಂಘಟನೆಗಳ ಪ್ರತಿಭಟನೆ

ಮೈಸೂರು, ಜೂ.2(ಎಂಕೆ)– ಕಾಂಗ್ರೆಸ್ ಹೈಕಮಾಂಡ್ ಮಾಜಿ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಪ್ರಬಲ ಖಾತೆ ಜೊತೆಗೆ ಉಪಮುಖ್ಯಮಂತ್ರಿ ಸ್ಥಾನ ನೀಡುವಂತೆ ಆಗ್ರಹಿಸಿ ಅಖಿಲ ಕರ್ನಾಟಕ ಪ್ರಿಯಾಂಕ್ ಖರ್ಗೆ ಅಭಿಮಾನಿಗಳ ಬಳಗ ಹಾಗೂ ದಲಿತ ಸಂಘಟನೆಗಳ ಒಕ್ಕೂಟದ ವತಿಯಿಂದ ಮಂಗಳವಾರ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಟೌನ್‌ಹಾಲ್ ಆವರಣದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಎದುರು ಜಮಾವಣೆಗೊಂಡ ನೂರಾರು ಮಂದಿ ಪ್ರಿಯಾಂಕ್ ಖರ್ಗೆ ಅಭಿಮಾನಿಗಳು, ತಮ್ಮ ನೆಚ್ಚಿನ ನಾಯಕ ಕುರಿತು ಜೈಕಾರ ಕೂಗಿದರಲ್ಲದೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ಸಚಿವ ಸಂಪುಟದಲ್ಲಿ ಪ್ರಿಯಾಂಕ್ ಖರ್ಗೆ ಅವರಿಗೆ ಪ್ರಬಲ ಖಾತೆ ಜೊತೆಗೆ ಡಿಸಿಎಂ ಸ್ಥಾನ ನೀಡುವಂತೆ ಒತ್ತಾಯಿಸಿದರು.

ಪ್ರಿಯಾಂಕ್ ಖರ್ಗೆ ಕಾಂಗ್ರೆಸ್ ಪಕ್ಷದ ಪ್ರಾಮಾಣಿಕ ಕಾರ್ಯಕರ್ತರು ಮತ್ತು ಎಲ್ಲರ ನೆಚ್ಚಿನ ನಾಯಕರಾಗಿದ್ದಾರೆ. ಇದುವರೆಗೂ ಕಾಂಗ್ರೆಸ್ ಪಕ್ಷದಿಂದ ಅವರಿಗೆ ನೀಡಿರುವ ಎಲ್ಲಾ ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿರ್ವಹಿಸಿ, ಪಕ್ಷಕ್ಕೆ ಹಾಗೂ ಕಾಂಗ್ರೆಸ್ ಸರ್ಕಾರಕ್ಕೆ ಗೌರವ ತಂದಿದ್ದಾರೆ. ಆಡಳಿತದಲ್ಲಿ ಯಾವುದೇ ಕಪ್ಪು ಚುಕ್ಕೆ ಇಲ್ಲದ, ವಿರೋಧ ಪಕ್ಷಗಳ ಮಾತಿಗೆ ಪ್ರತ್ಯುತ್ತರ ನೀಡುವ ಪ್ರಿಯಾಂಕ್ ಖರ್ಗೆ ಅವರನ್ನು ಡಿಸಿಎಂ ಮಾಡಲೇಬೇಕು ಎಂದು ಪಟ್ಟು ಹಿಡಿದರು.

ಆರ್‌ಎಸ್‌ಎಸ್ ಹಾಗೂ ಬಿಜೆಪಿಯ ಭ್ರಷ್ಟಾಚಾರದ ವಿರುದ್ಧ ಸದನದಲ್ಲಿ ಗಂಭೀರವಾಗಿ ಚರ್ಚಿಸಿ, ಮಾತನಾಡುವ ಹಾಗೂ ದೀನ–ದಲಿತರ ಧ್ವನಿಯಾಗಿ ಕೆಲಸ ಮಾಡುತ್ತಿರುವ ಪ್ರಿಯಾಂಕ್ ಖರ್ಗೆ ಅವರು ಡಿಸಿಎಂ ಆದರೆ ರಾಜ್ಯದಲ್ಲಿ ಮತ್ತೆ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವುದರಲ್ಲಿ ಯಾವುದೇ ಸಂಶಯವಿಲ್ಲ. ಆದ್ದರಿಂದ ಕಾಂಗ್ರೆಸ್ ಹೈಕಮಾಂಡ್ ಪ್ರಿಯಾಂಕ್ ಖರ್ಗೆ ಅವರಿಗೆ ಪ್ರಬಲ ಖಾತೆ ಜೊತೆಗೆ ಅವರನ್ನು ಡಿಸಿಎಂ ಮಾಡಬೇಕು ಎಂದರು. ಇಂಡಿಯನ್ ನ್ಯಾಷನಲ್ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನ ರಾಜ್ಯ ಉಪಾಧ್ಯಕ್ಷ ನಾಗರಾಜು, ಕೆಪಿಸಿಸಿ ಪರಿಶಿಷ್ಟ ಜಾತಿ ವಿಭಾಗದ ವಕ್ತಾರ ಬಂಡಿಪಾಳ್ಯ ವಿಜಯ್, ಮುಖಂಡರಾದ ಸ್ವಾಮಿ, ಪ್ರವೀಣ್ ಸಂತೋಷ್, ಪುಟ್ಟರಾಜ್ ಯಾದವ್, ಶಿವರಾಜ್, ಮಧು, ಸುರೇಶ್, ಮಹೇಶ್, ಈಶ್ವರ್, ಅಶೋಕಪುರಂ ಕೃಷ್ಣ ಮತ್ತಿತರರಿದ್ದರು.



ಮಾಜಿ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಪ್ರಬಲ ಖಾತೆ ಮತ್ತು ಉಪಮುಖ್ಯಮಂತ್ರಿ ಸ್ಥಾನ ನೀಡುವಂತೆ ಆಗ್ರಹಿಸಿ ಅಖಿಲ ಕರ್ನಾಟಕ ಪ್ರಿಯಾಂಕ್ ಖರ್ಗೆ ಅಭಿಮಾನಿಗಳ ಬಳಗ ಹಾಗೂ ದಲಿತ ಸಂಘಟನೆಗಳ ಒಕ್ಕೂಟದ ವತಿಯಿಂದ ಮಂಗಳವಾರ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಬಿ.ಕೆ.ಹರಿಪ್ರಸಾದ್‌ಗೆ ಸಂಪುಟದಲ್ಲಿ ಸೂಕ್ತ ಸ್ಥಾನ ನೀಡುವಂತೆ ಆಗ್ರಹ

ಮೈಸೂರು, ಜೂ.2(ಎಂಟಿವೈ)– ವಿಧಾನಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಅವರಿಗೆ ನೂತನ ಸಚಿವ ಸಂಪುಟದಲ್ಲಿ ಉತ್ತಮ ಸ್ಥಾನ ನೀಡಬೇಕೆಂದು ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಆರ್ಯ ಈಡಿಗರ ಸಂಘದ ಸಂಘಟನಾ ಕಾರ್ಯದರ್ಶಿ ಎಸ್.ಎನ್.ನಾಗರಾಜು ಒತ್ತಾಯಿಸಿದ್ದಾರೆ.



ಬಿ.ಕೆ.ಹರಿಪ್ರಸಾದ್

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಸಮುದಾಯದ ಸಂಖ್ಯೆ 35ರಿಂದ 40 ಲಕ್ಷ ಇರುವ ಹಿಂದುಳಿದ ಸಮುದಾಯವಾಗಿದೆ. ಆದರೂ ಸೂಕ್ತ ಪ್ರಾತಿನಿಧ್ಯ ಸಿಕ್ಕಿಲ್ಲ. ಹೀಗಾಗಿ ಸಚಿವ ಸ್ಥಾನ ನೀಡುವಂತೆ ಕೋರಿದರು.

ಮತ್ತೋರ್ವ ಸಂಘಟನಾ ಕಾರ್ಯದರ್ಶಿ ಟಿ.ನಾರಾಯಣ ಮಾತನಾಡಿ, 1974 ರಿಂದಲೂ ಪಕ್ಷಕ್ಕಾಗಿ ದುಡಿಯುತ್ತ ಬಂದಿರುವ ಬಿ.ಕೆ.ಹರಿಪ್ರಸಾದ್ ಕೇವಲ ಒಂದು ಸಮುದಾಯಕ್ಕೆ ಮಾತ್ರವಲ್ಲದೆ, ಎಲ್ಲ ಸಮುದಾಯಗಳ ಏಳಿಗೆಗಾಗಿ ದುಡಿದಿದ್ದಾರೆ. ಅಲ್ಲದೆ, ನಿಷ್ಠಾವಂತ ಕಾರ್ಯಕರ್ತರಾಗಿದ್ದು, ಸಚಿವ ಸ್ಥಾನ ನೀಡಿದಲ್ಲಿ ರಾಜ್ಯದ ಹಿಂದುಳಿದವರ ಏಳಿಗೆಗಾಗಿ, ರಾಜ್ಯದ ಅಭಿವೃದ್ಧಿಗಾಗಿ, ಪಕ್ಷದ ಅಭಿವೃದ್ಧಿಗಾಗಿ ಹಗಲಿರುಳೂ ದುಡಿಯುತ್ತಾರೆ. ಹೀಗಾಗಿ ವರಿಷ್ಠರು ಸಚಿವ ಸ್ಥಾನ ನೀಡಬೇಕೆಂದು ಕೋರಿದರು.

ಸುದ್ದಿಗೋಷ್ಠಿಯಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಆರ್ಯ ಈಡಿಗರ ಸಂಘ ಪದಾಧಿಕಾರಿಗಳಾದ ಡಿ.ಮಹದೇವು, ಪಿ.ಶ್ರೀನಿವಾಸ್, ರವಿಕುಮಾರ್ ಇದ್ದರು.

ಬಸ್ ಪಾಸ್‌ಗೆ ಅರ್ಜಿ ಆಹ್ವಾನ

ಮೈಸೂರು,ಜೂ2– ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವತಿಯಿಂದ 2026–27ನೇ ಸಾಲಿನ ಶಾಲಾ ವಿದ್ಯಾರ್ಥಿಗಳಿಗೆ ಜೂ.1ರಿಂದ ಉಚಿತ, ರಿಯಾಯತಿ ಪಾಸುಗಳನ್ನು ವಿತರಣೆ ಮಾಡುತ್ತಿದ್ದು, ಎಲ್ಲಾ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ವಿದ್ಯಾರ್ಥಿಗಳು ಮೈಸೂರು ಜಿಲ್ಲೆ ಮತ್ತು ತಾಲೂಕುಗಳಲ್ಲಿರುವ ಕರ್ನಾಟಕ ಒನ್ ಅಥವಾ ಗ್ರಾಮ ಒನ್ ಸೇವಾ ಸಿಂಧು https://sevasindu services. karnataka.gov.in/ ತಂತ್ರಾಂಶದ ಮೂಲಕ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಕೆಗೆ ರೂ. 30 ಶುಲ್ಕ ನಿಗದಿಪಡಿಸಲಾಗಿದೆ. ಅರ್ಜಿ ಸ್ವೀಕೃತಿ ಪ್ರತಿಯೊಂದಿಗೆ ವಿವಿಧ ನಿಲ್ದಾಣಗಳ ಕೌಂಟರ್‌ಗೆ ಸಲ್ಲಿಸಿ, ಶುಲ್ಕ ಪಾವತಿಸಿ ಪಾಸನ್ನು ಪಡೆಯಬಹುದು.

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣ ಆರೋಪಿ ಯಶ್ ಯಾದವ್‌ಗೆ ಮರು ಪರೀಕ್ಷೆ ಅಧ್ಯಯನಕ್ಕೆ ಕೋರ್ಟ್ ಅವಕಾಶ

ನವದೆಹಲಿ: ಮೇ 3ರಂದು ನಡೆದ ನೀಟ್ ಯುಜಿ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆ ಮಾಡಿ 23 ಲಕ್ಷ ಅಭ್ಯರ್ಥಿಗಳ ಶ್ರಮ ವ್ಯರ್ಥ ಮಾಡಿ ಜೈಲು ಸೇರಿರುವ ಆರೋಪಿಗಳಲ್ಲಿ ಒಬ್ಬನಾದ ಯಶ್ ಯಾದವ್‌ಗೆ, ಜೂನ್ 21ರಂದು ನಡೆಯಲಿರುವ ಮರುಪರೀಕ್ಷೆಗೆ ಅಧ್ಯಯನ ನಡೆಸಲು ನ್ಯಾಯಾಲಯ ಅವಕಾಶ ನೀಡಿದೆ.

ನೀಟ್ ಯುಜಿ ಮರು ಪರೀಕ್ಷೆಗೆ ತಾನು ಅಧ್ಯಯನ ನಡೆಸಬೇಕಿದ್ದು, ಅಗತ್ಯ ಪುಸ್ತಕಗಳನ್ನು ಒದಗಿಸುವಂತೆ ಕೋರಿ ಆರೋಪಿ ಅರ್ಜಿ ಸಲ್ಲಿಸಿದ್ದ. ಇದನ್ನು ಇಲ್ಲಿನ ರೌಸ್ ಅವೆನ್ಯೂ ನ್ಯಾಯಾಲಯ ಮಂಗಳವಾರ ಪುರಸ್ಕರಿಸಿದೆ. ಸಿಬಿಐ ವಿಶೇಷ ನ್ಯಾಯಾಧೀಶ ಅಜಯ್ ಗುಪ್ತಾ ಅವರು, ಯಶ್ ಯಾದವ್‌ಗೆ ನ್ಯಾಯಾಂಗ ಬಂಧನದಲ್ಲಿ ಪುಸ್ತಕಗಳನ್ನು ಹೊಂದಲು ಅನುಮತಿ ನೀಡಿದರು.



ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ಯಶ್ ಯಾದವ್ ಪರ ಹಾಜರಾದ ವಕೀಲೆ ಅಂಬಿಕಾ, ಜೂ.21ರಂದು ನಡೆಯಲಿರುವ ನೀಟ್ ಯುಜಿ ಪರೀಕ್ಷೆಯ ತಯಾರಿಗಾಗಿ ಪುಸ್ತಕಗಳ ಅಗತ್ಯವಿದೆ ಎಂದು ನ್ಯಾಯಾಲಯಕ್ಕೆ ತಿಳಿಸಿದರು. ಅಲ್ಲದೆ, ಆರೋಪಿಯು ಮೇ 3ರಂದು ನಡೆದಿದ್ದ ನೀಟ್ ಯುಜಿ ಪರೀಕ್ಷೆಗೂ ಹಾಜರಾಗಿದ್ದ ಎಂದು ಅವರು ಉಲ್ಲೇಖಿಸಿದರು. ವಿಚಾರಣೆಯ ಸಂದರ್ಭದಲ್ಲಿ, ಆರೋಪಿ ಈ ಪ್ರಕರಣದಲ್ಲಿ ಭಾಗಿಯಾಗಿರುವುದರಿಂದ ಎನ್‌ಟಿಎ ಪರೀಕ್ಷೆಗೆ ಹಾಜರಾಗಲು ಅನುಮತಿ ನೀಡುತ್ತದೆಯೇ ಮತ್ತು ಅವರಿಗೆ ಪ್ರವೇಶ ಪತ್ರವನ್ನು ನೀಡಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಂಡಿದ್ದೀರಾ ಎಂದು ನ್ಯಾಯಾಲಯವು ವಕೀಲರನ್ನು ಪ್ರಶ್ನಿಸಿತು. ಆದಾಗ್ಯೂ, ಅಧ್ಯಯನಕ್ಕಾಗಿ ಪುಸ್ತಕಗಳನ್ನು ಹೊಂದಲು ಅವಕಾಶ ನೀಡಿತು.

ನ್ಯಾಯಾಂಗ ಬಂಧನ ವಿಸ್ತರಣೆ: ಇದೇ ವೇಳೆ, ನ್ಯಾಯಾಲಯವು ಪ್ರಕರಣದ ಆರೋಪಿಗಳಾದ ಮಂಗಿಲಾಲ್ ಬಿವಾಲ್, ವಿಕಾಸ್ ಬಿವಾಲ್, ದಿನೇಶ್ ಬಿವಾಲ್, ಯಶ್ ಯಾದವ್ ಮತ್ತು ಧನಂಜಯ್ ಲೋಖಂಡೆ ಅವರ ನ್ಯಾಯಾಂಗ ಬಂಧನವನ್ನು ಜೂ.15ರವರೆಗೆ ವಿಸ್ತರಿಸಿದೆ.

ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಸಿಬಿಐ ವಿಚಾರಣೆ ನಂತರ ರೌಸ್ ಅವೆನ್ಯೂ ನ್ಯಾಯಾಲಯವು ಐವರು ಆರೋಪಿಗಳನ್ನು ಮೇ 20ರಂದು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿತ್ತು. ಇದೀಗ, ನ್ಯಾಯಾಂಗ ಅವಧಿ ಮುಗಿದ ಹಿನ್ನೆಲೆ ತನಿಖಾಧಿಕಾರಿ, ಡೆಪ್ಯುಟಿ ಎಸ್ಪಿ ಪವನ್‌ಕುಮಾರ್ ಕೌಶಿಕ್, ಆರೋಪಿಗಳ ಬಂಧನ ವಿಸ್ತರಿಸುವಂತೆ ಅರ್ಜಿ ಸಲ್ಲಿಸಿದ್ದರು.

ಡಾ.ಯತೀಂದ್ರರಿಗೆ ಡಿಸಿಎಂ; ಅನಿಲ್ ಚಿಕ್ಕಮಾದುಗೆ ಸಚಿವ ಸ್ಥಾನಕ್ಕೆ ಆಗ್ರಹ

'ಅಹಿಂದ' ಮತ ಬ್ಯಾಂಕ್ ಉಳಿವಿಗೆ ಇದು ಅನಿವಾರ್ಯ: ಬೈಪಾಸ್ ಮಂಜುನಾಥ್

ಮೈಸೂರು, ಜೂ.2(ಎಂಟಿವೈ)–ನುಡಿದಂತೆ ನಡೆದು ಮುಖ್ಯಮಂತ್ರಿ ಸ್ಥಾನ ಬಿಟ್ಟುಕೊಟ್ಟಿರುವ ಸಿದ್ದರಾಮಯ್ಯ ಅವರ ನಡೆಯನ್ನು ಗೌರವಿಸುವುದರೊಂದಿಗೆ ಮುಂಬರುವ ದಿನಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಆಗುವ ಹಿನ್ನಡೆಯನ್ನು ತಪ್ಪಿಸಲು ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಅವರನ್ನು ಉಪಮುಖ್ಯಮಂತ್ರಿ ಮಾಡಲು ಹೈಕಮಾಂಡ್ ಕ್ರಮ ಕೈಗೊಳ್ಳಬೇಕು ಎಂದು ಕರ್ನಾಟಕ ರಾಜ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಜನ ಸೇವಾ ವೇದಿಕೆ ರಾಜ್ಯಾಧ್ಯಕ್ಷ ಬೈಪಾಸ್ ಮಂಜುನಾಥ್ ಒತ್ತಾಯಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಅಸ್ತಿತ್ವಕ್ಕೆ ಬರುವ ನೂತನ ಸರ್ಕಾರದಲ್ಲಿ ಡಾ.ಯತೀಂದ್ರ ಸಿದ್ದರಾಮಯ್ಯ ಅವರಿಗೆ ಉಪಮುಖ್ಯಮಂತ್ರಿ ಹುದ್ದೆ ನೀಡಿ ಪ್ರಬಲ ಖಾತೆ ನೀಡಬೇಕು. ರಾಜ್ಯ ರಾಜಕಾರಣದಲ್ಲಿ 48 ವರ್ಷಕ್ಕೂ ಹೆಚ್ಚು ಕಾಲ ಸುದೀರ್ಘ ಸೇವೆಯನ್ನು ಸಲ್ಲಿಸಿ ಅಹಿಂದ ಮತ್ತು ಶೋಷಿತ ವರ್ಗಗಳ ಸಂಘಟನೆಗೆ ಸಿದ್ದರಾಮಯ್ಯ ಶ್ರಮಿಸಿದ್ದಾರೆ. ಹೈಕಮಾಂಡ್ ಆದೇಶದಂತೆ ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡಿ, ಗ್ರಾ.ಪಂ ಅಧ್ಯಕ್ಷ ಸ್ಥಾನದಿಂದ ಹಿಡಿದು ಪ್ರಧಾನಿ ಹುದ್ದೆವರೆಗೂ ಅಧಿಕಾರ ಹಸ್ತಾಂತರದ ಬಗ್ಗೆ ಮಾದರಿಯಾಗಿದ್ದಾರೆ. ಸಿದ್ದರಾಮಯ್ಯ ಅವರ ತ್ಯಾಗದ ನಡೆ ರಾಷ್ಟ್ರ ರಾಜಕಾರಣಕ್ಕೆ ಮಾದರಿಯಾಗಿದೆ. ಆದರೆ, ಅವರು ರಾಜೀನಾಮೆ ನೀಡಿದ ಬಳಿಕ ಅಹಿಂದ ಸಮುದಾಯಗಳ ನಾಯಕತ್ವವೇ ಇಲ್ಲದಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಅಹಿಂದ ಮತ್ತು ಶೋಷಿತ ವರ್ಗಗಳು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಬೆಂಬಲಿಸಿ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಿ 2023ರಲ್ಲಿ ಬಹುಮತ ತಂದುಕೊಟ್ಟಿವೆ. ಮುಂದಿನ ಚುನಾವಣೆಗಳು ಮತ್ತು ಕಾಂಗ್ರೆಸ್ ಪಕ್ಷ ಬಲ ಸಿಗಬೇಕಾದರೆ ಯತೀಂದ್ರ ಅವರನ್ನು ಉಪ ಮುಖ್ಯಮಂತ್ರಿ ಮಾಡಿ ಪ್ರಬಲ ಖಾತೆಯ ಜೊತೆಗೆ ಮೈಸೂರು ಜಿಲ್ಲಾ ಉಸ್ತುವಾರಿಯನ್ನಾಗಿಸಬೇಕು ಎಂದು ಮನವಿ ಮಾಡಿದರು.



ಡಾ.ಯತೀಂದ್ರ



ಅನಿಲ್ ಚಿಕ್ಕಮಾದು

ಹಳೇ ಮೈಸೂರು ಭಾಗದಲ್ಲಿ 2023 ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಬಹುಮತ ಪಡೆಯುವಲ್ಲಿ ನಾಯಕ ಸಮುದಾಯವೂ ಪ್ರಮುಖ ಪಾತ್ರ ವಹಿಸಿದೆ. ಹೀಗಾಗಿ ಕಳೆದ ಎರಡು ಬಾರಿ ಶಾಸಕರಾಗಿ ಪಕ್ಷ ಸಂಘಟನಾಕಾರರಾಗಿರುವ ಅನಿಲ್ ಚಿಕ್ಕಮಾದು ಅವರನ್ನು ಸಚಿವ ಸ್ಥಾನ ನೀಡಬೇಕು. ಸಿದ್ದರಾಮಯ್ಯ ಜನಪ್ರಿಯತೆಯಿಂದಲೇ ಕಾಂಗ್ರೆಸ್ ರಾಜ್ಯದಲ್ಲಿ ಭದ್ರವಾಗಿದೆ. ಈಗ ರಾಜೀನಾಮೆಯಿಂದ ಶೋಷಿತ ಸಮುದಾಯಗಳ ಅನ್ಯಾಯವಾಗಿದೆ. ಇದನ್ನು ಹೈ ಕಮಾಂಡ್ ಮತ್ತು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸರಿದೂಗಿಸಲು ವಿದ್ಯೆ ಮತ್ತು ಅಹಿಂದ ವರ್ಗಗಳ ಮೇಲೆ ಕಾಳಜಿ ಹೊಂದಿರುವ ಯತೀಂದ್ರ ಅವರು ಉಪ ಮುಖ್ಯಮಂತ್ರಿ ಸ್ಥಾನ ಸೂಕ್ತ ವ್ಯಕ್ತಿಯಾಗಿದ್ದಾರೆ ಎಂದರು.

ಮುಖಂಡ ಜಿನ್ನಹಳ್ಳಿ ರಾಜನಾಯಕ ಮಾತನಾಡಿ, ಬುದ್ಧ, ಬಸವ, ಡಾ.ಬಿ.ಆರ್.ಅಂಬೇಡ್ಕರ್ ಆಶಯದ ನಡೆ–ನುಡಿ ಮೂಲಕ ಅಧಿಕಾರ ನಡೆಸಿದ ಸಿದ್ದರಾಮಯ್ಯರ ರಾಜ್ಯದ ಅಹಿಂದ ವರ್ಗದ ಶಕ್ತಿಯಾಗಿದ್ದರು. ಕಾಂಗ್ರೆಸ್ ಪಕ್ಷದ ಪರವಾಗಿ ಅಹಿಂದ ಪಕ್ಷ ಶಾಶ್ವತವಾಗಿ ಇರಬೇಕು ಎಂದರೆ ಡಾ.ಯತೀಂದ್ರರಿಗೆ ಡಿಸಿಎಂ ಸ್ಥಾನ, ಅನಿಲ ಚಿಕ್ಕಮಾದು ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಮನವಿ ಮಾಡಿದರು. ಗೋಷ್ಠಿಯಲ್ಲಿ ಡಾ.ಯತೀಂದ್ರ ಸಿದ್ದರಾಮಯ್ಯ ಜನಸೇವಾ ವೇದಿಕೆ ಗೌರವಾಧ್ಯಕ್ಷ ಕೀಳನಪುರ ಮಹದೇವಪ್ಪ, ಉಪಾಧ್ಯಕ್ಷ ಕೆಂಡಗಣ್ಣೇ ಗೌಡ, ಕಾಡನಹಳ್ಳಿ ಡಿ.ಸ್ವಾಮಿಗೌಡ, ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಎಂ.ಶಂಕರ್, ಮರಿಸ್ವಾಮಿ, ಜೈ ಸ್ವಾಮಿ ಇದ್ದರು.

ಸುಪ್ರೀಂಕೋರ್ಟ್‌ನ ಐವರು ಹೊಸ ನ್ಯಾಯಮೂರ್ತಿಗಳ ಪ್ರಮಾಣ ವಚನ



ಶೀಲ್ ನಾಗು | ಚಂದ್ರಶೇಖರ್ | ಸಂಜೀವ್ | ಅರುಣ್ ಪಲ್ಲಿ | ವಿ.ಮೋಹನ

ನವದೆಹಲಿ: ಸುಪ್ರೀಂಕೋರ್ಟ್‌ನ ಐವರು ಹೊಸ ನ್ಯಾಯಮೂರ್ತಿಗಳಿಗೆ ಸಿಜೆಐ ಸೂರ್ಯ ಕಾಂತ್ ಮಂಗಳವಾರ ಪ್ರಮಾಣವಚನ ಬೋಧಿಸಿದರು.

ಸುಪ್ರೀಂಕೋರ್ಟ್ ಆವರಣದಲ್ಲಿ ನಡೆದ ಈ ಪ್ರಮಾಣ ವಚನ ಕಾರ್ಯಕ್ರಮದಲ್ಲಿ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಶೀಲ್ ನಾಗು, ಬಾಂಬೆ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಚಂದ್ರಶೇಖರ್, ಮಧ್ಯಪ್ರದೇಶ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಸಂಜೀವ್ ಸಚ್‌ದೇವ್, ಜಮ್ಮು–ಕಾಶ್ಮೀರ, ಲಡಾಖ್ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಅರುಣ್ ಪಲ್ಲಿ, ಹಲವಾರು ಸಾಂವಿಧಾನಿಕ, ನಾಗರಿಕ ಮತ್ತು ಸೇವಾ ವಿಷಯಗಳನ್ನು ನಿರ್ವಹಿಸಿದ ಅನುಭವ ಹೊಂದಿರುವ ಹಿರಿಯ ವಕೀಲೆ ವೆಂಕಿತಾ ಸುಬ್ರಮಣಿ ಮೋಹನ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾಗಿ ಪ್ರಮಾಣ ವಚನ ಸ್ವೀಕರಿಸಿದರು. ಇದರೊಂದಿಗೆ ನ್ಯಾಯಮೂರ್ತಿಗಳ ಸಂಖ್ಯೆ 37ಕ್ಕೆ ಏರಿಕೆ ಆಗಿದ್ದು, ಇದೇ ಮೊದಲ ಬಾರಿಗೆ ಸುಪ್ರೀಂಕೋರ್ಟ್ ಅಧಿಕ ಸಂಖ್ಯಾಬಲದ ನ್ಯಾಯಮೂರ್ತಿಗಳನ್ನು ಹೊಂದಿದೆ.

ಕಲ್ಲಹಳ್ಳಿ ಶಾಲಾ ಕಟ್ಟಡ ನಿರ್ಮಾಣಕ್ಕೆ ಆಗ್ರಹ

ಮೈಸೂರು,ಜೂ.2(ಎಂಟಿವೈ)–ಇಲವಾಲ ಹೋಬಳಿ ದಡದ ಕಲ್ಲಹಳ್ಳಿಯಲ್ಲಿನ ಸರ್ಕಾರಿ ಶಾಲೆ ಕಿರಿದಾಗಿದ್ದು, ಗ್ರಾಮಸ್ಥರ ಒತ್ತಾಯದ ಮೇರೆಗೆ ಶಾಲೆಯ ಹೊಸ ಕಟ್ಟಡಕ್ಕಾಗಿ ಮಂಜೂರಾಗಿರುವ 1.20 ಎಕರೆ ಭೂಮಿ ಸಂರಕ್ಷಿಸಿ ಶಾಲಾ ಕಟ್ಟಡ ನಿರ್ಮಾಣಕ್ಕೆ ಕ್ರಮ ಕೈಗೊಳ್ಳುವಂತೆ ಯಾಚೇಗೌಡನಹಳ್ಳಿ ಸಾಮಾಜಿಕ ಹೋರಾಟಗಾರ ರವಿಕುಮಾರ್ ಒತ್ತಾಯಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಡದ ಕಲ್ಲಹಳ್ಳಿ ಗ್ರಾಮದಲ್ಲಿರುವ ಸರ್ಕಾರಿ ಶಾಲೆ ಕಿರಿದಾಗಿದೆ. ಅಲ್ಲದೆ, ಆಟದ ಮೈದಾನವೂ ಇಲ್ಲದ ಕಾರಣ ಗ್ರಾಮಸ್ಥರು ನನ್ನ ಬಳಿ ಸರ್ಕಾರಿ ಶಾಲಾ ಕಟ್ಟಡ ನಿರ್ಮಾಣಕ್ಕೆ ಭೂಮಿ ಮಂಜೂರು ಮಾಡಿಸಿಕೊಡುವಂತೆ ಕೋರಿದ್ದರು. ಈ ಹಿನ್ನೆಲೆಯಲ್ಲಿ 2024ರಲ್ಲಿ ಮೈಸೂರು ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಲಾಗಿತ್ತು. ಗ್ರಾಮದ ಸರ್ವೆ ನಂ.125ರಲ್ಲಿ 1.20 ಎಕರೆ ಸರ್ಕಾರಿ ಭೂಮಿಯನ್ನು ಡಿಸಿ ಮಂಜೂರು ಮಾಡಿದ್ದಾರೆ. ಡಿಡಿಪಿಐ ಮತ್ತು ಬಿಇಓ ಅವರು ಮಂಜೂರಾಗಿರುವ ಭೂಮಿಯನ್ನು ರಕ್ಷಿಸಿಕೊಂಡು ಶಾಲಾ ಕಟ್ಟಡ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಬೇಕು. ಡಿಸಿಪಿಐ ಮತ್ತು ಬಿಇಓ ಮಂಜೂರಾಗಿರುವ ಭೂಮಿ ಸಂರಕ್ಷಿಸಿಕೊಂಡು ಶಾಲೆ ಅಭಿವೃದ್ಧಿ ಆರಂಭಿಸಬೇಕು ಎಂದು ಮನವಿ ಮಾಡಿದರು. ಗೋಷ್ಠಿಯಲ್ಲಿ ಮುಖಂಡರಾದ ವೀರಭದ್ರಸ್ವಾಮಿ, ರಾಘವೇಂದ್ರ ಇದ್ದರು.

ಪರಿಷತ್ ಸದಸ್ಯ ಡಾ.ಯತೀಂದ್ರರಿಗೆ ಡಿಸಿಎಂ ಸ್ಥಾನ ಕಲ್ಪಿಸುವಂತೆ ಆಗ್ರಹಿಸಿ ಯುವ ಕಾಂಗ್ರೆಸ್ ಪ್ರತಿಭಟನೆ

ಮೈಸೂರು, ಜೂ.2(ಎಂಕೆ)– ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಅವರಿಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡುವಂತೆ ಒತ್ತಾಯಿಸಿ, ಯೂತ್ ಕಾಂಗ್ರೆಸ್ ಮೈಸೂರು ನಗರ ಘಟಕದ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ರಾಮಸ್ವಾಮಿ ವೃತ್ತದಲ್ಲಿ ಜಮಾಯಿಸಿದ ಯೂತ್ ಕಾಂಗ್ರೆಸ್ ಕಾರ್ಯಕರ್ತರು, ಕಾಂಗ್ರೆಸ್ ಪಕ್ಷ, ಸಿದ್ದರಾಮಯ್ಯಗೆ ಜೈಕಾರ ಕೂಗಿ ಕಾಂಗ್ರೆಸ್ ಹೈಕಮಾಂಡ್ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಅವರಿಗೆ ಡಿಸಿಎಂ ಸ್ಥಾನ ನೀಡಬೇಕು ಎಂದು ಆಗ್ರಹಿಸಿದರು.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಂತರ ಹಳೆ ಮೈಸೂರು ಭಾಗದಲ್ಲಿನ ಅಹಿಂದ ಯುವ ನಾಯಕರಾಗಿ ತಮಗೆ ನೀಡಿದ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸುತ್ತಿರುವ ಹಾಗೂ ಜನ ಸೇವೆಯಲ್ಲಿಯೇ ನಿರತರಾಗಿರುವ ಡಾ.ಯತೀಂದ್ರರನ್ನು ಉಪ ಮುಖ್ಯಮಂತ್ರಿಯನ್ನಾಗಿ ಮಾಡಲೇಬೇಕು ಎಂದರು.



ಮೈಸೂರಿನ ರಾಮಸ್ವಾಮಿ ವೃತ್ತದಲ್ಲಿ ಎಂಎಲ್‌ಸಿ ಡಾ.ಯತೀಂದ್ರ ಸಿದ್ದರಾಮಯ್ಯ ಅವರಿಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡುವಂತೆ ಆಗ್ರಹಿಸಿ, ಯೂತ್ ಕಾಂಗ್ರೆಸ್ ಮೈಸೂರು ನಗರ ಘಟಕದ ವತಿಯಿಂದ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಗ್ಯಾರಂಟಿ ಯೋಜನೆ ಸೇರಿದಂತೆ ಹತ್ತಾರು ಜನಪರ ಯೋಜನೆಗಳ ಮೂಲಕ ರಾಜ್ಯದ ಮನೆ ಮಾತಾಗಿರುವ ಸಿದ್ದರಾಮಯ್ಯ ಅವರ ದಾರಿಯಲ್ಲೇ ಸಾಗುತ್ತಿರುವ ಡಾ.ಯತೀಂದ್ರ ಅವರು, ಒಮ್ಮೆ ಶಾಸಕರಾಗಿ, ಹಾಲಿ ವಿಧಾನಪರಿಷತ್ ಸದಸ್ಯರಾಗಿ ಅಪಾರ ಜನ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಡಿಸಿಎಂ ಆದವರು ಮುಂದೊಮ್ಮೆ ಸಿಎಂ ಆಗುತ್ತಾರೆ ಎಂಬ ವಿಶ್ವಾಸ ಇರುವುದರಿಂದಲೇ ಡಾ.ಯತೀಂದ್ರರನ್ನು ಡಿಸಿಎಂ ಮಾಡಿ ಎನ್ನುತ್ತಿದ್ದೇವೆ. ಅವರಿಗೆ ಡಿಸಿಎಂ ಸ್ಥಾನ ನೀಡದಿದ್ದಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು. ಮೈಸೂರು ನಗರ ಯೂತ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಟಿ.ಲಖನ್, ಶಿವು ಕಡಕೋಳ, ಭರತ್, ರವಿ, ಸುನೀಲ್, ಶಶಿಕಾಂತ್, ಪವನ್, ಯೂತ್ ಕಾಂಗ್ರೆಸ್‌ನ ಪದಾಧಿಕಾರಿಗಳು, ಕಾರ್ಯಕರ್ತರು ಉಪಸ್ಥಿತರಿದ್ದರು.

'ಜೆನ್‌ನೆಕ್ಸ್ಟ ಕೌಶಲ್ಯನ್' ವಿಶೇಷ ತರಬೇತಿ

ಮೈಸೂರು, ಜೂ. 2– ಸ್ವಾಮಿ ವಿವೇಕಾನಂದ ಯುವ ಚಳವಳಿಯ ಅಂಗಸಂಸ್ಥೆಯಾದ ವಿವೇಕಾನಂದ ಇನ್‌ಸ್ಟಿಟ್ಯೂಟ್ ಫಾರ್ ಲೀಡರ್‌ಶಿಪ್ ಡೆವಲಪ್‌ಮೆಂಟ್(ವಿ–ಲೀಡ್) ವತಿಯಿಂದ ಯುವ ಜನರ ಉದ್ಯೋಗಾರ್ಹತೆ ಕೌಶಲ್ಯಗಳನ್ನು ವೃದ್ಧಿಸುವ ಹಾಗೂ ಉದ್ಯಮಶೀಲತೆಯನ್ನು ಉತ್ತೇಜಿಸುವ ಉದ್ದೇಶದಿಂದ 'ಜೆನ್‌ನೆಕ್ಸ್ಟ ಕೌಶಲ್ಯನ್' ವಿಶೇಷ ತರಬೇತಿ ಕಾರ್ಯಕ್ರಮ ಆಯೋಜಿಸಲಾಗಿದೆ. ಈ ಕಾರ್ಯಕ್ರಮವು ಯುವಜನರನ್ನು ಉದ್ಯೋಗಕ್ಕೆ ಸನ್ನದ್ಧಗೊಳಿಸುವುದರ ಜೊತೆಗೆ ಸ್ವಂತ ಉದ್ಯಮ ಆರಂಭಿಸಲು ಅಗತ್ಯವಾದ ಕೌಶಲ್ಯಗಳು ಮತ್ತು ಮಾರ್ಗದರ್ಶನವನ್ನು ಒದಗಿಸುತ್ತದೆ. ತರಬೇತಿ ಸಂಪೂರ್ಣ ಉಚಿತವಾಗಿದ್ದು, ವಸತಿ ಮತ್ತು ಊಟದ ವ್ಯವಸ್ಥೆಯನ್ನೂ ಉಚಿತವಾಗಿ ಕಲ್ಪಿಸಲಾಗಿದೆ ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ಮೈಸೂರಿನ ಜಯದೇವ ಆಸ್ಪತ್ರೆ ವಿಸ್ತೃತ ಕಟ್ಟಡಕ್ಕೆ ತಿಂಗಳಲ್ಲಿ ಶಂಕುಸ್ಥಾಪನೆ

ಚಾ.ನಗರದಲ್ಲಿ ವಾರಕ್ಕೊಮ್ಮೆ ಹೃದಯ ತಪಾಸಣೆಗೆ ಚಿಂತನೆ: ಜಯದೇವ ಸಂಸ್ಥೆಯ ನಿರ್ದೇಶಕ ಡಾ.ಬಿ.ದಿನೇಶ್

ಮೈಸೂರು, ಜೂ.2– ಮೈಸೂರಿನ ಜಯದೇವ ಆಸ್ಪತ್ರೆಯ 200 ಹಾಸಿಗೆ ಸಾಮರ್ಥ್ಯದ ವಿಸ್ತೃತ ಕಟ್ಟಡಕ್ಕೆ ಇನ್ನೊಂದು ತಿಂಗಳಲ್ಲಿ ಶಂಕುಸ್ಥಾಪನೆ ನೆರವೇರಲಿದೆ ಎಂದು ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ.ಬಿ.ದಿನೇಶ್ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇನ್ನೊಂದು ತಿಂಗಳಲ್ಲಿ ಮೈಸೂರು ಆಸ್ಪತ್ರೆಯ ವಿಸ್ತೃತ ಕಟ್ಟಡಕ್ಕೆ ಶಂಕುಸ್ಥಾಪನೆ ನೆರವೇರಲಿದೆ. ಬೆಂಗಳೂರಿನ ಗೋವಿಂದ ರಾಜನಗರ, ಚರಕ ಆಸ್ಪತ್ರೆಗಳಲ್ಲೂ 3 ತಿಂಗಳಲ್ಲಿ ಜಯದೇವ ಹೃದ್ರೋಗ ಘಟಕ ಪ್ರಾರಂಭಿಸಲಾಗುವುದು. ಸೆಪ್ಟಂಬರ್‌ನಲ್ಲಿ ಹುಬ್ಬಳ್ಳಿಯಲ್ಲಿ 437 ಹಾಸಿಗೆ ಸಾಮರ್ಥ್ಯದ ಹೃದ್ರೋಗ ಆಸ್ಪತ್ರೆ ಸಾರ್ವಜನಿಕರ ಸೇವೆಗೆ ಮುಕ್ತವಾಗಲಿದೆ ಎಂದು ಹೇಳಿದರು.

ಚಾ.ನಗರದಲ್ಲಿ ವಾರಕ್ಕೊಮ್ಮೆ ತಪಾಸಣೆ: ಜಯದೇವ ಹೃದ್ರೋಗ ಸಂಸ್ಥೆಯಿಂದ ಚಾಮರಾಜನಗರದಲ್ಲಿ ಅಲ್ಲಿನ ವೈದ್ಯಕೀಯ ಕಾಲೇಜು ಹಾಗೂ ಜಿಲ್ಲಾಡಳಿತದ ಸಹಕಾರದೊಂದಿಗೆ ಸಣ್ಣ ಹೃದ್ರೋಗ ಘಟಕ ಪ್ರಾರಂಭಿಸಿ, ಪ್ರತಿ ಸೋಮವಾರ ಅಥವಾ ಬುಧವಾರ ಹೃದಯ ಸಮಸ್ಯೆ ಇರುವವರಿಗೆ ತಪಾಸಣೆ ನಡೆಸಿ, ಅಗತ್ಯವಿದ್ದವರನ್ನು ಮೈಸೂರಿಗೆ ಕರೆತಂದು ಚಿಕಿತ್ಸೆ ನೀಡಲಾಗುವುದು ಎಂದರು.

ಮಳೆಗಾಲದಲ್ಲಿ ಎಚ್ಚರವಿರಲಿ...



“ಮಳೆಗಾಲ ಪ್ರಾರಂಭವಾಗಿರುವುದರಿಂದ ಹೃದಯದ ಆರೋಗ್ಯದ ಬಗ್ಗೆ ಸಾರ್ವಜನಿಕರು ಮುನ್ನೆಚ್ಚರಿಕೆ ವಹಿಸಬೇಕು. ಹೃದಯ ಸಂಬಂಧಿ ಸಮಸ್ಯೆ ಇರುವವರು ಪ್ರತಿ 3 ತಿಂಗಳಿಗೊಮ್ಮೆ ಹೃದಯ ತಪಾಸಣೆ ಮಾಡಿಸಿಕೊಳ್ಳಬೇಕು. ಯುವಕರಲ್ಲಿ ಹೆಚ್ಚಾಗಿ ಹೃದಯಾಘಾತವಾಗುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದ್ದು, ಯುವಕರು ಮದ್ಯಪಾನ, ಧೂಮಪಾನ, ಮಾದಕ ವಸ್ತುಗಳ ಸೇವನೆ ತ್ಯಜಿಸಿ, ಉತ್ತಮ ಆರೋಗ್ಯ ಶೈಲಿ ಅಳವಡಿಸಿಕೊಳ್ಳಬೇಕು. ನಿತ್ಯ ವ್ಯಾಯಾಮ, ವಾಕಿಂಗ್ ಮಾಡಬೇಕು. ಮನೆ ಆಹಾರ, ಸೊಪ್ಪು, ಕಾಳು, ತರಕಾರಿ ಹೆಚ್ಚಾಗಿ ಉಪಯೋಗಿಸಬೇಕು. ಬೇಕರಿ ತಿಂಡಿಗಳಿಂದ ದೂರವಿರಬೇಕು. 40 ವರ್ಷ ಮೇಲ್ಪಟ್ಟವರು ವರ್ಷಕ್ಕೊಮ್ಮೆ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು. ಆಗ ಮಾತ್ರ ಉತ್ತಮ ಆರೋಗ್ಯಕರ ಸಮಾಜ ನಿರ್ಮಾಣ ಮಾಡಲು ಸಾಧ್ಯ.

–ಡಾ.ಬಿ.ದಿನೇಶ್, ಜಯದೇವ ಸಂಸ್ಥೆಯ ನಿರ್ದೇಶಕ

ಅನಿಲ್ ಚಿಕ್ಕಮಾದುಗೆ ಸಚಿವ ಸ್ಥಾನಕ್ಕಾಗಿ ವಿಶೇಷ ಪೂಜೆ



ಎಚ್.ಡಿ.ಕೋಟೆ ಶಾಸಕ ಅನಿಲ್ ಚಿಕ್ಕಮಾದುಗೆ ಸಚಿವ ಸ್ಥಾನ ದಕ್ಕಲೆಂದು ಪ್ರಾರ್ಥಿಸಿ ಅವರ ಅಭಿಮಾನಿಗಳು ಶ್ರೀ ಗಣೇಶ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ಕಾಂಗ್ರೆಸ್ ಮುಖಂಡ, ಮಾಜಿ ಕಾರ್ಪೋರೇಟರ್ ಲೋಕೇಶ್‌ಪಿಯಾ, ನಾರಾಯಣ್, ವಸಂತ್, ರವಿ, ನಾಗೇಶ್‌ನಾಯಕ್, ಕೃಷ್ಣ, ಶೇಖರ್, ಶಿವು, ರಂಗಸ್ವಾಮಿ ಮತ್ತಿತರರು ಹಾಜರಿದ್ದರು.

ಪರಿಸರ ಮಾಲಿನ್ಯ ನಿಯಂತ್ರಣ ಚಿತ್ರ, ಅಕ್ಷರ ರೂಪಕ್ಕಿಳಿಸಿದ ವಿದ್ಯಾರ್ಥಿಗಳು

ಭವಿಷ್ಯಕ್ಕಾಗಿ ಪರಿಸರ ಸಂರಕ್ಷಣೆ ಸಂಕಲ್ಪ



ಮೈಸೂರಿನ ಕಲಾಮಂದಿರದ ಆವರಣದಲ್ಲಿ ‘ವಿಶ್ವ ಪರಿಸರ ದಿನಾಚರಣೆ–2026’ ಅಂಗವಾಗಿ ಆಯೋಜಿಸಿದ್ದ ಜಿಲ್ಲಾ ಮಟ್ಟದ ಚಿತ್ರ ಕಲಾ ಮತ್ತು ಪ್ರಬಂಧ ಸ್ಪರ್ಧೆಯಲ್ಲಿ ವಿವಿಧ ಶಾಲೆಗಳ ನೂರಾರು ವಿದ್ಯಾರ್ಥಿಗಳು ಭಾವಹಿಸಿದ್ದರು.

ಮೈಸೂರು, ಜೂ.2(ಎಂಕೆ)– ಪರಿಸರ ಮಾಲಿನ್ಯ ನಿಯಂತ್ರಣ ಕುರಿತು ಹತ್ತು–ಹಲವು ಸಲಹೆಗಳೊಂದಿಗೆ ಆಕರ್ಷಕ ಚಿತ್ರಗಳನ್ನು ಬಿಡಿಸಿದ ವಿವಿಧ ಶಾಲೆಯ ನೂರಾರು ವಿದ್ಯಾರ್ಥಿಗಳು, ಭವಿಷ್ಯಕ್ಕಾಗಿ ಪರಿಸರ ಸಂರಕ್ಷಣೆ ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ಸಂಕಲ್ಪ ಮಾಡಿದರು.

ಮೈಸೂರಿನ ಕಲಾಮಂದಿರದ ಆವರಣದಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಮಡಿಲು ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ ಮೈಸೂರು ವತಿಯಿಂದ ‘ವಿಶ್ವ ಪರಿಸರ ದಿನಾಚರಣೆ–2026’ ಅಂಗವಾಗಿ ಆಯೋಜಿಸಿದ್ದ ಜಿಲ್ಲಾ ಮಟ್ಟದ ಚಿತ್ರ ಕಲಾ ಮತ್ತು ಪ್ರಬಂಧ ಸ್ಪರ್ಧೆಯಲ್ಲಿ ತಮ್ಮೊಳಗಿನ ಕೌಶಲ್ಯತೆ ಪ್ರದರ್ಶಿಸಿದ ವಿದ್ಯಾರ್ಥಿಗಳು, ಪರಿಸರ ಕಾಳಜಿ ತೋರಿದರು.

‘ಉತ್ತಮ ಭವಿಷ್ಯಕ್ಕಾಗಿ ಪರಿಸರ ಸಂರಕ್ಷಣೆ’ ಕುರಿತು 1ರಿಂದ 4ನೇ ತರಗತಿ, 5ರಿಂದ 7 ಮತ್ತು 8ರಿಂದ 10ನೇ ತರಗತಿ ವಿದ್ಯಾರ್ಥಿಗಳು ಸೇರಿ ಒಟ್ಟು ಮೂರು ವಿಭಾಗದಲ್ಲಿ ಚಿತ್ರಕಲಾ ಸ್ಪರ್ಧೆ ಹಾಗೂ ‘ಪರಿಸರ ಸಂರಕ್ಷಣೆ ಕುರಿತು’ 5ರಿಂದ 7 ಮತ್ತು 8ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಪ್ರಬಂಧ ಬರೆಯುವ ಮೂಲಕ ಪರಿಸರ ಉಳಿಸುವಲ್ಲಿ ಏನೆಲ್ಲಾ ಮಾರ್ಗಸೂಚಿಗಳನ್ನು ಅನುಸರಿಸಬೇಕೋ ಅದೆಲ್ಲವನ್ನೂ ತಮ್ಮ ಚಿತ್ರಕಲೆ ಮತ್ತು ಬರಹದ ಮೂಲಕ ಅನಿಸಿಕೆ–ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

ಭಾರತೀಯ ವಿದ್ಯಾಭವನ, ಜೆಎಸ್‌ಎಸ್ ಸೇರಿದಂತೆ ಸರ್ಕಾರಿ ಹಾಗೂ ವಿವಿಧ ಖಾಸಗಿ ಶಾಲೆಗಳಿಂದ ಭಾಗವಹಿಸಿದ್ದ ಸುಮಾರು 550ಕ್ಕೂ ಹೆಚ್ಚು ವಿದ್ಯಾರ್ಥಿಗಳು, ತಮ್ಮ ಮನಸ್ಸಿನಲ್ಲಿ ಮೂಡಿದ ಭಾವನೆಯನ್ನು ಚಿತ್ರರೂಪಕ್ಕಿಳಿಸಿ ಪರಿಸರ ಸಂರಕ್ಷಣೆಯ ಪಾಠ ಹೇಳಿದ್ದು ವಿಶೇಷವಾಗಿತ್ತು. ಇದಲ್ಲದೇ ನಾನಾ ಶಾಲೆಗಳಿಂದ ಆಗಮಿಸಿದ್ದ ಮಕ್ಕಳು ಪರಿಸರ ಸಂರಕ್ಷಣೆ ಕುರಿತು ತಮ್ಮದೇ ಶೈಲಿಯಲ್ಲಿ ಪ್ರಬಂಧ ಬರೆದು ಸೈ ಎನಿಸಿಕೊಂಡರು.

ಮಂಡಳಿ ವತಿಯಿಂದ ವಿದ್ಯಾರ್ಥಿಗಳಿಗೆ ಡ್ರಾಯಿಂಗ್ ಶೀಟ್ ನೀಡಲಾಗಿತ್ತು. ಬಣ್ಣ ಹಾಗೂ ಇತರೆ ಅಗತ್ಯ ವಸ್ತುಗಳನ್ನು ವಿದ್ಯಾರ್ಥಿಗಳೇ ತಂದಿದ್ದರು. ಒಂದು ಶಾಲೆಯಿಂದ ಗರಿಷ್ಠ 10 ವಿದ್ಯಾರ್ಥಿಗಳು ಒಂದೊಂದು ವಿಭಾಗದಲ್ಲಿ ಸ್ಪರ್ಧಿಸಲು ಅವಕಾಶ ನೀಡಲಾಗಿತ್ತು. ಒಂದು ಶಾಲೆಯಿಂದ ಗರಿಷ್ಠ 4 ಮಂದಿ ಭಾಗವಹಿಸಿದ್ದರು.

ಜೂ.5ಕ್ಕೆ ಬಹುಮಾನ ವಿತರಣೆ: ಮುಕ್ತ ವಿವಿ ಕಾವೇರಿ ಸಭಾಂಗಣದಲ್ಲಿ ಜೂ.5ರಂದು ನಡೆಯುವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡಲಾಗುವುದು ಎಂದು ಮಡಿಲು ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ ಸಿಇಓ ಶ್ರೀನಿವಾಸ್ ತಿಳಿಸಿದರು. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪರಿಸರ ಅಧಿಕಾರಿ ವಿ.ಸುನೀಲ್, ಡಾ.ಶ್ರುತಿ, ಉಪ ಪರಿಸರ ಅಧಿಕಾರಿ ನೇತ್ರಾವತಿ, ಮಂಡಳಿ ಸಿಬ್ಬಂದಿ, ವಿವಿಧ ಕಾರ್ಖಾನೆಗಳ ಸಿಬ್ಬಂದಿ ಹಾಗೂ ವಿವಿಧ ಶಾಲಾ ಶಿಕ್ಷಕರು ಭಾಗವಹಿಸಿದ್ದರು.

ಮಕ್ಕಳಲ್ಲಿ ಪರಿಸರ ಜಾಗೃತಿ ಅತೀ ಅವಶ್ಯ..

“ಭವಿಷ್ಯದಲ್ಲಿ ಎದುರಾಗುವ ಹವಾಮಾನ ವೈಪರಿತ್ಯವನ್ನು ಸಮರ್ಥವಾಗಿ ನಿರ್ವಹಣೆ ಮಾಡಬೇಕಾದರೆ ಚಿಕ್ಕ ವಯಸ್ಸಿನ ಮಕ್ಕಳಲ್ಲಿ ಪರಿಸರ ಜಾಗೃತಿ ಮೂಡಿಸುವುದು ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಚಿತ್ರಕಲೆ ಮತ್ತು ಪ್ರಬಂಧ ಬರೆಯುವ ಸ್ಪರ್ಧೆ ಆಯೋಜಿಸಿದ್ದು, ವಿವಿಧ ಶಾಲೆಗಳಿಂದ ನೂರಾರು ವಿದ್ಯಾರ್ಥಿಗಳು ಭಾಗವಹಿಸಿದ್ದಾರೆ. ಎಲ್ಲಾ ವಿದ್ಯಾರ್ಥಿಗಳು ಅಚ್ಚುಕಟ್ಟಾಗಿ ಚಿತ್ರಗಳನ್ನು ಬಿಡಿಸಿ, ಪ್ರಬಂಧ ಬರೆದಿದ್ದು ಪಾರದರ್ಶಕವಾಗಿ ಆಯ್ಕೆ ಮಾಡಿ ವಿಜೇತರ ಹೆಸರನ್ನು ಪರಿಸರ ದಿನದಂದು ಘೋಷಣೆ ಮಾಡಲಾಗುವುದು.

–ವಿ.ಎಸ್.ಕುಮಾರ್, ಪರಿಸರ ಅಧಿಕಾರಿ.

ಮೈಸೂರು ವಿಮಾನ ನಿಲ್ದಾಣದಲ್ಲಿ ಜೆಎಸ್‌ಎಸ್ ಆಸ್ಪತ್ರೆ ವತಿಯಿಂದ ವೈದ್ಯಕೀಯ ಸೇವೆ ಆರಂಭ



ಮೈಸೂರು ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರು ಮತ್ತು ಸಿಬ್ಬಂದಿಗೆ ಉಚಿತ ತುರ್ತು ವೈದ್ಯಕೀಯ ಚಿಕಿತ್ಸೆ ಕಲ್ಪಿಸುವ ವೈದ್ಯಕೀಯ ತಪಾಸಣಾ ಕೊಠಡಿಯ ನಿರ್ವಹಣೆಗಾಗಿ ಜೆಎಸ್‌ಎಸ್ ಆಸ್ಪತ್ರೆ ಮತ್ತು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದ ನಡುವಿನ ಒಡಂಬಡಿಕೆಗೆ ಜೆಎಸ್‌ಎಸ್ ಆಸ್ಪತ್ರೆ ನಿರ್ದೇಶಕ ಡಾ.ಸಿ.ಪಿ.ಮಧು, ಮೈಸೂರು ವಿಮಾನ ನಿಲ್ದಾಣದ ನಿರ್ದೇಶಕಿ ಪಿ.ವಿ.ಉಷಾ ಕುಮಾರಿ ಸಹಿ ಮಾಡಿದರು. ಆಸ್ಪತ್ರೆ ಹಾಗೂ ಪ್ರಾಧಿಕಾರದ ಅಧಿಕಾರಿಗಳಿದ್ದರು.

ಮೈಸೂರು, ಜೂ.2– ಮೈಸೂರು ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರು ಮತ್ತು ಸಿಬ್ಬಂದಿಗೆ ಉಚಿತ ತುರ್ತು ವೈದ್ಯಕೀಯ ಚಿಕಿತ್ಸಾ ಸೇವೆಯನ್ನು ಜೂನ್ 1ರಿಂದ ಪ್ರಾರಂಭಿಸಲಾಗಿದೆ.


ವಿಮಾನ ನಿಲ್ದಾಣದಲ್ಲಿ ಮೂರು ವರ್ಷಗಳ ಕಾಲ ವೈದ್ಯಕೀಯ ತಪಾಸಣಾ ಕೊಠಡಿ ನಿರ್ವಹಣೆಗಾಗಿ ಜೆಎಸ್‌ಎಸ್ ಆಸ್ಪತ್ರೆ ಮತ್ತು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದ(ಮೈಸೂರು ವಿಮಾನ ನಿಲ್ದಾಣ) ನಡುವೆ ಒಡಂಬಡಿಕೆಯಾಗಿದ್ದು, ಇದಕ್ಕೆ ಜೆಎಸ್‌ಎಸ್ ಆಸ್ಪತ್ರೆ ನಿರ್ದೇಶಕ ಡಾ.ಸಿ.ಪಿ.ಮಧು ಮತ್ತು ಮೈಸೂರು ವಿಮಾನ ನಿಲ್ದಾಣದ ನಿರ್ದೇಶಕರಾದ ಶ್ರೀಮತಿ ಪಿ.ವಿ.ಉಷಾಕುಮಾರಿ ಸಹಿ ಮಾಡಿದ್ದಾರೆ. ಜೆಎಸ್‌ಎಸ್ ಆಸ್ಪತ್ರೆಯಿಂದ ಗುಣಮಟ್ಟದ ಆರೋಗ್ಯ ಸೇವೆಗಳ ವಿಸ್ತರಣೆಯಿಂದಾಗಿ ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರು ಮತ್ತು ಸಿಬ್ಬಂದಿಯ ಆರೋಗ್ಯ ಸುರಕ್ಷತೆಗೆ ಸಹಕಾರಿಯಾಗಿದೆ. ಈ ಉಚಿತ ಸೇವೆಯು ವಾಯುಯಾನ ಮತ್ತು ಆರ್ಥಿಕ ಕೇಂದ್ರವಾಗಿ ಬೆಳೆಯುತ್ತಿರುವ ಮೈಸೂರಿನ ಅಭಿವೃದ್ಧಿ ಹಾಗೂ ಸಮುದಾಯದ ಆರೋಗ್ಯ ರಕ್ಷಣೆಗೆ ಪೂರಕವಾಗಿದೆ ಎಂದು ಜೆಎಸ್‌ಎಸ್ ಆಸ್ಪತ್ರೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಪ್ರತಿಭಾನ್ವಿತ ವಿದ್ಯಾರ್ಥಿಗಳಿಂದ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಜೂ.2– ಮೈಸೂರಿನ ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದ ವತಿಯಿಂದ ಪ್ರತಿಭಾ ಪುರಸ್ಕಾರಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. 2025–26ನೇ ಸಾಲಿನ ಶೈಕ್ಷಣಿಕ ವರ್ಷದದಲ್ಲಿ ರಾಜ್ಯ ಪಠ್ಯಕ್ರಮ ಆಧಾರಿತ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಹಾಗೂ ಸಿಬಿಎಸ್‌ಸಿ ಪಠ್ಯಕ್ರಮದಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕ ಗಳಿಸಿ ತೇರ್ಗಡೆ ಹೊಂದಿದ ಪ್ರತಿಭಾವಂತ ವಿದ್ಯಾರ್ಥಿಗಳು ಜೂನ್ 8 ಸಂಜೆ 5 ಗಂಟೆ ಒಳಗೆ ಅಂಕಪಟ್ಟಿ, ಆಧಾರ್ ಪ್ರತಿ ಹಾಗೂ ಎರಡು ಪಾಸ್‌ಪೋರ್ಟ್ ಅಳತೆ ಭಾವಚಿತ್ರದೊಂದಿಗೆ ಅರ್ಜಿ ಸಲ್ಲಿಸಬಹುದು. ಅರ್ಜಿ ನಮೂನೆ ಹಾಗೂ ಮಾಹಿತಿಗೆ ಸಂಘದ ನಿರ್ದೇಶಕರಾದ ಹೊಮ್ಮ ಮಂಜು ನಾಥ್(9019076842), ತುಪ್ಪೂರ್ ನಾಗೇಂದ್ರ(9845112625), ರಾಜರತ್ನಮ್ (9449993322) ಅಥವಾ ಕಾರ್ಯದರ್ಶಿ ಕೆ.ಆರ್.ಮಂಜುನಾಥ್(9945657522) ಅವರನ್ನು ಸಂಪರ್ಕಿಸಬಹುದು. ಜೂ.14ರಂದು ಸಂಜೆ 5ಕ್ಕೆ ಜೆಎಲ್‌ಬಿ ರಸ್ತೆಯ ಶ್ರೀ ಶಾರದಾ ನಿಕೇತನದಲ್ಲಿ ಪ್ರತಿಭಾ ಪುರಸ್ಕಾರ ಸಮಾರಂಭ ನಡೆಯಲಿದೆ ಎಂದು ಸಂಘದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.


ನಿಧನ

ಪ್ರಭಾಕರ್



ಮೈಸೂರು, ಜೂ. 2– ಮೈಸೂರಿನ ಕುವೆಂಪುನಗರ ನಿವಾಸಿ ಪ್ರಭಾಕರ್ (79) ಸೋಮವಾರ ಹೃದಯಾಘಾತದಿಂದ ನಿಧನರಾದರು. ಶ್ರೀಯುತರು ಪತ್ನಿ ಡಾ. ಕೌಶಲ್ಯ (ಕನ್ನಡ ಸ್ತ್ರೀವಾದಿ ಬರಹಗಾರ್ತಿ, ಕವಿ ಮತ್ತು ನಿವೃತ್ತ ಪ್ರಾಧ್ಯಾಪಕ ಸಿ. ಸರ್ವಮಂಗಳ ಅವರ ಸಹೋದರಿ), ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ವರ್ಗ ಅಗಲಿದ್ದಾರೆ. ಪ್ರಭಾಕರ್ ಅವರು ಬೆಂಗಳೂರಿನಲ್ಲಿ ಮ್ಯಾಕ್ಸ್ ಮೋಟಾರ್ಸ್ (ಬೈಕ್ಸ್ ಮತ್ತು ಕಾರುಗಳ ಬಿಡಿಭಾಗಗಳನ್ನು ರಫ್ತು ಮಾಡುವ ಸಂಸ್ಥೆ) ಅನ್ನು ಆರಂಭಿಸಿದರು. ಬಳಿಕ ಮೈಸೂರಿನಲ್ಲಿ ಕಾರ್ ಡಾಕ್ಟರ್, ಕಾರ್ ಸರ್ವೀಸ್ ಸೆಂಟರ್ ಅನ್ನು ಪ್ರಾರಂಭಿಸಿದರು. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಮಂಗಳವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಸ್.ಶ್ರೀಕಂಠಮೂರ್ತಿ



ಮೈಸೂರಿನ ಬನ್ನಿಮಂಟಪದ ಹನುಮಂತನಗರ ನಿವಾಸಿ ಹಾಗೂ ವಕೀಲರಾದ ಎಪಿಎಂಸಿ ನಿವೃತ್ತ ಅಧಿಕಾರಿ ಎಸ್.ಶ್ರೀಕಂಠ ಮೂರ್ತಿ(94) ಅವರು ಮೇ 31 ರಂದು ಹೃದಯಾಘಾತದಿಂದ ನಿಧನರಾದರು. ಮೃತರು ಮಕ್ಕಳಾದ ಎಸ್.ಸುರೇಶ್, ಎಸ್.ಲೋಕೇಶ್, ಎಸ್.ಸೌಭಾಗ್ಯಲಕ್ಷ್ಮಿ, ಎಸ್.ನಾಗನಂದಿನಿ ಸೇರಿದಂತೆ ಅಪಾರ ಬಂಧು–ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ನಂಜನಗೂರು ತಾಲೂಕು, ಸರಗೂರು ಗ್ರಾಮದ ಅವರ ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕುಮಾರಿ ಆಯೆಷಾ ಬೀ



ಮೈಸೂರಿನ ಬನ್ನಿಮಂಟಪದ ಬಡಾಕೌಸರ್ ಬೀದಿ ನಿವಾಸಿ ಅಬ್ದುಲ್ ಲತೀಫ್ ಅವರ ಪುತ್ರಿ ಕುಮಾರಿ ಆಯೆಷಾ ಬೀ ಅಲಿಯಾಸ್ ಫರ್ಹಾನ ತಬಸುಮ್(45) ಸೋಮವಾರ ನಿಧನರಾದರು. ವಿಕಲ ಚೇತನರಾಗಿದ್ದ ಮೃತರು ತಂದೆ, ಸಹೋದರಿ ಮತ್ತು ಅಪಾರ ಬಂಧುವರ್ಗ ಅಗಲಿದ್ದಾರೆ. ಮಂಗಳವಾರ(ಜೂ.2) ಮಧ್ಯಾಹ್ನ ಬನ್ನಿಮಂಟಪ ಸಿ–ಲೇಔಟ್ ಮಸೀದಿ ಫಿರೋಸ್‌ನಲ್ಲಿ ನಮಾಜ್–ಎ–ಜನಾಜಾ ಪ್ರಾರ್ಥನೆ ನಂತರ ಮೈಸೂರಿನ ಟಿಪ್ಪು ಸರ್ಕಲ್ ಬಳಿ ಇರುವ ಮುಸ್ಲಿಮರ ಸ್ಮಶಾನದ ಗೇಟ್ ನಂ.2ರಲ್ಲಿ ಮೃತರ ಅಂತ್ಯಸಂಸ್ಕಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕಾಂಗ್ರೆಸ್ ದಲಿತರನ್ನು ಕೇವಲ ಮತ ಬ್ಯಾಂಕ್ ಆಗಿ ಬಳಸಿಕೊಳ್ಳುತ್ತಿದೆ

- ದಲಿತ ಚಳವಳಿ ನವನಿರ್ಮಾಣ ವೇದಿಕೆ ರಾಜ್ಯಾಧ್ಯಕ್ಷ ಹರಿಹರ ಆನಂದಸ್ವಾಮಿ ಆರೋಪ
- ಅಧಿಕಾರದ ವಿಷಯ ಬಂದಾಗ ಸಮುದಾಯವನ್ನು ಯಾರೂ ಗಂಭೀರವಾಗಿ ಪರಿಗಣಿಸುತ್ತಿಲ್ಲ



ಆನಂದಸ್ವಾಮಿ

ಮೈಸೂರು,ಜೂ.2(ಎಂಟಿವೈ)– ಕಾಂಗ್ರೆಸ್ ದಲಿತರನ್ನು ಮತ ಬ್ಯಾಂಕ್ ಆಗಿ ಬಳಸಿಕೊಳ್ಳುತ್ತಿದ್ದು, ಅಧಿಕಾರ ನೀಡಲು ಹಿಂದೇಟು ಹಾಕುತ್ತಿದೆ ಎಂದು ದಲಿತ ಚಳವಳಿ ನವನಿರ್ಮಾಣ ವೇದಿಕೆ ರಾಜ್ಯಾಧ್ಯಕ್ಷ ಹರಿಹರ ಆನಂದಸ್ವಾಮಿ ಆರೋಪಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಾ.ಅಂಬೇಡ್ಕರ್ ಆಶಿಸಿದ ರಾಜಕೀಯ ಅಧಿಕಾರಕ್ಕಾಗಿ ಕಾಂಗ್ರೆಸ್ ಪಕ್ಷವನ್ನು ಆಶ್ರಯಿಸಿದ ದಲಿತ ಸಮುದಾಯ ಇದೀಗ ಬೀದಿಗೆ ಬಿದ್ದಿದೆ. ಸಾಮಾಜಿಕ ನ್ಯಾಯದ ಪರಿಧಿಯಲ್ಲಿ ಎಂದೋ ದಕ್ಕಬೇಕಿದ್ದ ಸಿಎಂ ಸ್ಥಾನ ಈಗಲೂ ಮರೀಚಿಕೆಯಾಗಿರುವುದು ದುರಂತ. ಬಿ.ರಾಚಯ್ಯ, ಎನ್.ರಾಚಯ್ಯ, ಬಿ.ಬಸವಲಿಂಗಪ್ಪ, ಕೆ.ಹೆಚ್.ರಂಗನಾಥ್, ಮಲ್ಲಿಕಾರ್ಜುನ ಖರ್ಗೆ, ಡಾ.ಜಿ.ಪರಮೇಶ್ವರ, ಡಾ.ಹೆಚ್.ಸಿ.ಮಹದೇವಪ್ಪ, ಕೆ.ಹೆಚ್. ಮುನಿಯಪ್ಪ, ಸತೀಶ್ ಜಾರಕಿಹೊಳಿ ಸೇರಿದಂತೆ ಇನ್ನಿತರ ನಾಡಿನ ತಳ ಸಮುದಾಯಗಳ ನಾಯಕರು ಮುಖ್ಯಮಂತ್ರಿಯಾಗುವ ಅರ್ಹತೆಯಿದ್ದರೂ ಜಾತಿ ಸಮೀಕರಣ, ಮನುವಾದದಿಂದ ಮುಖ್ಯಮಂತ್ರಿ ಸ್ಥಾನದಿಂದ ವಂಚಿತರಾಗಿದ್ದಾರೆ ಎಂದು ವಿಷಾದಿಸಿದರು.

ರಾಜಕೀಯ ಅಧಿಕಾರದ ಅಂಧಕಾರದಲ್ಲಿ ಬಂಧಿಸಲೆತ್ನಿಸುವುದನ್ನು ನಾವು ಸಹಿಸುವುದಿಲ್ಲ. ಕಾಂಗ್ರೆಸ್ ದಲಿತ ನಾಯಕರನ್ನು ಕಡೆಗಣಿಸಿದರೆ ಪರ್ಯಾಯ ಆಲೋಚನೆ ಮಾಡಬೇಕಾಗುತ್ತದೆ. ಸಂವಿಧಾನದ ಆಶಯವನ್ನು ನಾಡಿನುದ್ದಕ್ಕೂ ಪಸರಿಸಿದ ದಲಿತ ನಾಯಕ ಡಾ.ಹೆಚ್.ಸಿ. ಮಹದೇವಪ್ಪ, ಸಿದ್ದರಾಮಯ್ಯರ ನಂತರ ಮುಖ್ಯಮಂತ್ರಿಯಾಗಬೇಕಿತ್ತು. ಬದಲಾವಣೆ ರಾಜಕಾರಣದಿಂದ ವಂಚಿತರಾಗಿದ್ದಾರೆ. ನೂತನ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿ ಮಾಡಬೇಕು. ಆ ಮೂಲಕ ದಲಿತ ಸಮುದಾಯಕ್ಕೆ ನ್ಯಾಯ ಕಲ್ಪಿಸಬೇಕು ಎಂದು ಆಗ್ರಹಿಸಿದರು.

ಬೇಡುವ ದುರ್ಗತಿ: ದಸಂಸ ರಾಜ್ಯ ಸಂಘಟನಾ ಸಂಚಾಲಕ ದೇವಗಳ್ಳಿ ಸೋಮಶೇಖರ್ ಮಾತನಾಡಿ, ದಲಿತರನ್ನು ಮತ ಮತ್ತು ಪಕ್ಷ ಸಂಘಟನೆಗಾಗಿ ಎಐಸಿಸಿ, ಕೆಪಿಸಿಸಿ ಅಧ್ಯಕ್ಷ ಸ್ಥಾನಗಳನ್ನು ಕೊಡುವ ಕಾಂಗ್ರೆಸ್ ಹೈಕಮಾಂಡ್‌ಗೆ ಅಧಿಕಾರ ಕೊಡಲು ಹೊಟ್ಟೆಯುರಿ. ಶೇ.70ರಷ್ಟು ಮತ ಕೊಟ್ಟ ಸಮುದಾಯಗಳು ಮಂತ್ರಿಗಿರಿಗೆ ಬೇಡುವುದು ದುರ್ದೈವದ ಸಂಗತಿ. ಪರಮೇಶ್ವರ್ ಅವರನ್ನು ನಗೆಪಾಟಲು ಮಾಡಿದ್ದಾರೆ. ಶಾಸಕಾಂಗ ಸಭೆಯಲ್ಲಿ ಒಬ್ಬರೂ ಪರಮೇಶ್ವರ್ ಹೆಸರು ಹೇಳದೇ ದಲಿತ ವಿರೋಧಿ ನೀತಿ ಅನುಸರಿಸಿದ್ದಾರೆ. ಸಿದ್ದರಾಮಯ್ಯ ಅವರ ಮೇಲೆ ದಲಿತರು ಅಪಾರವಾದ ನಂಬಿಕೆ ಇಟ್ಟಿದ್ದರು. ದಲಿತರನ್ನು ಕಡೆಗಣಿಸಿದರೆ 2028ರಲ್ಲಿ ಕಾಂಗ್ರೆಸ್ ತಿರಸ್ಕಾರ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಸಾಮಾಜಿಕ ಹೋರಾಟಗಾರ ಅಹಿಂದ ಜವರಪ್ಪ ಮಾತನಾಡಿ, ಕಾಂಗ್ರೆಸ್ ಹೈಕಮಾಂಡ್ ದಲಿತರನ್ನು ಮುಖ್ಯಮಂತ್ರಿ ಮಾಡಲು ಮನಸ್ಸು ಮಾಡುತ್ತಿಲ್ಲ. ಅಧಿಕಾರವನ್ನು ಮೇಲ್ವರ್ಗದವರಿಗೆ ನೀಡುತ್ತ ದಲಿತ, ಹಿಂದುಳಿದ, ಅಲ್ಪಸಂಖ್ಯಾತರನ್ನು ವಂಚಿಸುತ್ತಿದೆ. ಜನಸಂಖ್ಯೆಗೆ ಅನುಗುಣವಾಗಿ ಪ್ರಾತಿನಿಧ್ಯ ಕೊಡದಿದ್ದರೆ ಕಾಂಗ್ರೆಸ್ ಮುಂದಿನ ದಿನಗಳಲ್ಲಿ ತನ್ನ ಅಸ್ತಿತ್ವ ಕಳೆದುಕೊಳ್ಳಲಿದೆ ಎಂದು ಎಚ್ಚರಿಸಿದರು. ಗೋಷ್ಠಿಯಲ್ಲಿ ಮುಖಂಡರಾದ ರಾಚಯ್ಯ ಕಿನಕನಹಳ್ಳಿ, ಸೋಮಯ್ಯ ಮಲೆಯೂರು, ವಿಷಕಂಠ, ಸತೀಶ್ ಇನ್ನಿತರರು ಇದ್ದರು.

ಅಧಿಕಾರ ಹಸ್ತಾಂತರಿಸುವ ಮೂಲಕ ಸಿದ್ದರಾಮಯ್ಯ ಮೇರು ವ್ಯಕ್ತಿತ್ವ ಪ್ರದರ್ಶನ



ಹೆಚ್.ಎ.ವೆಂಕಟೇಶ್

ಮೈಸೂರು, ಜೂ. 2–ತಮ್ಮ ಅಧಿಕಾರವನ್ನು ಸುಗಮವಾಗಿ ಹಸ್ತಾಂತರಿಸುವ ಮೂಲಕ ಸಿದ್ದರಾಮಯ್ಯ ಅವರು ತಮ್ಮ ಮೇರು ವ್ಯಕ್ತಿತ್ವವನ್ನು ಪ್ರದರ್ಶಿಸಿದ್ದಾರೆ. ಅವರ ನಡೆ ಪ್ರಸ್ತುತ ರಾಜಕಾರಣಕ್ಕೆ ಅತ್ಯುತ್ತಮ ಮಾದರಿಯೊಂದನ್ನು ನಿರ್ಮಿಸಿ ಕೊಟ್ಟಿದೆ ಎಂದು ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್ ಹೇಳಿದ್ದಾರೆ.

ಪಂಚ ಗ್ಯಾರಂಟಿಗಳ ಮೂಲಕ ಅಸ್ತಿತ್ವಕ್ಕೆ ಬಂದ ರಾಜ್ಯ ಕಾಂಗ್ರೆಸ್ ಸರ್ಕಾರದ ಚುಕ್ಕಾಣಿಯನ್ನು ಮೂರು ವರ್ಷಗಳ ಕಾಲ ಹಿಡಿದು ಬಳಿಕ ತಮ್ಮ ಅಧಿಕಾರವನ್ನು ಲೀಲಾಜಾಲವಾಗಿ ಹಸ್ತಾಂತರಿಸಿದ ಸಿದ್ದರಾಮಯ್ಯ ಅವರು, ಸೈದ್ಧಾಂತಿಕ ರಾಜಕಾರಣಕ್ಕೆ ತಮಗಿರುವ ಬದ್ಧತೆಯನ್ನು ಮತ್ತೊಮ್ಮೆ ಸಾಬೀತುಪಡಿಸಿದ್ದಾರೆ. ಜತೆಗೆ ಸಾಮಾಜಿಕ ನ್ಯಾಯದ ನೆರಳಿನಲ್ಲಿ ಸರ್ವಜನರ ಹಿತಕಾಯುವ ಮಾತೃಹೃದಯಿ ಆಡಳಿತದ ಮೂಲಕ ಹೊಸ ನಾಯಕರಿಗೆ ಮಾದರಿಯೆನಿಸುವ ಮಾರ್ಗ ನಿರ್ಮಿಸಿದ್ದಾರೆ. ಗ್ಯಾರಂಟಿಗಳನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿ ಜಗತ್ತಿನ ಗಮನ ಸೆಳೆದ, ಬಡಜನರ ಆಶಾಕಿರಣ ಸಿದ್ದರಾಮಯ್ಯ ಅವರು ತಮ್ಮ ರಾಜಕೀಯ ಜೀವನದ ವಿಶಾಲ ಅವಕಾಶವನ್ನು ಜನಸೇವೆಗೆ ಬಳಸಿದ್ದಾರೆ. ರಾಜ್ಯದ ಜನ ಬಹಳ ಪ್ರೀತಿಯಿಂದ ಇವರನ್ನು ಅನ್ನರಾಮಯ್ಯ ಎನ್ನುತ್ತಾರೆ. ರಾಜಿಯಾಗದ ವ್ಯಕ್ತಿತ್ವ ಹಾಗೂ ಅನುಕರಣೀಯ ನಡೆ ನುಡಿಯ ಹಿರಿಯ ಅನುಭವಿ ರಾಜಕಾರಣಿ ಸಿದ್ದರಾಮಯ್ಯ ಅವರು ರಾಜ್ಯದ ಜನ ಮಾನಸದಲ್ಲಿ ಶಾಶ್ವತ ಸ್ಥಾನ ಪಡೆದುಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಮಕ್ಕಳಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಜೂ. 2–ಮೈಸೂರಿನ ಸುಯೋಗ್ ಆಸ್ಪತ್ರೆಯ ವತಿಯಿಂದ ಜೂ.1ರಿಂದ 7ರವರೆಗೆ ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆವರೆಗೆ ಮಕ್ಕಳ ಆರೋಗ್ಯ ಉಚಿತ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿದೆ. ಈ ಶಿಬಿರದಲ್ಲಿ ಮಕ್ಕಳಲ್ಲಿ ಕಂಡು ಬರುವ ಪದೇ ಪದೆ ಜ್ವರ ಅಥವಾ ಶೀತ, ತೂಕ ಕಡಿಮೆ ಅಥವಾ ಬೆಳವಣಿಗೆಯಲ್ಲಿ ವಿಳಂಬ, ನಿರಂತರ ಕೆಮ್ಮು, ಉಸಿರಾಟದ ತೊಂದರೆ, ಕಡಿಮೆ ಆಹಾರ ಸೇವನೆ, ಹೊಟ್ಟೆನೋವು ಅಥವಾ ಅಜೀರ್ಣ ಸಮಸ್ಯೆಗಳು ಮುಂತಾದ ಸಮಸ್ಯೆಗಳಿರುವ ಮಕ್ಕಳು ಶಿಬಿರದಲ್ಲಿ ಪಾಲ್ಗೊಂಡು ಈ ಶಿಬಿರದ ಉಪಯೋಗವನ್ನು ಪಡೆಯಬೇಕೆಂದು ಕೋರಲಾಗಿದೆ. ಆಸಕ್ತರು 0821–2566966, 9986399862 ಸಂಪರ್ಕಿಸಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದಾಗಿದೆ ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

03.06.2026 ಬುಧವಾರ, ಮಳೆ ನಕ್ಷತ್ರ: ರೋಹಿಣಿ 25.05.2026ರಿಂದ 07.06.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ (ಅಧಿಕ) ಮಾಸ, ಕೃಷ್ಣ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಪೂರ್ವಾಷಾಢ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

- **ಶ್ರೀ ಸೂತ್ರ ಆಯುರ್ಧಾಮ:** ಮೊಣಕಾಲು ನೋವಿಗೆ ಉಚಿತ ವೈದ್ಯಕೀಯ ತಪಾಸಣೆ ಮತ್ತು ಸಲಹಾ ಶಿಬಿರ, ಸ್ಥಳ: ಶ್ರೀ ಸೂತ್ರ ಆಯುರ್ಧಾಮ ಆಸ್ಪತ್ರೆ, ಜೆಎಲ್‌ಬಿ ರಸ್ತೆ, ಬೆಳಗ್ಗೆಯಿಂದ.
- **ಮೈ ಭಾರತ್ ಕೇಂದ್ರ, ಮೈಸೂರು ಅಥ್ಲೆಟಿಕ್ಸ್ ಕ್ಲಬ್, ರಾಯಲ್ ರೈಡರ್ಸ್ ಮೈಸೂರು, ಸೈಕ್ಲೋಪೀಡಿಯಾ, ಮೈಸೂರು ಸೈಕ್ಲಿಂಗ್ ಟೀಮ್:** ಬೈಸಿಕಲ್ ದಿನಾಚರಣೆ ಅಂಗವಾಗಿ ಬೃಹತ್ ಸೈಕಲ್ ರ್‍ಯಾಲಿ, ಉದ್ಘಾಟನೆ: ಸಂಸದ ಯದುವೀರ್, ಸ್ಥಳ: ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಪ್ರಾರಂಭ, ಬೆಳಗ್ಗೆ 6.30ಕ್ಕೆ.
- **ಶ್ರೀ ಶ್ರೀನಿವಾಸ ಸ್ವಾಮಿ ಕೈಂಕರ್ಯ ಸಭಾ :** ಶ್ರೀ ಶ್ರೀನಿವಾಸಸ್ವಾಮಿಯವರ ವಾರ್ಷಿಕ ಮಹೋತ್ಸವ, ಬೆಳಗ್ಗೆ 9ಕ್ಕೆ ಅಭಿಷೇಕ, ಸಂಜೆ 6ಕ್ಕೆ ರಕ್ಷಾಬಂಧನ, ಕಲ್ಯಾಣೋತ್ಸವ, ಸ್ಥಳ: ಶ್ರೀ ಶ್ರೀನಿವಾಸ ಸ್ವಾಮಿ ಕೈಂಕರ್ಯ ಸಭಾ, ಶ್ರೀ ಶ್ರೀನಿವಾಸಸ್ವಾಮಿ ದೇವಸ್ಥಾನದ ರಸ್ತೆ, ತಿಲಕ್‌ನಗರ.
- **ಸುಯೋಗ್ ಆಸ್ಪತ್ರೆ :** ಮಕ್ಕಳ ಆರೋಗ್ಯ ಉಚಿತ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆ 10 ರಿಂದ.
- **ಜೆಎಸ್‌ಎಸ್ ವಿಜ್ಞಾನ ಮತ್ತು ತಾಂತ್ರಿಕ ವಿಶ್ವವಿದ್ಯಾಲಯದ ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗ, ಏರೋ ಮಾಡೆಲಿಂಗ್ ಕ್ಲಬ್ :** ರಾಷ್ಟ್ರ ಮಟ್ಟದ ಏರೋಮಾಡೆಲಿಂಗ್ ಸ್ಪರ್ಧೆ, ಸ್ಥಳ: ಜೆಎಸ್‌ಎಸ್ ವಿಜ್ಞಾನ ಮತ್ತು ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗ್ಗೆ 10 ರಿಂದ.
- **ಜಿಲ್ಲಾ ಮತ್ತು ತಾಲ್ಲೂಕು ಶರಣ ಸಾಹಿತ್ಯ ಪರಿಷತ್ತು, ಮೈಸೂರು, ಬಸವ ಅಧ್ಯಯನ ಕೇಂದ್ರ ಹಾಗೂ ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜು, ಹೆಬ್ಬಾಳು :** 2026–27ನೇ ಸಾಲಿನ ದತ್ತಿ ಕಾರ್ಯಕ್ರಮಗಳ ಉದ್ಘಾಟನೆ, ದತ್ತಿ ಉಪನ್ಯಾಸ ಹಾಗೂ ಶತಾಯುಷಿ ಬಸವ ಮಾರ್ಗಿಗಳಿಗೆ ಸನ್ಮಾನ ಮತ್ತು ಜಾನಪದ ಸಂಭ್ರಮ, ಉದ್ಘಾಟನೆ : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಅಧ್ಯಕ್ಷತೆ : ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿಗಳಾದ ನಾಡೋಜ ವೊಡೆ ಪಿ. ಕೃಷ್ಣ, ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಎಸ್. ಶಿವರಾಜಪ್ಪ ಅವರಿಂದ ‘ಶ್ರೀ ಮಲೇ ಮಹದೇಶ್ವರರ ಸಾಮಾಜಿಕ ಪ್ರಜ್ಞೆ’ ಕುರಿತು ಉಪನ್ಯಾಸ, ಜಾನಪದ ಗಾಯಕರು ಹಾಗೂ ಕರ್ನಾಟಕ ಸರ್ಕಾರದ ಜಾನಪದ ನಾಟಕ ಅಕಾಡೆಮಿಯ ಸದಸ್ಯ ದೇವಾನಂದ ವರಪ್ರಸಾದ್ ಅವರಿಂದ ಜಾನಪದ ಗಾಯನ, ಪ್ರಾಸ್ತಾವಿಕ ನುಡಿ :ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಎಂ.ಚಂದ್ರಶೇಖರ್, ಉಪಸ್ಥಿತರು : ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಹೆಳವರಹುಂಡಿ ಸಿದ್ದಪ್ಪ, ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಅರ್ಚನಾ ಸ್ವಾಮಿ ಹಾಗೂ ತಾಲ್ಲೂಕು ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ದೇವರಾಜು ಪಿ.ಚಿಕ್ಕಹಳ್ಳಿ, ಶತಾಯುಷಿ ಬಸವ ಮಾರ್ಗಿ ಗೌರವ ಪುರಸ್ಕಾರ : ಶಿಕ್ಷಣ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಪ್ರೊ. ಬಿ.ಎಸ್. ಬಸವರಾಜಯ್ಯ, ಸ್ವಾತಂತ್ರ್ಯ ಹೋರಾಟಗಾರರಾದ ಕೆ.ಆರ್. ನಗರದ ಶ್ರೀ ಹೆಚ್.ಎಂ.ರೇವಣ್ಣ, ಸಹಜ ಕೃಷಿ ಕ್ಷೇತ್ರದ ಸಾಧಕರಾದ ಚಿತ್ರದುರ್ಗ ಜಿಲ್ಲೆಯ ಕೂನಬೇವು ಗ್ರಾಮದ ಜೆ.ತಿಪ್ಪೆರುದ್ರಯ್ಯ, ಸಮಾಜ ಸೇವಕ ಮಾಡ್ರಹಳ್ಳಿ ಬಸವಣ್ಣ, ಆದರ್ಶ ಗೃಹಿಣಿಯಾಗಿ ಗುರುತಿಸಿಕೊಂಡಿರುವ ಟಿ. ನರಸೀಪುರದ ಶರಣೆ ಗೌರಮ್ಮ ಪುಟ್ಟಮಾದಪ್ಪ ಹಾಗೂ ಶರಣತತ್ವ ಪ್ರಚಾರಕರಾದ ಎಂ.ಬಿ. ವೀರಭದ್ರಪ್ಪ, ಸ್ಥಳ: ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜು, ಹೆಬ್ಬಾಳು, ಬೆಳಗ್ಗೆ 10.30ಕ್ಕೆ.
- **ಜಗದ್ಗುರು ಶ್ರೀ ಮನ್ಮಧ್ವಾಚಾರ್ಯ ಮೂಲ ಮಹಾ ಸಂಸ್ಥಾನ, ಉತ್ತರಾದಿ ಮಠ, ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ, ಶ್ರೀ ಸತ್ಯ ಸಂಕಲ್ಪ ತೀರ್ಥರ ಹಾಗೂ ಶ್ರೀ ಸತ್ಯ ಸಂತುಷ್ಟ ತೀರ್ಥರ ಸನ್ನಿಧಾನ:** ಅಧಿಕ ಮಾಸೋತ್ಸವ, ಶ್ರೀ ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರ 33 ದಿನಗಳ ಮೈಸೂರು ದಿಗ್ವಿಜಯ–2026, ಸಾಂಸ್ಕೃತಿಕ ಕಾರ್ಯಕ್ರಮ, ವಿದುಷಿ ಶ್ರೀಮತಿ ಶ್ರೀ ಲಕ್ಷ್ಮೀ ಬೆಳ್ಮಣ್ಣು ಅವರಿಂದ ದಾಸಾಂಜಲಿ, ಸ್ಥಳ: ಶ್ರೀ ಕಾಶಿ ವಿಶ್ವೇಶ್ವರ ಸನ್ನಿಧಿ ಆವರಣ, ಅಗ್ರಹಾರ, ಸಂಜೆ 6.30ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 ವಚನ ಬಾನುಲಿ, ಬಾನುಲಿ ಸರಣಿ, ಪ್ರಸ್ತುತಿ–ಪ್ರೊ. ಓ.ಎಲ್. ನಾಗ ಭೂಷಣ ಸ್ವಾಮಿ, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಠ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 7.45 ಕನ್ನಡ ಚಿತ್ರಗೀತೆಗಳು, 8.30 ಯೋಗದ ಜಗತ್ತು, 8.45 ಚಿತ್ರಗೀತೆಗಳು, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ –ಉಸ್ತಾದ್ ಬಿಸ್ಮಿಲ್ಲಾ ಖಾನ್–ಷಹನಾಯ್ ವಾದನ ಹಾಗೂ ಉಸ್ತಾದ್ ವಿಲಾಯತ್‌ಖಾನ್–ಸಿತಾರ್ ವಾದನ–ಜುಗಲ್ ಬಂದಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ **ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ –ಚೈತ್ರಿಕಾ .ಎಸ್, 12.45 ಜನಪದ ಸಂಗೀತ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳ–ಕಿರಣ್ ಎಚ್.ಪಿ., 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಬಳ್ಳಾರಿ ಎಂ.ರಾಘವೇಂದ್ರ–ಹಾಡುಗಾರಿಕೆ, 4.00 ಮಹಿಳಾ ರಂಗ–ಸಾಧನಾ ಶಿಖರ–ರಾಷ್ಟ್ರ ಹಾಗೂ ರಾಜ್ಯ ಮಟ್ಟದ ಪ್ರಶಸ್ತಿ ಪಡೆದಿರುವ, ಸಮಾಜಸೇವೆಯನ್ನು ಜೀವನವಾಗಿಸಿಕೊಂಡಿರುವ ಮಂಡ್ಯದ ಅನುಪಮ ನಾಗರಾಜ್ ಗೌಡ ಅವರೊಂದಿಗೆ ಮಾತುಕತೆ ಇವರೊಂದಿಗೆ ಭಾಗವಹಿಸುತ್ತಾರೆ–ದಿಗ್ವಿಜಯ್ ಬಿ., 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ ರೇಷ್ಮೆರಂಗ–ರೇಷ್ಮೆ ತಂತ್ರಜ್ಞಾನಗಳ ಕುರಿತ ಬಾನುಲಿ ಸರಣಿ–ಹಿಪ್ಪುನೇರಳೆ ತಳಿಗಳು ಹಾಗೂ ರೇಷ್ಮೆಹುಳು ಹೈಬ್ರಿಡ್‌ಗಳು ಕುರಿತು ನೇರ ಫೋನ್–ಇನ್ ಕಾರ್ಯಕ್ರಮ ಭಾಗವಹಿಸುತ್ತಾರೆ–ಮೈಸೂರಿನ ಕೇಂದ್ರೀಯ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ವಿಜ್ಞಾನಿಗಳಾದ ಡಾ.ದಯಾನಂದ ಮತ್ತು ಡಾ. ಮಂಜಪ್ಪ ಇವರೊಂದಿಗೆ ಭಾಗವಹಿಸುತ್ತಾರೆ–ಎನ್. ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಗಾಯತ್ರಿ ವೆಂಕಟರಾಘವನ್ – ಹಾಡುಗಾರಿಕೆ, 8.30 ಹಿಂದಿ ಚಿತ್ರಗೀತೆಗಳು, 9.30 ಕ್ರೀಡಾಲೋಕ, 10.00 ನಾಟಕ–ಕೇಳು ಜನಮೇಜಯ, ಶ್ರೀರಂಗರ ರಂಗ ನಾಟಕವನ್ನು ಬಾನುಲಿಗೆ ಅಳವಡಿಸಿ ನಿರ್ದೇಶಿಸಿದವರು ಡಾ. ವಸಂತ ಕವಲಿ, 10.30 ಸವಿನೆನಪು

ಮೈಸೂರು ಮಿತ್ರ

ಕಾರಾಗೃಹದಲ್ಲಿ ಇರಿತಕ್ಕೊಳಗಾಗಿದ್ದ ಕೈದಿ ಸಾವು

ಮಡಿಕೇರಿ, ಜೂ.2– ಜಿಲ್ಲಾ ಕೇಂದ್ರ ಕಾರಾಗೃಹದಲ್ಲಿ ನಿನ್ನೆ ತೀವ್ರ ಇರಿತಕ್ಕೊಳಗಾಗಿ ಗಂಭೀರ ಸ್ಥಿತಿಯಲ್ಲಿದ್ದು, ಮೈಸೂರಿನಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ವಿಚಾರಣಾಧೀನ ಕೈದಿ ಹೇಮಂತ್(26) ಮಂಗಳವಾರ ರಾತ್ರಿ ಅಸು ನೀಗಿದ್ದಾನೆ.

ನಿನ್ನೆ ಕಾರಾಗೃಹದ ಅಡುಗೆ ಕೋಣೆಯಲ್ಲಿ ಕ್ಷುಲ್ಲಕ ಕಾರಣಕ್ಕಾಗಿ ನಡೆದಿದ್ದ ಮಾರಾಮಾರಿ ಜಗಳದಲ್ಲಿ ಪೊನ್ನಂಪೇಟೆ ತಾಲೂಕಿನ ಟಿ.ಶೆಟ್ಟಿಗೇರಿ ನಿವಾಸಿ ಹೇಮಂತ್ ಸಂಬಂಧಿ ಖೈದಿಯಿಂದಲೇ ಚೂರಿಯಿಂದ ಇರಿತಕ್ಕೊಳಗಾಗಿದ್ದು, ಜಿಲ್ಲಾಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ, ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ದಾಖಲು ಮಾಡಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೆ ರಾತ್ರಿ 7.30ರ ಸಮಯದಲ್ಲಿ ಅಸು ನೀಗಿದನು.

ಘಟನೆ ಹಿನ್ನೆಲೆ: ಹೇಮಂತ್, ಜಗದೀಶ್, ಇಂದಿರಾ, ರವಿ ಹಾಗೂ ರಾಜೇಶ್ ಎಂಬವರು ಸಂಬಂಧಿಗಳಾಗಿದ್ದು ಇವರೆಲ್ಲರೂ ಪೊನ್ನಂಪೇಟೆ ತಾಲೂಕಿನ ಟಿ.ಶೆಟ್ಟಿಗೇರಿ ಗ್ರಾಮದ ನಿವಾಸಿಗಳಾಗಿದ್ದಾರೆ. ವಾರದ ಹಿಂದೆ ಇವರ ನಡುವೆ ಆಸ್ತಿ ಮತ್ತು ಕೌಟುಂಬಿಕ ವಿಚಾರದಲ್ಲಿ ಹೊಡೆದಾಟ ನಡೆದು 4 ಮಂದಿಯ ವಿರುದ್ಧ ಶ್ರೀಮಂಗಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಈ ಪೈಕಿ ರಾಜೇಶ್ ಎಂಬಾತ ಈ ಮೊದಲೇ ಕೊಲೆ ಪ್ರಕರಣದಲ್ಲಿ ಆರೋಪಿಯಾಗಿ ಕೇಂದ್ರ ಕಾರಾಗೃಹದಲ್ಲಿ ವಿಚಾರಣಾಧೀನ ಕೈದಿಯಾಗಿ ಬಂಧನದಲ್ಲಿದ್ದ. ನೆನ್ನೆ ದಿನ ರಾತ್ರಿ ಕಾರಾಗೃಹದ ಅಡುಗೆ ಕೋಣೆಯಲ್ಲಿದ್ದ ಸಂದರ್ಭ ರಾಜೇಶ್ ಮತ್ತು ಹೇಮಂತ್ ನಡುವೆ ಮಾತಿನ ಚಕಮಕಿ ನಡೆಯಿತ್ತೆನ್ನಲಾಗಿದೆ. ಮಾತಿನ ಚಕಮಕಿ ವಿಕೋಪಕ್ಕೆ ತಿರುಗಿ ರಾಜೇಶ್ ಚಾಕುವಿನಿಂದ ಏಕಾಏಕಿ ಹೇಮಂತ್ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ್ದನು. ಪರಿಣಾಮ ಹೇಮಂತ್ ಎದೆ, ಕುತ್ತಿಗೆ, ಕಣ್ಣಿನ ಭಾಗ ಹಾಗೂ ಹೊಟ್ಟೆಯ ಭಾಗ ಸೇರಿದಂತೆ ಒಟ್ಟು 8 ಕಡೆಗಳಲ್ಲಿ ಗಂಭೀರ ಗಾಯಗಳಾಗಿದ್ದವು. ತೀವ್ರ ಗಾಯಗೊಂಡಿದ್ದ ಹೇಮಂತ್‌ನನ್ನು ತಕ್ಷಣವೇ ಜೈಲು ಸಿಬ್ಬಂದಿ ಜಿಲ್ಲಾಸ್ಪತ್ರೆಗೆ ದಾಖಲಿಸಿ ಪ್ರಥಮ ಚಿಕಿತ್ಸೆ ಕೊಡಿಸಿ, ಬಳಿಕ ವೈದ್ಯರ ಶಿಫಾರಸ್ಸಿನ ಮೇರೆಗೆ ಮೈಸೂರಿನ ಕೆ.ಆರ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಘಟನೆ ಕುರಿತು ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರೆದಿದೆ.

ಜಿಲ್ಲೆಯ ಮೂಲಕ ಹಾದುಹೋಗುವ ರೈಲ್ವೆ ಪ್ರಸ್ತಾವನೆ ಇಲ್ಲ: ಸಂಸದ ಯದುವೀರ್

ಮಡಿಕೇರಿ, ಜೂ.2– ಜಿಲ್ಲೆಯ ಮೂಲಕ ಹಾದುಹೋಗುವ ರೈಲು ಮಾರ್ಗಕ್ಕೆ ಸಂಬಂಧಿಸಿದಂತೆ ಪ್ರಸ್ತುತ ರೈಲ್ವೆ ಸಚಿವಾಲಯದ ಮುಂದೆ ಯಾವುದೇ ಪ್ರಸ್ತಾವನೆ ಇಲ್ಲ ಎಂದು ಸಂಸದ ಯದುವೀರ್ ಸ್ಪಷ್ಟಪಡಿಸಿದ್ದಾರೆ.



ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಜೊತೆ ಯದುವೀರ್ ಸಮಾಲೋಚನೆ ನಡೆಸಿದರು.

ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರನ್ನು ಭೇಟಿ ಮಾಡಿದ ನಂತರ ಈ ಸ್ಪಷ್ಟೀಕರಣವು ಹೊರಬಿದ್ದಿದೆ. ಲೋಕಸಭಾ ಕ್ಷೇತ್ರಕ್ಕೆ ಸಂಬಂಧಿಸಿದ ವಿವಿಧ ರೈಲ್ವೆ ಮೂಲ ಸೌಕರ್ಯ ಮತ್ತು ಸಂಪರ್ಕ ವ್ಯವಸ್ಥೆಗಳ ಕುರಿತು ಚರ್ಚೆ ನಡೆಸಿದ್ದಾಗಿ ಹೇಳಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಹರಿದಾಡುತ್ತಿರುವ ಕೆಲವು ವರದಿಗಳು ಮತ್ತು ಚರ್ಚೆಗಳು ಕೊಡಗಿನ ಮೂಲಕ ರೈಲು ಮಾರ್ಗ ಹಾದುಹೋಗುವ ಸಾಧ್ಯತೆಯ ಬಗ್ಗೆ ಸಾರ್ವಜನಿಕ ವಲಯದಲ್ಲಿ ಆತಂಕವನ್ನು ಉಂಟು ಮಾಡಿದೆ ಆದರೆ, ರೈಲ್ವೆ ಸಚಿವರೊಂದಿಗೆ ನಡೆದ ಮಾತುಕತೆಯಲ್ಲಿ ಇಂತಹ ಯಾವುದೇ ಪ್ರಸ್ತಾವನೆ ಪ್ರಸ್ತುತ ಸಚಿವಾಲಯದ ಪರಿಗಣನೆಯಲ್ಲಿಲ್ಲ ಎಂಬುದು ದೃಢಪಟ್ಟಿದೆ ಎಂದು ಸಂಸದರು ಹೇಳಿದ್ದಾರೆ.

ಕೊಡಗಿನ ಸಮತೋಲಿತ ಅಭಿವೃದ್ಧಿಯನ್ನು ಖಚಿತಪಡಿಸುವುದರ ಜೊತೆಗೆ ಅದರ ವಿಶಿಷ್ಟ ಪರಿಸರ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸುವ ತನ್ನ ಬದ್ಧತೆಯನ್ನು ಪುನರುಚ್ಚರಿಸಿರುವ ಅವರು, ಪ್ರದೇಶದ ಹಿತಕ್ಕಾಗಿ ಉತ್ತಮ ಸಂಪರ್ಕ ಮತ್ತು ಮೂಲಸೌಕರ್ಯ ಅಭಿವೃದ್ಧಿಗೆ ಸಂಬಂಧಿಸಿದ ವಿಷಯಗಳಲ್ಲಿ ರೈಲ್ವೆ ಸಚಿವಾಲಯದೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿರುವುದಾಗಿ ನಾಗರಿಕರಿಗೆ ಭರವಸೆ ನೀಡಿದ್ದಾರೆ.

ಊಹಾಪೋಹ ಸುದ್ದಿಗಳಿಂದ ಸಾರ್ವಜನಿಕರು ದಾರಿ ತಪ್ಪಬಾರದು ಎಂದು ಮನವಿ ಮಾಡಿದ ಸಂಸದರು ಈ ವಿಷಯಕ್ಕೆ ಸಂಬಂಧಿಸಿದ ಯಾವುದೇ ಅಧಿಕೃತ ಬೆಳವಣಿಗೆಯನ್ನು ಸೂಕ್ತ ಮಾರ್ಗಗಳ ಮೂಲಕ ಪಾರದರ್ಶಕವಾಗಿ ಸಾರ್ವಜನಿಕರಿಗೆ ತಿಳಿಸಲಾಗುವುದು ಎಂದು ಭರವಸೆ ನೀಡಿದ್ದಾರೆ.

ಹೋಟೆಲ್ ಮಾಲಕಿಯ ಮೇಲೆ ಕಲ್ಲಿನಿಂದ ಹಲ್ಲೆ ನಡೆಸಿ ಪರಾರಿ

ಮಡಿಕೇರಿ, ಜೂ.2– ಕ್ಷುಲ್ಲಕ ಕಾರಣಕ್ಕೆ ಹೋಟೆಲ್ ಮಾಲಕಿಯ ಮೇಲೆ ಕಲ್ಲಿನಿಂದ ತೀವ್ರ ಹಲ್ಲೆ ನಡೆಸಿ ಪರಾರಿಯಾಗಿರುವ ಘಟನೆ ನಡೆದಿದೆ.



ಗಾಯಗೊಂಡಿರುವ ಮಾಲಕಿ ಹ್ಯಾಗ್ನಿಸ್

ಹೊರ ವಲಯದ ನಂದಿಮೊಟ್ಟೆ ಬಳಿ ಹೋಟೆಲ್‌ಗೆ ಆಗಮಿಸಿದ ಪ್ರವಾಸಿಗರು ಗಾಯಗೊಂಡಿರುವ ಹೋಟೆಲ್ ಮಾಲಕಿ ಹ್ಯಾಗ್ನಿಸ್(50) ಜಿಲ್ಲಾಸ್ಪತ್ರೆಗೆ ದಾಖಲಾಗಿದ್ದು ಚಿಕಿತ್ಸೆ ಪಡೆಯುತ್ತಿದ್ದಾರೆ.

ಘಟನೆ ಹಿನ್ನೆಲೆ: ಹೊರವಲಯದ ಪ್ರವಾಸಿ ತಾಣಗಳಾದ ಅಬ್ಬಿಫಾಲ್ಸ್ ಮತ್ತು ಮಾಂದಲ್ ಪಟ್ಟಿಗೆ ತೆರಳುವ ನಂದಿಮೊಟ್ಟೆ ಬಳಿ ಅಗಸ್ಟೀನ್ ಮತ್ತು ಹ್ಯಾಗ್ನೀಸ್ ಎಂಬವರು ಹೋಟೆಲ್ ನಡೆಸುತ್ತಿದ್ದು, ಮಂಗಳವಾರ ಸಂಜೆ 4 ಗಂಟೆ ಸಮಯದಲ್ಲಿ ಕಾರಿನಲ್ಲಿ ನಾಲ್ವರು ಯುವಕರು, ಇಬ್ಬರು ಮಹಿಳೆಯರು ಮತ್ತೋರ್ವ ವಯೋವೃದ್ಧೆ ಸಹಿತ ಒಟ್ಟು 7 ಮಂದಿ ಪ್ರವಾಸಿಗರು ಆಗಮಿಸಿ, ಪರೋಟ, ಊಟ ಮತ್ತು ಟೀ ಕಾಫಿಯನ್ನು ಪ್ರವಾಸಿಗರು ಆರ್ಡರ್ ಮಾಡಿದ್ದಾರೆ.

ಹೋಟೆಲ್ ಮಾಲೀಕರು ಅಡುಗೆ ಕೋಣೆಯಲ್ಲಿ ಆಹಾರ ತಯಾರಿಕೆಯಲ್ಲಿ ತೊಡಗಿದ್ದ ಸಂದರ್ಭ ನಾಲ್ವರು ಯುವಕರು ಹೊರ ಭಾಗದಲ್ಲಿದ್ದ ಚಿಪ್ಸ್, ಬಿಸ್ಕಟ್ ಮತ್ತಿತರೆ ತಿಂಡಿಗಳನ್ನು ಮಾಲೀಕರ ಅನುಮತಿ ಇಲ್ಲದೆ ತಿಂದಿದ್ದಾರೆ. ಹೋಟೆಲ್ ಮಾಲೀಕರು ತಮ್ಮನ್ನು ಕೇಳಿ ಬೇಕಾದ ವಸ್ತುಗಳನ್ನು ಪಡೆದುಕೊಳ್ಳಲು ಹೇಳಿದ್ದಾರೆ.. ಈ ವೇಳೆ ಪ್ರವಾಸಿಗರು ಉದ್ಧಟತನ ತೋರಿ ನಾವು ತಿಂದಿದ್ದನ್ನು ನಾವೇ ಹೇಳುತ್ತೇವೆ ಎಂದು ಹಾರಿಕೆಯ ದಾಟಿಯಲ್ಲಿ ಉತ್ತರಿಸಿದ್ದಾರೆ. ಇದಕ್ಕೆ ಹೋಟೆಲ್ ಮಾಲೀಕರು ಆಕ್ಷೇಪಿಸಿದಾಗ ಆರ್ಡರ್ ಮಾಡಿದ ಆಹಾರ ನಮಗೆ ಬೇಡ ಎಂದು ತಿರಸ್ಕಾರ ಮಾಡಿದ್ದಾರೆ. ಈಗಾಗಲೇ ತಯಾರಿಸಲಾದ ಆಹಾರಕ್ಕೆ ಹಣ ಪಾವತಿಸುವಂತೆ ಹೋಟೆಲ್ ಮಾಲೀಕರು ಕೇಳಿದ ಸಂದರ್ಭ ಪ್ರವಾಸಿಗರು ಮತ್ತು ಮಾಲೀಕರ ನಡುವೆ ಮಾತಿನ ಚಕಮಕಿ ನಡೆದಿದೆ.

ಮಾತಿನ ಚಕಮಕಿ ಪ್ರಕೋಪಕ್ಕೆ ಹೋಗಿ ಯುವಕರು ಕಲ್ಲಿನಿಂದ ಹೋಟೆಲ್ ಮಾಲಕಿಯ ಹಣೆ, ಕಿವಿ ಹಾಗೂ ತಲೆಯ ಭಾಗಕ್ಕೆ ಹಲ್ಲೆ ನಡೆಸಿ ಸ್ಥಳದಿಂದ ಪರಾರಿಯಾಗಿದ್ದಾರೆ. ಪೊಲೀಸರಿಗೆ ದೂರು ನೀಡಿದ ಹಿನ್ನೆಲೆಯಲ್ಲಿ ಸ್ಥಳಕ್ಕಾಗಮಿಸಿದ ಪೊಲೀಸರು ಗಾಯಾಳು ಹ್ಯಾಗ್ನೀಸ್‌ರನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಿದರು.

ಗಾಯಾಳು ನೀಡಿದ ಹೇಳಿಕೆ ಆಧರಿಸಿ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಿಸ ಲಾಗಿದೆ. ಹಲ್ಲೆ ನಡೆಸಿ ಪರಾರಿಯಾದ ಪ್ರವಾಸಿಗರು ಮತ್ತು ಕೃತ್ಯಕ್ಕೆ ಬಳಸಿದ ಕಾರಿನ ಪತ್ತೆಗಾಗಿ ಕ್ರಮ ಕೈಗೊಂಡಿದ್ದಾರೆ.

ಐನ್ ಮನೆಗಳಿಗೆ ಕಂದಾಯ ವಿನಾಯಿತಿ ನೀಡಲು ಆಗ್ರಹ

ಮಡಿಕೇರಿ, ಜೂ.2–ಕಂದಾಯ ನಿಗದಿ ನೆಪದಲ್ಲಿ ಕೊಡವರ ಐನ್ ಮನೆಗಳ ಮೇಲೆ ಗ್ರಾಮ ಪಂಚಾಯಿತಿಯಿಂದ ಮನಸೋ ಇಚ್ಛೆ ಕಂದಾಯ ವಿಧಿಸುತ್ತಿರುವ ಕುರಿತು ದೂರುಗಳು ಬಂದಿದ್ದು ಇದನ್ನು ತಕ್ಷಣವೇ ಪರಿಷ್ಕರಿಸಿ ಸಂಪೂರ್ಣ ಕಂದಾಯ ವಿನಾಯಿತಿ ನೀಡುವಂತೆ ಯುನೈಟೆಡ್ ಕೊಡವ ಆರ್ಗನೈಸೇಷನ್ ಸಂಘಟನೆ ಅಧ್ಯಕ್ಷ ಕೊಕ್ಕಲೆಮಾಡ ಮಂಜು ಚಿಣ್ಣಪ್ಪ ಆಗ್ರಹಿಸಿದ್ದಾರೆ.

ಐನ್ ಮನೆಗಳನ್ನು ಇಂದು ಕೊಡವ ಪರಂಪರೆಯ ದ್ಯೋತಕವಾಗಿ ಉಳಿಸಿಕೊಂಡು ನಿರ್ವಹಿಸಲಾಗುತ್ತಿದೆ. ಅದಕ್ಕಾಗಿ ವಾರ್ಷಿಕ ಬಹು ದೊಡ್ಡ ವೆಚ್ಚವನ್ನು ಕುಟುಂಬ ಸದಸ್ಯರು ಭರಿಸಲು ಹೆಣಗಾಡುವ ಪರಿಸ್ಥಿತಿ ಇರುವಾಗ ಏಕಾಏಕಿ 4 ಪಟ್ಟು ಕಂದಾಯವನ್ನು ಹೇರುತ್ತಿರುವುದು ಗಾಯದ ಮೇಲೆ ಬರೆ ಎಳೆದಂತೆ ಆಗಿದೆ ಎಂದು ಕಿಡಿಕಾರಿದ್ದಾರೆ.

ಐನ್ ಮನೆಗಳಿಗೆ ಅವುಗಳ ಗಾತ್ರಗಳಿಗನುಸಾರ, ಚದರ ಅಡಿ ಲೆಕ್ಕಾಚಾರದಲ್ಲಿ ಹಾಗೂ ಪಟ್ಟಣ ಪಂಚಾಯಿತಿ, ಪುರಸಭೆ ವ್ಯಾಪ್ತಿಗೆ ಅನುಸಾರ ಕಂದಾಯ ಏರಿಕೆ ಮಾಡದಂತೆ ಒತ್ತಾಯಿಸಿರುವ ಮಂಜು ಚಿಣ್ಣಪ್ಪ, ಐನ್ ಮನೆಗಳಿಗೆ ಸಂಪೂರ್ಣ ಕಂದಾಯ ವಿನಾಯಿತಿ ಘೋಷಿಸುವಂತೆ ಆಗ್ರಹಿಸಿದ್ದಾರೆ.

ಕೊಡಗಿನ ಇಬ್ಬರಿಗೆ ಸಚಿವ ಸ್ಥಾನ ನೀಡಲು ಆಗ್ರಹ

ಮಡಿಕೇರಿ, ಜೂ.2–ಕೊಡಗಿನ ಸಮಗ್ರ ಅಭಿವೃದ್ಧಿ ಮತ್ತು ವನ್ಯಜೀವಿ ಮಾನವ ಸಂಘರ್ಷಕ್ಕೆ ಶಾಶ್ವತ ಪರಿಹಾರ ಒದಗಿಸಲು ಕೊಡಗಿನ ಸ್ಥಳೀಯ ಇಬ್ಬರು ಶಾಸಕರಿಗೆ ಸಚಿವ ಸ್ಥಾನ ನೀಡಬೇಕೆಂದು ಕೊಡಗು ಜಿಲ್ಲಾ ಭೂ ಮಾಲೀಕರ ಹಾಗೂ ಮರ ವ್ಯಾಪಾರಿಗಳ ಸಂಘಟನೆ ಒತ್ತಾಯಿಸಿದೆ.



ಜಿಲ್ಲಾ ಭೂ ಮಾಲೀಕರ ಹಾಗೂ ಮರ ವ್ಯಾಪಾರಿಗಳ ಸಂಘಟನೆಯ ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಿದ್ದ ಪದಾಧಿಕಾರಿಗಳು

ಎಸ್.ಎಂ.ಕೃಷ್ಣ ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಜಿಲ್ಲೆಯ ಟಿ.ಜಾನ್, ಸುಮಾ ವಸಂತ್ ಮತ್ತು ಎಂ.ಎಂ. ನಾಣಯ್ಯರಿಗೆ ಸಚಿವ ಸ್ಥಾನ ನೀಡಿದ್ದರು. ಪರಿಣಾಮ ಜಿಲ್ಲೆಯಲ್ಲಿ 40ಕ್ಕೂ ಅಧಿಕ ಸಂಪರ್ಕ ಸೇತುವೆ, ಜಿಲ್ಲೆ ಮತ್ತು ತಾಲೂಕು ಆಸ್ಪತ್ರೆಗಳ ಮೇಲ್ದರ್ಜೆ, ರಸ್ತೆಗಳ ಅಭಿವೃದ್ಧಿ ಕೂಡ ಕಾಣುವಂತಾಯಿತು. ಬಿಜೆಪಿ ಸರಕಾರದ ಅವಧಿಯಲ್ಲಿ 10 ತಿಂಗಳ ಕಾಲ ಶಾಸಕ ಅಪ್ಪಚ್ಚು ರಂಜನ್ ಅವರು ಕೂಡ ಸಚಿವರಾಗಿ ಸೇವೆ ಸಲ್ಲಿಸಿದ್ದರು ಎಂದು ಸಂಘಟನೆ ಅಧ್ಯಕ್ಷ ಅರವಿಂದ್ ಕುಟ್ಟಪ್ಪ, ಹೇಳಿದರು.

ಹೊರ ಜಿಲ್ಲೆಗಳ ಸಚಿವರನ್ನು ಜಿಲ್ಲೆಗೆ ನೇಮಿಸಿದರೆ ಅವರಿಗೆ ಇಲ್ಲಿನ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಾಗುವುದಿಲ್ಲ. ಈ ಹಿನ್ನೆಲೆಯಲ್ಲಿ ವೈದ್ಯರಾದ ಡಾ.ಮಂತರ್ ಗೌಡ ಮತ್ತು ಹೈಕೋರ್ಟ್ ವಕೀಲರಾಗಿರುವ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಅವರಿಗೆ ಸಚಿವ ಸ್ಥಾನ ನೀಡಬೇಕು. ಇದೀಗ ಡಿ.ಕೆ.ಶಿವಕುಮಾರ್ ಅವರು ತಮ್ಮ ಸಚಿವ ಸಂಪುಟದಲ್ಲಿ ಜಿಲ್ಲೆಯ ಇಬ್ಬರಿಗೆ ಸಚಿವ ಸ್ಥಾನ ನೀಡಬೇಕು ಎಂದು ಆಗ್ರಹಿಸಿದರು.

ಸಂಘಟನೆ ಉಪಾಧ್ಯಕ್ಷ ಕೆ.ಎ.ಆದಂ ಮಾತನಾಡಿ, ಜಿಲ್ಲೆಗೆ ವಿಶೇಷ ಸ್ಥಾನಮಾನ ಇದೆ. ಜಿಲ್ಲೆಯಲ್ಲಿ ವನ್ಯ ಜೀವಿ, ಭೂ ದಾಖಲೆ, ರಸ್ತೆ ಸಹಿತ ಹಲವಾರು ಸಮಸ್ಯೆಗಳಿವೆ. ಇವುಗಳ ಪರಿಹಾರದ ಕುರಿತು ಶಾಸಕರಿಗೆ ಅರಿವಿದೆ. ಶಾಸಕರಾಗಿ ಉತ್ತಮ ಕಾರ್ಯ ಮಾಡುತ್ತಿರುವ ಇಬ್ಬರಿಗೆ ಸಚಿವ ಸ್ಥಾನ ನೀಡಿದಲ್ಲಿ ಮತ್ತಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡಲು ಸಾಧ್ಯವಾಗುತ್ತದೆ ಎಂದರು. ಸಂಘಟನೆ ಕಾನೂನು ಸಲಹೆಗಾರ ಸಿ.ಬಿ.ಪೂವಣ್ಣ, ಸಾಮಾಜಿಕ ಜಾಲತಾಣ ಪ್ರಮುಖರಾದ ಹಂಸಕೋಡಿ, ಸದಸ್ಯರಾದ ಯಾಹಿಯಾ, ಬಿ.ಎ. ಅಶ್ರಫ್ ಉಪಸ್ಥಿತರಿದ್ದರು.

ನಾಳೆ ನಗರಸಭೆ ಕೌನ್ಸಿಲ್ ಸಾಮಾನ್ಯ ಸಭೆ

ಮಡಿಕೇರಿ ಜೂ.2– ನಗರಸಭೆ ಕೌನ್ಸಿಲ್ ಸಾಮಾನ್ಯ ಸಭೆಯು ಪಿ. ಕಲಾವತಿ ಅವರ ಅಧ್ಯಕ್ಷತೆಯಲ್ಲಿ ಜೂ. 4 ರಂದು ಬೆಳಗ್ಗೆ 11.30 ಗಂಟೆಗೆ ಕೌನ್ಸಿಲ್ ಸಭಾಂಗಣದಲ್ಲಿ ನಡೆಯಲಿದೆ ಎಂದು ಪೌರಾಯುಕ್ತರಾದ ಎಚ್.ಆರ್.ರಮೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಂಬಾಕು ವಿರೋಧಿ ದಿನಾಚರಣೆ

ವಿರಾಜಪೇಟೆ, ಜೂ.2– ವಿಶ್ವ ತಂಬಾಕು ವಿರೋಧಿ ದಿನಾಚರಣೆ ಅಂಗವಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಪ್ರಗತಿ ಬಂದು ಸ್ವ–ಸಹಾಯ ಸಂಘಗಳ ಸದಸ್ಯರಿಗೆ ಮತ್ತು ಗ್ರಾಮಸ್ಥರಿಗೆ ತಂಬಾಕು ಸೇವನೆಯಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಲಾಯಿತು.

ಪ್ರಗತಿ ಬಂಧು ಸ್ವಸಹಾಯ ಸಂಘಗಳ ಒಕ್ಕೂಟದ ಅಧ್ಯಕ್ಷೆ ಗೀತಾ ಚಾಲನೆ ನೀಡಿ, ದುಶ್ಚಟ ಮುಕ್ತ ಸಮಾಜ ನಿರ್ಮಾಣಕ್ಕಾಗಿ ಯೋಜನೆಯಿಂದ ನಡೆಸುತ್ತಿರುವ ಹಲವು ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಿದರು.

ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಡಾ, ಶ್ವೇತಾ ಮಾತನಾಡಿ ತಂಬಾಕು ಸೇವನೆಯಿಂದ ಆರೋಗ್ಯಕ್ಕೆ ಹಾನಿಕರ ಕ್ಯಾನ್ಸರ್ ಉಸಿರಾಟದ ತೊಂದರೆ ಇತರೆಕಾಯಿಲೆಗಳಿಗೆ ತುತ್ತಾಗುತ್ತದೆ ಮತ್ತು ತಂಬಾಕು ಶ್ವಾಸಕೋಶದ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂದು ಮಾಹಿತಿ ನೀಡಿದರು.

ಸರಕಾರಿ ಪ್ರೌಢಶಾಲೆಯ ನಿವೃತ್ತ ಶಿಕ್ಷಕಿ ಟಿ.ಆರ್. ಸುಬ್ಬಮ್ಮ ಮಾತನಾಡಿದರು. ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕೃಷಿ ಮೇಲ್ವಿಚಾರಕ ವಸಂತ್, ಸಂಘದ ಸದಸ್ಯರು, ಗ್ರಾಮಸ್ಥರು ಇದ್ದರು.

ಕಾರುಗಳ ನಡುವೆ ಡಿಕ್ಕಿ: ಪ್ರಯಾಣಿಕರು ಪಾರು



ಸಿದ್ದಾಪುರ, ಜೂ.2– ಎರಡು ಕಾರುಗಳ ನಡುವೆ ಅಪಘಾತ ಸಂಭವಿಸಿ ಕಾರುಗಳು ತೀವ್ರ ಜಖಂಗೊಂಡ ಘಟನೆ ಸಿದ್ದಾಪುರ ಸಮೀಪದ ರಿವರ್ ಸೈಡ್ ಎಸ್ಟೇಟ್ ಬಳಿ ಮಂಗಳವಾರ ನಡೆದಿದೆ.

ವಿರಾಜಪೇಟೆ ಕಡೆಯಿಂದ ಪ್ರವಾಸಿಗರನ್ನು ಕರೆತರುತ್ತಿದ್ದ ಕಾರಿಗೆ(ಕೆಎ.51, ಎಎನ್–2360) ನೆಲ್ಯಹುದಿಕೇರಿ ಕಡೆಯಿಂದ ಸಿದ್ದಾಪುರ ಕಡೆಗೆ ಬರುತ್ತಿದ್ದ ಕಾರು (ಕೆಎ.12.ಝಡ್. 8400) ಡಿಕ್ಕಿ ಹೊಡೆದಿದೆ. ಪರಿಣಾಮ ಘಟನೆಯಲ್ಲಿ ಎರಡು ಕಾರುಗಳು ಜಖಂಗೊಂಡಿದ್ದು, ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಈ ಅಪಘಾತಕ್ಕೆ ನೆಲ್ಯಹುದಿಕೇರಿ ಕಡೆಯಿಂದ ಬರುತ್ತಿದ್ದ ಕಾರಿನ ಚಾಲಕನ ಅಜಾಗರೂಕತೆ ಕಾರಣ ಎನ್ನಲಾಗಿದ್ದು, ಘಟನಾ ಸ್ಥಳಕ್ಕೆ ಸಿದ್ದಾಪುರ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಡಿಕೇರಿ: ಬಲಮುರಿ, ಪಾರಾಣೆ, ಬಾವಲಿ, ಕೈಕಾಡು, ಕಿರಂದಾಡು, ಎಡಪಾಲ, ಕಡಂಗ, ಕರಡ, ಚೇಯ್ಯಂಡಾಣೆ, ಚೇಲವಾರ, ಮರಂದೋಡ, ಕೋಕೇರಿ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಜೂ.4 ರಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ಕೋಟ್ಪಾ ದಾಳಿ

1,66,110 ರೂ. ದಂಡ ವಸೂಲಿ

ಚಾಮರಾಜನಗರ, ಜೂ.2– ಜಿಲ್ಲೆಯಾದ್ಯಂತ ವಿವಿಧ ಇಲಾಖೆಗಳು ಹಾಗೂ ತಾಲೂಕು ಮಟ್ಟದಲ್ಲಿ ತಹಶೀಲ್ದಾರ್ ನೇತೃತ್ವದ ತಾಲ್ಲೂಕು ಕೋಟ್ಪಾ ತನಿಖಾ ತಂಡಗಳ ಸಹಯೋಗದೊಂದಿಗೆ ವಿವಿಧ ಭಾಗಗಳಲ್ಲಿ ಕೋಟ್ಪಾ ಕಾರ್ಯಾಚರಣೆ ನಡೆಸಿ 1,383 ಪ್ರಕರಣಗಳನ್ನು ದಾಖಲಿಸಿ ಒಟ್ಟು 1,66,110 ರೂ. ದಂಡ ವಿಧಿಸಿದೆ.

ನಗರ ಹಾಗೂ ತಾಲೂಕಿನ ಬಿಸಿಲವಾಡಿ, ಕೋಳಿಪಾಳ್ಯ, ಪುಣಜನೂರು, ನಾಗವಳ್ಳಿ, ಅರಕಲವಾಡಿ, ಕುದೇರು, ಬದನಗುಪ್ಪೆ, ಪಣ್ಯದಹುಂಡಿ, ಚಂದಕವಾಡಿ, ಗಣಿಗನೂರು, ನವಿಲೂರು, ಆಲ್ದೂರು, ಉಡಿಗಾಲ, ನಲ್ಲೂರು, ಜೋತಿಗೌಡನ ಪುರ ಹಾಗೂ ಕೊಳ್ಳೇಗಾಲ ಪಟ್ಟಣ ಹಾಗೂ ತಾಲೂಕಿನ ಕಾಮಗೆರೆ, ಜಾಗೇರಿ, ಶಿವನ ಸಮುದ್ರ, ಟಗರಪುರ, ಹೊಸಮಾಲಂಗಿ, ಉತ್ತಂಬಳ್ಳಿ, ತೇರಂಬಳ್ಳಿ, ಪಾಳ್ಯ ಗ್ರಾಮಗಳಲ್ಲಿ ಕೋಟ್ಪಾ ಕಾರ್ಯಾಚರಣೆ ಹಮ್ಮಿಕೊಳ್ಳಲಾಗಿತ್ತು.

ಗುಂಡ್ಲುಪೇಟೆ ಪಟ್ಟಣ ಹಾಗೂ ತಾಲೂಕಿನ ತೆರಕಣಾಂಬಿ, ಬೇಗೂರು, ಶಿಂಡನಪುರ, ಕಂದೇಗಾಲ, ಕಗ್ಗಳ, ಹಂಗಳ, ಕಾಳನಹುಂಡಿ ಹಾಗೂ ಯಳಂದೂರು ಪಟ್ಟಣ ಹಾಗೂ ತಾಲೂಕಿನ ಹೊನ್ನೂರು, ದುಗ್ಗಹಟ್ಟಿ, ಮೆಲ್ಲಹಳ್ಳಿ, ಕೃಷ್ಣಪುರ, ಉಪ್ಪಿನಮೋಳೆ, ಗುಂಬಳ್ಳಿ, ಬಿ.ಆರ್.ಹಿಲ್ಸ್, ಯರಿಯೂರು, ಅಗರ ಮಾಂಬಳ್ಳಿ, ಕೆಸ್ತೂರು ಮತ್ತು ಹನೂರು ಪಟ್ಟಣ ಹಾಗೂ ತಾಲೂಕಿನ ಗೋಪಿಶೆಟ್ಟಿಯೂರು, ಪಳಾನಿಮೇಡು, ಕೆಂಪಯ್ಯನಹಟ್ಟಿ, ನಾಲ್ ರೋಡ್, ಸಂದನಪಾಳ್ಯ, ಸುಳ್ವಾಡಿ, ಒಡೆಯರಪಾಳ್ಯ, ಬಂಡಳ್ಳಿ, ಮಾರ್ಟಳ್ಳಿ, ಮಂಗಲ, ಚಿಂಚಳ್ಳಿ, ಅಲಗುಮೂಲೆ, ತಾಳಬೆಟ್ಟ, ಪೊನ್ನಾಚಿ, ಕೊಪ್ಪ, ಗಾಜನೂರು, ಮೀಣ್ಯಂ ಗ್ರಾಮಗಳಲ್ಲಿ ಕೋಟ್ಪಾ ದಾಳಿ ನಡೆಸಲಾಯಿತು.



ತಹಶೀಲ್ದಾರ್ ನೇತೃತ್ವದ ತಾಲೂಕು ಕೋಟ್ಪಾ ತನಿಖಾ ತಂಡ ಜಿಲ್ಲೆಯ ವಿವಿಧೆಡೆ ದಾಳಿ ನಡೆಸಿ ದಂಡ ವಿಧಿಸಿತು.

ಕೋಟ್ಪಾ ದಾಳಿಯ ವೇಳೆ ನಿಯಮ ಉಲ್ಲಂಘನೆ ಮಾಡಿ ತಂಬಾಕು ಉತ್ಪನ್ನಗಳ ಮಾರಾಟ ಮಾಡುತ್ತಿದ್ದ ಅಂಗಡಿಗಳು, ತಂಬಾಕು ನಿಷೇಧದ ನಾಮಫಲಕವನ್ನು ಪ್ರದರ್ಶಿಸದ ಹೋಟೆಲ್, ಬಾರ್ ಅಂಡ್ ರೆಸ್ಟೋರೆಂಟ್‌ಗಳು, ಟೀ ಸ್ಟಾಲ್, ಚಿಲ್ಲರೆ ಅಂಗಡಿಗಳು ಹಾಗೂ ಇತರೆ ಅಂಗಡಿಗಳು, 21 ವರ್ಷದೊಳಗಿನವರಿಗೆ ತಂಬಾಕು ಮಾರಾಟ ಮಾಡುವುದು ಶಿಕ್ಷಾರ್ಹ ಅಪರಾಧ ಎಂಬ ನಾಮಫಲಕವನ್ನು ಪ್ರದರ್ಶಿಸದ ತಂಬಾಕು ಮಾರಾಟ ಅಂಗಡಿಗಳಿಗೆ, ಶೈಕ್ಷಣಿಕ ಸಂಸ್ಥೆಗಳ 100ಮೀಟರ್ ವ್ಯಾಪ್ತಿಯೊಳಗೆ ತಂಬಾಕು ಮಾರಾಟ ಮತ್ತು ಸೇವನೆಗೆ ಉತ್ತೇಜನ ನೀಡುವ ಅಂಗಡಿಗಳಿಗೆ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡುವ ವ್ಯಕ್ತಿಗಳಿಗೆ ಸ್ಥಳದಲ್ಲಿಯೇ ಪ್ರಕರಣಗಳನ್ನು ದಾಖಲಿಸಿ ದಂಡ ವಿಧಿಸಲಾಗಿದೆ.

ಜಿಲ್ಲೆಯಾದ್ಯಂತ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮಾರ್ಗದರ್ಶನದಲ್ಲಿ ತಾಲೂಕು ಮಟ್ಟದ ತನಿಖಾ ತಂಡಗಳ ಸಹ ಯೋಗದೊಂದಿಗೆ ದಾಳಿ ನಡೆಸಲಾಗುತ್ತಿದ್ದು, ತಂಬಾಕು ಉತ್ಪಾದನೆ ಮಾಡುವವರು ತಂಬಾಕು ಉತ್ಪನ್ನಗಳ ಪೊಟ್ಟಣಗಳ ಮೇಲೆ ಶೇ. 85ರಷ್ಟು ಸ್ಥಳದಲ್ಲಿ ಚಿತ್ರ ಸಹಿತ ಎಚ್ಚರಿಕೆ ಸಂದೇಶಗಳನ್ನು ಮುದ್ರಿಸುವುದು ಹಾಗೂ ವ್ಯಾಪಾರಸ್ಥರು ಎಚ್ಚರಿಕೆ ಚಿಹ್ನೆಗಳನ್ನು ಖಾತರಿಪಡಿಸಿಕೊಂಡು ಮಾರಾಟ ಮಾಡುವುದು ಮತ್ತು ಎಲ್ಲಾ ಸಾರ್ವಜನಿಕ ಸ್ಥಳದ ಮಾಲೀಕರು, ಮುಖ್ಯಸ್ಥರು ತಮ್ಮ ಕಾರ್ಯ ವ್ಯಾಪ್ತಿಯಲ್ಲಿ ಕೋಟ್ಪಾ ಕಾಯ್ದೆ ನಿಯಮಗಳು ಉಲ್ಲಂಘನೆಯಾಗದ ರೀತಿ ಕಟ್ಟೆಚ್ಚರ ವಹಿಸುವಂತೆ ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು ತಿಳಿಸಿದ್ದಾರೆ.

ಶೇ.7ರಷ್ಟು ಮೀಸಲಾತಿಗಾಗಿ ಆಗ್ರಹಿಸಿ ನಾಯಕ ಸಮಾಜ ಬೃಹತ್ ಪ್ರತಿಭಟನೆ

ಕೊಳ್ಳೇಗಾಲ, ಜೂ.2 (ನಾಗೇಂದ್ರ)– ತಾಲೂಕು ನಾಯಕರ ಸಂಘ ಮತ್ತು ನಾಯಕ ಜನಾಂಗದ ಗಡಿಮನೆ, ಕಟ್ಟೆಮನೆ ಮತ್ತು ಕಸಬಾ ಮನೆಯ ಯಜಮಾನರು ಮತ್ತು ಕುಲಸ್ಥರು ವತಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮೀಸಲಾತಿಯನ್ನು ಕಡಿತಗೊಳಿಸಿರುವ ಸರ್ಕಾರ ನಡೆ ಖಂಡಿಸಿ ಮಂಗಳವಾರ ಬೃಹತ್ ಪ್ರತಿಭಟನೆ ನಡೆಸಿತು.



ಮೀಸಲಾತಿಗೆ ಆಗ್ರಹಿಸಿ ನಾಯಕ ಸಮಾಜ ಬೃಹತ್ ಪ್ರತಿಭಟನೆ ನಡೆಸಿತು.

ಪಟ್ಟಣದ ದೊಡ್ಡ ನಾಯಕರ ಬೀದಿಯಿಂದ ಹೊರಟ ಪ್ರತಿಭಟನೆ ಚಿಕ್ಕ ನಾಯಕರ ಬೀದಿ, ಡಾ.ಅಂಬೇಡ್ಕರ್ ರಸ್ತೆ ಮೂಲಕ ತಾಲೂಕು ಕಚೇರಿ ತೆರಳಿ ಪ್ರತಿಭಟಿಸಿ, ಶಿರಸ್ತದಾರ್ ಕೃಪಕಾರ್‌ರವರಿಗೆ ಮನವಿ ಸಲ್ಲಿಸಿದರು. ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಹೆಚ್ಚಿಸುವಂತೆ ಹಲವು ದಶಕಗಳಿಂದ ಹೋರಾಟ ನಡೆಯುತ್ತಿದ್ದು, ವಿವಿಧ ಆಯೋಗಗಳ ಶಿಫಾರಸಿನ ಮೇರೆಗೆ ರಾಜ್ಯ ಸರ್ಕಾರ 2022ರಲ್ಲಿ ಮೀಸಲಾತಿ ಪ್ರಮಾಣವನ್ನು ಎಸ್‌ಸಿಗೆ ಶೇ.15ರಿಂದ 17 ಹಾಗೂ ಎಸ್‌ಟಿಗೆ ಶೇ.3 ರಿಂದ 7ಗೆ ಹೆಚ್ಚಿಸುವ ಕಾಯ್ದೆ ಜಾರಿಗೊಳಿ ಸಿತ್ತು. ಆದರೆ ಈ ಕಾಯ್ದೆಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ತಡೆಯಾಜ್ಞೆ ಜಾರಿಯಾಗಿರುವುದು ಸಾಮಾಜಿಕ ನ್ಯಾಯಕ್ಕೆ ಹಿನ್ನಡೆಯಾಗಿದೆ ಎಂದು ಆರೋಪಿಸಿದರು.

ಬಿಜೆಪಿ ನಾಯಕ ಪಾಳ್ಯ ಜಯಸುಂದರ್ ಮಾತನಾಡಿ, 56 ಸಾವಿರ ಸರ್ಕಾರಿ ನೌಕರರಿಗೆ ಈಗಿನ ಮೀಸಲಾತಿಯಲ್ಲಿ ನಮ್ಮ ಸಮಾಜಕ್ಕೆ ಅನ್ಯಾಯವಾಗುತ್ತಿದೆ. ಶೇ3ರಷ್ಟು ಬೇಡ, 7ರಷ್ಟು ಮೀಸಲಾತಿಯಡಿಯಲ್ಲಿಯೇ ನೇಮಕಗೊಳಿಸಬೇಕು, ಇಲ್ಲದಿದ್ದರೆ ಸಮಾಜ ಸೆಟೆದು ನಿಲ್ಲಬೇಕಾಗುತ್ತದೆ ಎಂದು ಎಚ್ಚರಿಸಿದರು.

ನಾಯಕ ಜನಾಂಗದ ಗಡಿ ಮನೆ ಯಜಮಾನ ಪ್ರಸಾದ್, ಮೂರ್ತಿ, ವೆಂಕಟಾಚಲ, ಗವಿರಾಯ ನಾಯಕ, ಪಾಳ್ಯ ಕಟ್ಟೆಮನೆ ದೊಡ್ಡ ಸೀಗ ನಾಯಕ, ಶಿವಪ್ರಸಾದ್ ನಾಯಕ, ದುಂಡುಮಾದ ನಾಯಕ, ವಿಶ್ವಮೂರ್ತಿ ನಾಯಕ, ಸೀಗನಾಯಕ ಕಸಬಾ ಯಜಮಾನ ಚಿಕ್ಕಮಾದನಾಯಕ, ಸುರೇಂದ್ರ, ಮಹದೇವ, ನಾಗರಾಜು, ವೆಂಕಟರಮಣ, ಗೋವಿಂದರಾಜು, ಈಶ್ವರ್, ಸುಂದರ್ ನಾಯಕ, ಕೊಪ್ಪಾಳಿ ಮಹದೇವ ನಾಯಕ, ಶಂಕರ್ ತಾಲ್ಲೂಕು ನಾಯಕ ಸಂಘದ ಅಧ್ಯಕ್ಷ ಜಗದೀಶ್ ನಾಯಕ, ಉಪಾಧ್ಯಕ್ಷ ಮಹದೇವ ನಾಯಕ, ನಿರ್ದೇಶಕರು ಕುನ್ನನಾಯಕ, ನಿಂಗನಾಯಕ, ಮುಡಿಗುಂಡ ನಟರಾಜು, ಪಾಳ್ಯ ಕೃಷ್ಣ, ಪಾಳ್ಯ ಜಯಸುಂದರ್ ಇನ್ನಿತರರಿದ್ದರು.

ಹೆಚ್‌ಸಿಎಂಗೆ ಡಿಸಿಎಂ ಸ್ಥಾನ ನೀಡುವಂತೆ ಪ್ರತಿಭಟನೆ



ಹೆಚ್.ಸಿ.ಮಹದೇವಪ್ಪ ಅಭಿಮಾನಿಗಳ ಬಳಗ ನಗರದಲ್ಲಿ ಪ್ರತಿಭಟನೆ ನಡೆಸಿತು.

ಚಾಮರಾಜನಗರ, ಜೂ.2– ಹೆಚ್.ಸಿ. ಮಹದೇವಪ್ಪ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡುವಂತೆ ಒತ್ತಾಯಿಸಿ ಅಭಿಮಾನಿಗಳ ಬಳಗ ನಗರದಲ್ಲಿ ಪ್ರತಿಭಟನೆ ನಡೆಸಿತು.

ನಗರದ ಚಾಮರಾಜೇಶ್ವರ ದೇವಸ್ಥಾನ ಮುಂಭಾಗದಲ್ಲಿ ಡಾ.ಹೆಚ್.ಸಿ.ಮಹದೇವಪ್ಪ ಅಭಿಮಾನಿ ಬಳಗದ ಜಿಲ್ಲಾಧ್ಯಕ್ಷ ಡಾ.ವಿ.ಎನ್.ಮಹದೇವಯ್ಯ ನೇತೃತ್ವದಲ್ಲಿ ಸಮಾವೇಶಗೊಂಡ ಅಭಿಮಾನಿಗಳು ಮಹದೇವಪ್ಪರ ಭಾವಚಿತ್ರದೊಂದಿಗೆ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತದಲ್ಲಿ ಕೆಲ ಹೊತ್ತು ಪ್ರತಿಭಟನೆ ನಡೆಸಿ, ಕಾಂಗ್ರೆಸ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಅಭಿಮಾನಿಗಳ ಬಳಗದ ಅಧ್ಯಕ್ಷ ಡಾ.ವಿ.ಎನ್.ಮಹದೇವಯ್ಯ ಮಾತನಾಡಿ, ಹೆಚ್.ಸಿ.ಮಹದೇಪ್ಪ ಅವರನ್ನು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಚಿವ ಸಂಪುಟದಲ್ಲಿ ಡಿಸಿಎಂ ಮಾಡಬೇಕು ಎಂದು ಒತ್ತಾಯಿಸಿದರು. ಯಾವುದೇ ಶಾಸಕರ ಅಭಿಪ್ರಾಯವನ್ನು ಕೇಳದೆ ಕಾಂಗ್ರೆಸ್ ಹೈಕ ಮಾಂಡ್ ಎಲ್ಲೋ ಕುಳಿತು ಮುಖ್ಯಮಂತ್ರಿ ಯನ್ನು ಘೋಷಣೆ ಮಾಡಿದೆ. ದಲಿತ ಮುಖ್ಯಮಂತ್ರಿ ಆಗಲು ಎಲ್ಲ ಅರ್ಹತೆ ಇದ್ದರೂ ಕೂಡ ಕಾಂಗ್ರೆಸ್ ಕಡೆಗಣಿಸಿ ದಲಿತರನ್ನು ವೋಟ್ ಬ್ಯಾಂಕ್ ಮಾಡಿಕೊಂ ಡಿದೆ. ಮುಂದಿನ ದಿನಗಳಲ್ಲಿ ಇದನ್ನು ಕಾಂಗ್ರೆಸ್ ಸರಿಪಡಿಸದೆ ಹೋದರೆ ಮುಂದಿನ ಚುನಾವಣೆಯಲ್ಲಿ ದಲಿತರು ಕಾಂಗ್ರೆಸ್‌ನ್ನು ತಿರಸ್ಕರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ನಗರಸಭಾ ಮಾಜಿ ಸದಸ್ಯರಾದ ಬಸವರಾಜು, ಪುಟ್ಟಸ್ವಾಮಿ, ಕಾಗಲವಾಡಿ ಚಂದ್ರು, ಪಿ.ಸಂಘಸೇನಾ, ಶಾಂತರಾಜು, ರಾಮಸಮುದ್ರ ಪ್ರಸನ್ನ ಕಮಲ್‌ನಾಗರಾಜು, ಗಣೇಶ್ ಪ್ರಸಾದ್, ನಾಗರತ್ನ, ಶಿವನಾಗಣ್ಣ, ಚಿನ್ನಮ್ಮ ಇದ್ದರು.

ಬೀಡಿ ಕಾಲೋನಿಯಲ್ಲಿ ಪಬ್ಲಿಕ್ ಶಾಲೆ ಉದ್ಘಾಟನೆ

ಚಾಮರಾಜನಗರ. ಜೂ.2–ಮಕ್ಕಳ ಶಿಕ್ಷಣಕ್ಕೆ ರಾಜ್ಯಸರ್ಕಾರ ಕೋಟ್ಯಾಂತರ ರೂ.ವೆಚ್ಚ ಮಾಡುತ್ತಿದ್ದು, ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆ ಗಳಿಗೆ ದಾಖಲಿಸಿ, ಗುಣಮಟ್ಟದ ಶಿಕ್ಷಣ ಕೊಡಿಸುವಂತೆ ನಗರಾಭಿವೃದ್ಧಿ ಪ್ರಾಧಿಕಾರ (ಚುಡಾ) ಅಧ್ಯಕ್ಷ ಮಹಮದ್ ಅಸ್ಗರ್ (ಮುನ್ನಾ) ಸಲಹೆ ನೀಡಿದ್ದಾರೆ.



ಉರ್ದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾರಂಭ ವೇದಿಕೆ ಕಾರ್ಯಕ್ರಮವನ್ನು ಚುಡಾ ಅಧ್ಯಕ್ಷ ಮಹಮದ್ ಅಸ್ಗರ್ ಉದ್ಘಾಟಿಸಿದರು.

ನಗರಸಭೆ ವ್ಯಾಪ್ತಿಯ ಗಾಳೀಪುರ ಬಡಾವಣೆಯ ಬೀಡಿಕಾಲೋನಿಯಲ್ಲಿ ಕೆಪಿಎಸ್ ಮಾದರಿಯ ಮೌಲಾನಾ ಆಜಾದ್ ಪಬ್ಲಿಕ್ ಶಾಲಾರಂಭ ಕಾರ್ಯಕ್ರಮವನ್ನು ಉದ್ಘಾಟಿಸಿ, ಜಿಲ್ಲೆಯಲ್ಲೇ ಪ್ರಥಮ ಬಾರಿಗೆ ಉರ್ದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮೌಲಾನಾ ಆಜಾದ್ ಪಬ್ಲಿಕ್ ಶಾಲೆ ಆರಂಭವಾಗುತ್ತಿದೆ, ಎಲ್‌ಕೆಜಿಯಿಂದ 8 ನೇ ತರಗತಿಯವರಗೆ ಶಿಕ್ಷಣ ನೀಡಲಾಗುತ್ತದೆ, ಶಾಲೆಯಲ್ಲಿ ನುರಿತ ಶಿಕ್ಷಕರಿಂದ ಗುಣಮಟ್ಟದ ಬೋಧನೆ ಮಕ್ಕಳಿಗೆ ಸಿಗಲಿ ಎಂದು ಆಶಿಸಿದರು.

ಉರ್ದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕೆಪಿಎಸ್ ಮಾದರಿಯ ಮೌಲಾನಾ ಆಜಾದ್ ಪಬ್ಲಿಕ್ ಶಾಲೆ ಆರಂಭಿಸುವಂತೆ ಸಭೆಗಳಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ಗಮನ ಸೆಳೆದಿದ್ದೆವು, ಆ ಒಂದು ಶ್ರಮದ ಫಲವೆ ಕೆಪಿಎಸ್ ಮಾದರಿಯ ಮೌಲಾನಾ ಆಜಾದ್ ಪಬ್ಲಿಕ್ ಶಾಲೆ ಮಂಜೂರಾಯಿತು ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಹನುಮಶೆಟ್ಟಿ ಮಾತನಾಡಿ, ಜಿಲ್ಲೆಯಲ್ಲೇ ಮೊದಲ ಬಾರಿಗೆ ಉರ್ದು ಮಾಧ್ಯಮದ ಶಾಲೆಯಲ್ಲಿ ಕೆಪಿಎಸ್ ಮಾದರಿಯ ಮೌಲಾನಾ ಆಜಾದ್ ಪಬ್ಲಿಕ್ ಶಾಲೆ ಆರಂಭವಾಗಿದ್ದು, ಸಮುದಾಯದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಸಿಗಲಿದೆ. ಪೋಷಕರು ತಮ್ಮ ಮಕ್ಕಳಿಗೆ ಸರ್ಕಾರದ ಸವಲತ್ತು ಕೊಡಿಸುವ ಮೂಲಕ ಅವರನ್ನು ಸಮಾಜದ ಉತ್ತಮ ಪ್ರಜೆಗಳಾಗಿ ರೂಪಿಸಬೇಕು ಎಂದು ತಿಳಿಸಿದರು.

ಪ್ರಾಥಮಿಕ ಶಾಲಾಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಮಹದೇವಸ್ವಾಮಿ, ಪ್ರಾಥಮಿಕ ಶಾಲಾಶಿಕ್ಷಕರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ, ಕೆ.ಎಸ್.ಮಾದಪ್ಪ, ತಾಲೂಕು ಅಧ್ಯಕ್ಷ ಸಿ.ಕೆ.ರಾಮಸ್ವಾಮಿ, ಬಿ.ಆರ್.ಸಿ ರಾಜೀವ್, ಬಿಐಇಆರ್‌ಟಿ ರೆಬೆಲ್, ಮಾಜಿ ನಗರಸಭಾ ಸದಸ್ಯ ಕಲೀಲ್ ಉಲ್ಲಾ. ಎಸ್‌ಡಿಎಂಸಿ ಅಧ್ಯಕ್ಷೆ ಯೊಸ್ಮಿನ್, ತಾಜ್, ಮುಖ್ಯಶಿಕ್ಷಕಿ ಅಜೀರಾಬೇಗಂ, ಬಿಆರ್‌ಸಿ ಶಿಕ್ಷಕ ಎಂ.ಮುರುಗೇಶ್‌ಕುಮಾರ್, ಸೇರಿದಂತೆ ಶಿಕ್ಷರ ವೃಂದ, ಪೋಷಕರು, ಸಿಆರ್‌ಪಿ, ಬಿಆರ್‌ಪಿ, ಬಡಾವಣೆ ನಿವಾಸಿಗಳು ಹಾಜರಿದ್ದರು,


ಒಂದೇ ತಿಂಗಳಿಗೆ ಕೆಟ್ಟು ನಿಂತ ಹೈಮಾಸ್ಟ್ ದೀಪ



ಚಾಮರಾಜನಗರ, ಜೂ.2– ತಾಲೂಕಿನ ಮೂಕನಪಾಳ್ಯ ಬಳಿ ಇರುವ ಕುಂಬಾರಗುಂಡಿ ಗ್ರಾಮದಲ್ಲಿ ಅಳವಡಿಸಿದ್ದ ಹೈಮಾಸ್ಟ್ ದೀಪ ಒಂದೇ ತಿಂಗಳಿಗೆ ಕೆಟ್ಟು ನಿಂತಿದೆ. ಜಿಲ್ಲೆಯ ಗಡಿಭಾಗದಲ್ಲಿರುವ ಪುಣಜನೂರು ಗ್ರಾ.ಪಂ. ವ್ಯಾಪ್ತಿಗೆ ಸೇರಿದ ಕುಂಬಾರಗುಂಡಿ ಗ್ರಾಮದಲ್ಲಿ ಕಾಡು ಪ್ರಾಣಿಗಳ ಹಾವಳಿ ಹೆಚ್ಚಿದೆ. ಇಲ್ಲಿ ಹಲವು ಮನೆಗಳಿದ್ದು, ಬೀದಿ ದೀಪಗಳಿಲ್ಲದ ಕಾರಣ ರಾತ್ರಿ ವೇಳೆ ಜನರು ಓಡಾಡುವುದೇ ಕಷ್ಟವಾಗಿತ್ತು. ಹಾಗಾಗಿ ತಾಂಡಾ ಅಭಿವೃದ್ಧಿ ನಿಗಮದಿಂದ 4.50 ಲಕ್ಷ ರೂ.ಗಳ ವೆಚ್ಚದಡಿ ಇಲ್ಲಿ ಹೈಮಾಸ್ಟ್ ದೀಪ ಅಳವಡಿಸಲಾಗಿತ್ತು.

ಎರಡು ತಿಂಗಳ ಹಿಂದೆ ಅಳವಡಿಸಲಾದ ಹೈಮಾಸ್ಟ್ ದೀಪ ಒಂದು ತಿಂಗಳಿಂದ ಕೆಟ್ಟು ನಿಂತಿದೆ. ಯಾವ ಅಧಿಕಾರಿಗಳು ಈ ಬಗ್ಗೆ ತಲೆ ಕೆಡಿಸಿಕೊಳ್ಳುತ್ತಿಲ್ಲ. ರಾತ್ರಿ ವೇಳೆ ಕಗ್ಗತ್ತಲಿನಲ್ಲಿ ಈ ಭಾಗದಲ್ಲಿ ಓಡಾಡಲು ಭಯಪಡುವಂತಾಗಿದೆ ಎಂದು ಗ್ರಾಮಸ್ಥರು ದೂರಿದ್ದಾರೆ. ಕಳಪೆ ಗುಣಮಟ್ಟದ ಹೈಮಾಸ್ಟ್ ದೀಪ ಅಳವಡಿಸಿದ್ದರಿಂದ ಕೆಲವೇ ದಿನಗಳಲ್ಲಿ ಕೆಟ್ಟು ಹೋಗಿದೆ ಎಂದು ಗ್ರಾಮಸ್ಥರು ಆರೋಪಿಸಿದ್ದು, ಕೂಡಲೇ ಉತ್ತಮ ಗುಣಮಟ್ಟದ ದೀಪ ಅಳವಡಿಸಬೇಕು ಎಂದು ಒತ್ತಾಯಿಸಿದ್ದಾರೆ.

ಎಂ.ಮಹದೇವಶೆಟ್ಟಿ ಓಬಿಸಿ ಮೋರ್ಚಾ ಅಧ್ಯಕ್ಷ



ಚಾಮರಾಜನಗರ: ಚಾಮರಾಜನಗರ ಬಿಜೆಪಿ ಗ್ರಾಮಾಂತರ ಮಂಡಲದ ಓಬಿಸಿ ಮೋರ್ಚಾದ ಅಧ್ಯಕ್ಷರಾಗಿ ಬ್ಯಾಡಮೂಡ್ಲು ಎಂ.ಮಹದೇವಶೆಟ್ಟಿ ನೇಮಕಗೊಂಡಿದ್ದಾರೆ. ಭಾರತೀಯ ಜನತಾ ಪಾರ್ಟಿಯ ಚಾಮರಾಜನಗರ ಜಿಲ್ಲೆಯ ಚಾಮರಾಜನಗರ ಗ್ರಾಮಾಂತರ ಮಂಡಲದ ಓಬಿಸಿ ಮೋರ್ಚಾದ ಅಧ್ಯಕ್ಷರನ್ನಾಗಿ ನಿಯುಕ್ತಿಗೊಳಿಸಿದ್ದಾರೆ.

ಪಕ್ಷದ ಸಂಘಟನೆ ಹಾಗೂ ಬಲವರ್ಧನೆಗೆ ತಮ್ಮನ್ನು ತೊಡಗಿಸಿಕೊಂಡು ಕಾರ್ಯೋನ್ಮುಖರಾಗಿ ಪಕ್ಷದ ಏಳಿಗೆಗಾಗಿ ಶ್ರಮಿಸುವಂತೆ ಗ್ರಾಮಾಂತರ ಮಂಡಲ ಅಧ್ಯಕ್ಷ ಕಾಡಹಳ್ಳಿ ಕುಮಾರ್ ಆದೇಶ ಪತ್ರದಲ್ಲಿ ತಿಳಿಸಿದ್ದಾರೆ.

ಸೇತುವೆ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ



ಸೇತುವೆ ನಿರ್ಮಾಣ ಕಾಮಗಾರಿಗೆ ಶಾಸಕ ಹೆಚ್.ಟಿ.ಮಂಜು ಭೂಮಿ ಪೂಜೆ ನೆರವೇರಿಸಿದರು.

ಕೆ.ಆರ್.ಪೇಟೆ, ಜೂ.2– ಕಳೆದ 4 ವರ್ಷಗಳ ಹಿಂದೆ ಸುರಿದ ಕುಂಭದ್ರೋಣ ಮಳೆಯಿಂದಾಗಿ ತಾಲೂಕಿನ ಮಾದಿಹಳ್ಳಿ ಹಳ್ಳದ ಸೇತುವೆ ಕೊಚ್ಚಿ ಹೋಗಿ ಸಂಚಾರ ಬಂದ್ ಆಗಿದ್ದ ಹಿನ್ನೆಲೆಯಲ್ಲಿ ಸೇತುವೆ ಪುನರ್ ನಿರ್ಮಾಣ ಕಾಮಗಾರಿಗೆ ಶಾಸಕ ಹೆಚ್.ಟಿ.ಮಂಜು ಭೂಮಿ ಪೂಜೆ ನೆರವೇರಿಸಿದರು.

ಸುಮಾರು 2.75 ಕೋಟಿ ರೂ. ವೆಚ್ಚದ ಸೇತುವೆ ಪುನರ್ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಮಾದಿಹಳ್ಳಿ ಹಳ್ಳದ ಸೇತುವೆ ಹತ್ತಾರು ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಸಂಪರ್ಕ ರಸ್ತೆಯಾಗಿದೆ. ಸದರಿ ಸೇತುವೆ ಪುನರ್ ನಿರ್ಮಾಣ ಕಾಮಗಾರಿಗೆ ಅನುದಾನ ನೀಡುವಂತೆ ವಿಧಾನಸಭೆ ಕಲಾಪದಲ್ಲಿ ಸರ್ಕಾರದ ಗಮನ ಸೆಳೆದ ಪರಿಣಾಮ ರಾಜ್ಯ ಸರ್ಕಾರ 2.75 ಕೋಟಿ ರೂ. ಅನುದಾನ ಬಿಡುಗಡೆಗೊಳಿಸಿದೆ. ಈ ಕಾಮಗಾರಿಯ ಟೆಂಡರ್ ಪ್ರಕ್ರಿಯೆಯು ಕಾವೇರಿ ನೀರಾವರಿ ನಿಗಮದ ಮೂಲಕ ನಡೆದಿದ್ದು ಇಂದು ಭೂಮಿ ಪೂಜೆ ನೆರವೇರಿಸಲಾಗಿದೆ. ಗುತ್ತಿಗೆದಾರರು ಗುಣಮಟ್ಟದ ಕಾಮಗಾರಿ ನಡೆಸುವ ಮೂಲಕ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕು. ಈ ಭಾಗದ ಸಾರ್ವಜನಿಕರು ಕಾಮಗಾರಿಯ ಗುಣಮಟ್ಟ ಪರಿಶೀಲಿಸಿ ಗುಣಮಟ್ಟದ ಕಾಮಗಾರಿ ಮಾಡಿಸಿಕೊಳ್ಳುವಂತೆ ಸಲಹೆ ನೀಡಿದರು.

ತಾಲೂಕಿನಲ್ಲಿ ಸಾಕಷ್ಟು ಕೆರೆ ಕಟ್ಟೆಗಳು ಹಾಗೂ ಸೇತುವೆಗಳ ಪುನರ್ ನಿರ್ಮಾಣಕ್ಕೆ ಕನಿಷ್ಠ 200 ಕೋಟಿ ಅನುದಾನ ಬೇಕಾಗಿದೆ. ಈ ಬಗ್ಗೆ ತಾವು ಸದನದಲ್ಲಿ ಮಾತನಾಡಿ ಸಮಸ್ಯೆಗಳ ಬಗ್ಗೆ ಗಮನ ಸೆಳೆದಿರುವ ಹಿನ್ನೆಲೆಯಲ್ಲಿ ಅಲ್ಪಸ್ವಲ್ಪ ಅನುದಾನ ಸಿಗುತ್ತಿದೆ. ಬಂದ ಅನುದಾನವನ್ನು ತೀರ ಅಗತ್ಯ ಇರುವ ಕಡೆಗೆ ಹಂಚಿಕೆ ಮಾಡಿ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸುತ್ತಿದ್ದೇನೆ. ಮಂಡ್ಯ ಜಿಲ್ಲೆಯ ಬೇರೆ ತಾಲೂಕುಗಳಿಗೆ ಸಾವಿರಾರು ಕೋಟಿ ರೂ. ವಿಶೇಷ ಅನುದಾನ ನೀಡಿರುವ ರಾಜ್ಯ ಸರ್ಕಾರ ಜೆಡಿಎಸ್ ಶಾಸಕನಾದ ನನಗೆ ಬೇರೆ ತಾಲೂಕುಗಳಿಗೆ ನೀಡಿದ ಅರ್ಧದಷ್ಟು ಅನುದಾನ ನೀಡದೇ ತಾರತಮ್ಯ ಮಾಡುತ್ತಿದೆ. ರಾಜ್ಯದ ನೂತನ ಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ್ ಅವರಾದರೂ ತಮ್ಮ ಅಧಿಕಾರದ ಅವಧಿಯಲ್ಲಿ ಈ ತಾರತಮ್ಯ ಹೋಗಲಾಡಿಸಿ ಜೆಡಿಎಸ್ ಶಾಸಕರಿಗೂ ಸಮಾನ ಅನುದಾನ ನೀಡಬೇಕು. ಈ ಮೂಲಕ ತಾಲೂಕಿನ ಅಭಿವೃದ್ಧಿಗೆ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಈ ವೇಳೆ ಕಾವೇರಿ ನೀರಾವರಿ ನಿಗಮದ ಹೇಮಾವತಿ ನೀರಾವರಿ ಇಲಾಖೆಯ ಕಾರ್ಯಪಾಲಕ ಇಂಜಿನಿಯರ್ ಜಯರಾಂ, ಎಇಇ ರಾಕೇಶ್, ಕಿಕ್ಕೇರಿ ಹೋಬಳಿ ಜೆಡಿಎಸ್ ಅಧ್ಯಕ್ಷ ಮಂಜೇಗೌಡ, ಎಪಿಎಂಸಿ ಮಾಜಿ ಅಧ್ಯಕ್ಷ ಮಲ್ಲೇಶ್, ತಾಪಂ ಮಾಜಿ ಸದಸ್ಯ ಕೃಷ್ಣೇಗೌಡ, ಪಿಎಸಿಎಸ್ ಮಾಜಿ ಅಧ್ಯಕ್ಷ ಶೇಖರ್, ಮುಖಂಡರಾದ ಲಿಂಗರಾಜೇಗೌಡ, ಡಿ.ಎಸ್.ನಾಗೇಂದ್ರ, ಪ್ರಥಮ ದರ್ಜೆ ಗುತ್ತಿಗೆದಾರ ಜೆಸಿಬಿ ನಾಗೇಶ್ ಸೇರಿದಂತೆ ಹಲವರಿದ್ದರು.

ವಿಶ್ವ ಹಾಲು ದಿನಾಚರಣೆ: ಹಾಲಿನ ಉತ್ಪನ್ನಗಳ ಕಿಟ್ ವಿತರಣೆ



ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಪೌರ ಕಾರ್ಮಿಕರಿಗೆ ಹಾಲಿನ ಉತ್ಪನ್ನಗಳ ಕಿಟ್ ವಿತರಿಸಿದರು.

ಪಾಂಡವಪುರ, ಜೂ.2– ವಿಶ್ವಹಾಲು ದಿನಾಚರಣೆ ಅಂಗವಾಗಿ ಪಟ್ಟಣದಲ್ಲಿ ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಅವರು ಪೌರಕಾರ್ಮಿಕರು, ಆಸ್ಪತ್ರೆ ರೋಗಿಗಳು, ವೈದ್ಯರು, ಸಿಬ್ಬಂದಿ, ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ, ಪಶು ಆಸ್ಪತ್ರೆ ವೈದ್ಯರು, ಸಿಬ್ಬಂದಿ ಹಾಗೂ ಪತ್ರಕರ್ತರಿಗೆ ಹಾಲು ಮತ್ತು ಹಾಲಿನ ಉತ್ಪನ್ನಗಳ ಕಿಟ್‌ಗಳನ್ನು ವಿತರಿಸಿದರು.

ಪುರಸಭೆ ಆವರಣದಲ್ಲಿ ಪೌರಕಾರ್ಮಿಕರು, ಸಾರ್ವಜನಿಕ ಆಸ್ಪತ್ರೆಯಲ್ಲಿ ಒಳ ಹಾಗೂ ಹೊರ ರೋಗಿಗಳಿಗೆ, ವೈದ್ಯರು, ಸಿಬ್ಬಂದಿಗೆ ಮತ್ತು ಪಟ್ಟಣದ ಪೊಲೀಸ್ ಠಾಣೆಗೆ ತೆರಳಿ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಕಿಟ್ ವಿತರಿಸಿದರು. ನಂತರ ಪಶು ವೈದ್ಯಕೀಯ ಆಸ್ಪತ್ರೆ ಸಿಬ್ಬಂದಿ ಹಾಗೂ ಪತ್ರಕರ್ತರಿಗೆ ಕಿಟ್ ವಿತರಣೆ ಮಾಡಿದರು.

ಬಳಿಕ ಮಾತನಾಡಿದ ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್, ವಿಶ್ವ ಹಾಲು ದಿನಾಚರಣೆ ಅಂಗವಾಗಿ ಪಟ್ಟಣದಲ್ಲಿ ಹಾಲು ಮತ್ತು ಹಾಲಿನ ಉತ್ಪನ್ನಗಳ ಕಿಟ್ ವಿತರಣೆ ಮಾಡಿದ್ದೇವೆ. ಸಾರ್ವಜನಿಕರು, ರೈತರು ನಮ್ಮ ಕೆಎಂಎಫ್ ಒಕ್ಕೂಟದ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ಮನವಿ ಮಾಡಿದರು.

ಈ ವೇಳೆ ಮನ್‌ಮುಲ್ ಉಪ ವ್ಯವಸ್ಥಾಪಕ ಆರ್.ಪ್ರಸಾದ್, ಹಾಲು ಮಾರಾಟ ವ್ಯವಸ್ಥಾಪಕಿ ಶಶಿಕಲಾ, ಡಾ.ಸಂತೋಷ್, ಮಾರ್ಗ ವಿಸ್ತರಣಾಧಿಕಾರಿ ಉಷಾ, ಮಧು ಶಂಕರ್, ನಾಗೇಂದ್ರ, ಪ್ರಜ್ವಲ್, ಟೆಕ್ನಿಷಿನ್ ಆನಂದ್, ಪುರಸಭೆ ಮಾಜಿ ಸದಸ್ಯರಾದ ಆರ್.ಸೋಮಶೇಖರ್, ಗಿರೀಶ್, ಬಿ.ಎಸ್.ಜಯರಾಮು, ಜ್ಯೋತಿಲಕ್ಷ್ಮಿ, ಶಿವಣ್ಣ, ಆರುಮುಗಂ, ಚಂದ್ರು, ಜಯರಾಮು, ಉಮೇಶ್, ಟಿಎಪಿಸಿಎಂಎಸ್ ಅಧ್ಯಕ್ಷ ಚಿಕ್ಕಾಡೆ ಗಿರೀಶ್, ನಿರ್ದೇಶಕ ಪಿ.ಎಲ್.ಆದರ್ಶ, ಬಿಜೆಪಿ ಮುಖಂಡ ಮಂಜುನಾಥ್, ಗುರು ಸೇರಿದಂತೆ ಹಾಲು ಮಾರಾಟಗಾರರು, ಇತರರು ಹಾಜರಿದ್ದರು.

ಸಂಭ್ರಮದ ಶಾಲಾ ಪ್ರಾರಂಭೋತ್ಸವ



ಕಡಿಲುವಾಗಿಲು ಸರ್ಕಾರಿ ಪ್ರೌಢಶಾಲೆಯಲ್ಲಿ ಶಾಲಾ ಪ್ರಾರಂಭೋತ್ಸವ ನಡೆಯಿತು.

ಭಾರತೀನಗರ, ಜೂ.2– ಇಲ್ಲಿಗೆ ಸಮೀಪದ ಕಡಿಲುವಾಗಿಲು ಸರ್ಕಾರಿ ಪ್ರೌಢಶಾಲೆಯಲ್ಲಿ ಶಾಲಾ ಪ್ರಾರಂಭೋತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು.

ಶಾಲಾವರಣವನ್ನು ತಳಿರು–ತೋರಣಗಳಿಂದ ಸಿಂಗರಿಸಲಾಗಿತ್ತು. ಶಾಲೆಗೆ ಆಗಮಿಸಿದ ವಿದ್ಯಾರ್ಥಿಗಳಿಗೆ ಹೂಗುಚ್ಛ ಹಾಗೂ ಸಿಹಿ ನೀಡಿ ಸ್ವಾಗತಿಸಲಾಯಿತು. ನಂತರ ನಡೆದ ಶಾಲಾ ಪ್ರಾರಂಭೋತ್ಸವದಲ್ಲಿ ಶಾಲಾ ಅಭಿವೃದ್ಧಿ ಸಮಿತಿ ಸದಸ್ಯರಾದ ಕೆ.ಟಿ.ಧನಂಜಯ, ರಾಜೇಶ್, ರವಿ ಅವರು ಶಾಲಾ ಮಕ್ಕಳಿಗೆ ಪಠ್ಯಪುಸ್ತಕ ಹಾಗೂ ಸಮವಸ್ತ್ರಗಳನ್ನು ವಿತರಿಸಿದರು.

ಶಾಲಾ ಅಭಿವೃದ್ಧಿ ಸಮಿತಿ ಸದಸ್ಯ ಕೆ.ಟಿ.ಧನಂಜಯ ಮಾತನಾಡಿ, ಕಳೆದ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶಾಲೆ ಶೇ. 100ರಷ್ಟು ಫಲಿತಾಂಶ ಪಡೆದಿರುವುದು ಸಂತಸ ತಂದಿದೆ. ಈ ವರ್ಷವೂ ಕೂಡ ಎಲ್ಲಾ ವಿದ್ಯಾರ್ಥಿಗಳು ಗುಣಾತ್ಮಕ ಫಲಿತಾಂಶವನ್ನು ಪಡೆಯುವ ಮೂಲಕ ಶಾಲೆ ಹಾಗೂ ಗ್ರಾಮದ ಕೀರ್ತಿ ಹೆಚ್ಚಿಸಬೇಕೆಂದು ಸಲಹೆ ನೀಡಿದರು.

ಶಾಲಾ ಮುಖ್ಯ ಶಿಕ್ಷಕರಾದ ಈ. ಶಿವಕುಮಾರ್ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಈ ವೇಳೆ ಶಾಲಾ ಶಿಕ್ಷಕರಾದ ಬಿ.ಎಲ್. ಮಧುಸೂಧನ, ಜಿ.ಕೆ. ವಿಜಯಕುಮಾರ್ ಹೆಚ್.ಎಸ್. ಶ್ರೀನಿವಾಸ ಮೂರ್ತಿ, ಎಂ.ಕೆ.ಕವಿತಾ, ಮಹಾಲಕ್ಷ್ಮಿ, ಮೇರಿ ಅನಿತಾ, ದೈಹಿಕ ಶಿಕ್ಷಣ ಶಿಕ್ಷಕರಾದ ಮಧುಸೂದನ್, ಕಚೇರಿ ಸಹಾಯಕಿ ವೆಂಕಟಲಕ್ಷ್ಮಿ ಸೇರಿದಂತೆ ಶಾಲಾ ಸಿಬ್ಬಂದಿ ಹಾಗೂ ಪೋಷಕರು ಭಾಗವಹಿಸಿದ್ದರು.

ದಳಪತಿಗಳನ್ನು ಮೆಚ್ಚಿಸಲು ಚಲುವರಾಯಸ್ವಾಮಿ ಬಗ್ಗೆ ಲಘು ಹೇಳಿಕೆ

ಮಾಜಿ ಶಾಸಕ ಸುರೇಶ್‌ಗೌಡ ವಿರುದ್ಧ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಜೇಶ್ ಅಸಮಾಧಾನ



ಸುದ್ದಿಗೋಷ್ಠಿಯಲ್ಲಿ ನಾಗಮಂಗಲ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಜೇಶ್ ಮಾತನಾಡಿದರು.

ಮಂಡ್ಯ, ಜೂ.2– ಶಾಸಕ ಎನ್.ಚಲುವರಾಯಸ್ವಾಮಿ ವಿರುದ್ಧ ಮಾಜಿ ಶಾಸಕ ಕೆ.ಸುರೇಶ್‌ಗೌಡ ರೌಡಿ ರೀತಿ ವರ್ತಿಸುತ್ತಿದ್ದು, ನಾಲಿಗೆ ಕತ್ತರಿಸುವ ಹೇಳಿಕೆ ನೀಡಿದ್ದಾರೆ. ಬಹುಶಃ ಮುಂದಿನ ಚುನಾವಣೆಯಲ್ಲಿ ನಾಗಮಂಗಲ ಕ್ಷೇತ್ರದಿಂದ ಸುರೇಶ್‌ಗೌಡಗೆ ಟಿಕೆಟ್ ಸಿಗುವ ವಿಶ್ವಾಸವಿಲ್ಲದ ಕಾರಣ ಜೆಡಿಎಸ್ ನಾಯಕರನ್ನು ಮೆಚ್ಚಿಸಲು ಇಂತಹ ಹೇಳಿಕೆ ನೀಡಿರಬಹುದು ಎಂದು ನಾಗಮಂಗಲ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಜೇಶ್ ಅಸಮಾಧಾನ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ ಜಿಲ್ಲೆಯಲ್ಲಿ ಅವರ ಪಕ್ಷದ ಒಂದು ವರ್ಗ ಸಿ.ಎಸ್.ಪುಟ್ಟರಾಜು ವಿರುದ್ಧ ಹಾಗೂ ಮತ್ತೊಂದು ವರ್ಗ ಸುರೇಶ್‌ಗೌಡ ವಿರುದ್ಧ ಟಿಕೆಟ್ ತಪ್ಪಿಸುವ ಕೆಲಸ ಮಾಡುತ್ತಿದೆ. ಡಿ.ಕೆ.ಶಿವಕುಮಾರ್ ಸಿಎಂ ಆಗುತ್ತಿರುವ ಹಿನ್ನೆಲೆಯಲ್ಲಿ ದೇವೇಗೌಡರ ಅವರ ಮನೆಯಲ್ಲಿ ಸೂತಕದ ಛಾಯೇ ಆವರಿಸಿದೆ ಎಂದು ಹೇಳಿದ್ದರ ಪರ–ವಿರೋಧದ ಹೇಳಿಕೆಯನ್ನು ಕುಮಾರಸ್ವಾಮಿ ಅಥವಾ ದೇವೇಗೌಡರು ನೀಡಬೇಕು. ಅದನ್ನು ಬಿಟ್ಟು ಈ ರೀತಿಯ ಹೇಳಿಕೆ ನೀಡುವುದು ಸುರೇಶ್‌ಗೌಡರಿಗೆ ತರವಲ್ಲ ಎಂದು ಖಂಡಿಸಿದರು.

ಚಲುವರಾಯಸ್ವಾಮಿ ಅವರ ನಾಲಿಗೆ ಕತ್ತರಿಸುವುದಾಗಿ ಸುರೇಶ್‌ಗೌಡ ಹೇಳಿದ್ದು, ಅವರಿಗೆ ತಾಕತ್ತಿದ್ದರೆ ಜಿಲ್ಲೆಯ ಎಲ್ಲಿಗೆ ಬೇಕಾದರೂ ಕರೆದು ನಾಲಿಗೆ ಕತ್ತರಿಸಲಿ. ಅವರು ಕತ್ತರಿಸುವುದೇ ಆದರೆ ದೇವೇಗೌಡ, ಕುಮಾರಸ್ವಾಮಿ ಹಾಗೂ ನಿಮ್ಮ ವಿರುದ್ಧವೂ ಮಾತನಾಡುತ್ತೇವೆ. ಎಲ್ಲಿಗೆ ಬರಬೇಕು ಹೇಳಿ ನಾವು ಬರುತ್ತೇವೆ ಎಂದು ಸವಾಲೆಸೆದರು.

ಮೋದಿ ಮತ್ತೊಮ್ಮೆ ಪ್ರಧಾನಿಯಾದರೆ ದೇಶ ಬಿಡುವುದಾಗಿ ಹೇಳಿದ ದೇವೇಗೌಡರು ದೇಶ ಬಿಡಲಿಲ್ಲ. ಪೆನ್‌ಡ್ರೈವ್ ಬಿಡುಗಡೆ ಮಾಡುವುದಾಗಿ ಹೇಳಿದ ಕುಮಾರಸ್ವಾಮಿ ಅವರು ಹಾಸನದಲ್ಲಿ ಬಿಡುಗಡೆ ಮಾಡಿದ್ದಾರೆ. ಸಂಸತ್ತಿಗೆ ಆಯ್ಕೆಯಾದ 24 ಗಂಟೆಯಲ್ಲಿ ಮೇಕೆದಾಟು ಜಾರಿ ಮಾಡುವುದಾಗಿ ಹೇಳಿದ್ದು, ಸುಳ್ಳಲ್ಲವೇ?, ಕುಮಾರಸ್ವಾಮಿಗೆ ಸುಳ್ಳೇ ದೇವರ ಮನೆ ಎಂದು ಛೇಡಿಸಿದರು.

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿ.ಡಿ.ಗಂಗಾಧರ್ ಮಾತನಾಡಿದರು. ಗೋಷ್ಠಿಯಲ್ಲಿ ಕಾಂಗ್ರೆಸ್ ಜಿಲ್ಲಾ ಉಪಾಧ್ಯಕ್ಷ ಶರತ್ ರಾಮಣ್ಣ, ಮುಖಂಡರಾದ ದಿವಾಕರ್, ಅಶೋಕ್, ದಿನೇಶ್ ಇತರರಿದ್ದರು.

ಪ್ರವರ್ಗ–1ರ ನಾಯಕರಿಗೆ ಸಚಿವ ಸ್ಥಾನ ನೀಡಿ



ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ಪ್ರವರ್ಗ–1ರ ಜಾತಿಗಳ ಒಕ್ಕೂಟದ ರಾಜ್ಯ ಸಂಘಟನಾ ಕಾರ್ಯದರ್ಶಿ ನಾಗರತ್ನ ಮಾತನಾಡಿದರು.

ಮಂಡ್ಯ, ಜೂ.2– ರಾಜ್ಯದಲ್ಲಿ ಪ್ರವರ್ಗ–1ರ ಅಡಿ ಬರುವ ನಾಯಕರಿಗೆ ಸಚಿವ ಹಾಗೂ ವಿಧಾನ ಪರಿಷತ್ ಸ್ಥಾನ ನೀಡುವಂತೆ ಕರ್ನಾಟಕ ರಾಜ್ಯ ಪ್ರವರ್ಗ–1ರ ಜಾತಿಗಳ ಒಕ್ಕೂಟದ ರಾಜ್ಯ ಸಂಘಟನಾ ಕಾರ್ಯದರ್ಶಿ ನಾಗರತ್ನ ಒತ್ತಾಯಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರವರ್ಗ–1ರ ಅಡಿಯಲ್ಲಿ 95 ಜಾತಿಗಳು, 390ಕ್ಕೂ ಹೆಚ್ಚು ಉಪಜಾತಿಗಳಿವೆ. ಅವುಗಳಲ್ಲಿ ಯಾದವ, ಉಪ್ಪಾರ ಹಾಗೂ ಗಂಗಾಮತ ಪ್ರಮುಖರಾಗಿದ್ದಾರೆ ಎಂದರು.

ಹಿಂದುಳಿದ ಸಮುದಾಯದ ಹೆಚ್ಚು ಜನರು ಕಡುಬಡತನದಿಂದ ರಾಜಕೀಯ, ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದಿದ್ದು, ಯಾದವ ಸಮುದಾಯದ ಡಿ.ಟಿ. ಶ್ರೀನಿವಾಸ್ ಹಾಗೂ ಉಪ್ಪಾರ ಸಮುದಾಯದ ಸಿ.ಪುಟ್ಟರಂಗಶೆಟ್ಟಿ ಅವರಿಗೆ ಸಚಿವ ಸ್ಥಾನ ಹಾಗೂ ಗಂಗಾ ಮತ ಸಮುದಾಯದ ತಿಮ್ಮಪ್ಪಣ್ಣ ಕುಮಕನೂರ ಅವರನ್ನು ವಿಧಾನ ಪರಿಷತ್ ಸದಸ್ಯರಾಗಿ ಮುಂದುವರೆಸುವಂತೆ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ಜಿಲ್ಲಾಧ್ಯಕ್ಷ ಬಿ.ಲಿಂಗಯ್ಯ, ಉಪಾಧ್ಯಕ್ಷ ಪ್ರಕಾಶ್, ನಿರ್ದೇಶಕ ಸಿದ್ದರಾಜು ಇದ್ದರು.

ಡಾ.ಹೆಚ್.ಸಿ.ಮಹದೇವಪ್ಪನವರಿಗೆ ಡಿಸಿಎಂ, ಸಚಿವ ಸ್ಥಾನ ನೀಡಿ

ಕಿಯೋನಿಕ್ಸ್ ನಿಗಮದ ಮಾಜಿ ನಿರ್ದೇಶಕ ಉಕ್ಕಲಗೆರೆ ಬಸವಣ್ಣ ಒತ್ತಾಯ



ಸಭೆಯಲ್ಲಿ ಕಿಯೋನಿಕ್ಸ್ ನಿಗಮದ ಮಾಜಿ ನಿರ್ದೇಶಕ ಉಕ್ಕಲಗೆರೆ ಬಸವಣ್ಣ ಮಾತನಾಡಿದರು.

"ಗ್ರಾಮೀಣಾಭಿವೃದ್ಧಿ, ಕುಡಿಯುವ ನೀರು, ಶಿಕ್ಷಣ, ಆರೋಗ್ಯ, ರಸ್ತೆ ಹಾಗೂ ಮೂಲ ಸೌಕರ್ಯಗಳ ಅಭಿವೃದ್ಧಿಗೆ ಡಾ.ಮಹದೇವಪ್ಪ ನೀಡಿರುವ ಕೊಡುಗೆ ಅಪಾರ. ಸಚಿವರಾಗಿ ಹಲವು ಜನಪರ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮೂಲಕ ಜನಸಾಮಾನ್ಯರ ಮೆಚ್ಚುಗೆಗೆ ಪಾತ್ರರಾಗಿದ್ದರು. ಆಡಳಿತದಲ್ಲಿ ಪಾರದರ್ಶಕತೆ ಮತ್ತು ಪ್ರಾಮಾಣಿಕತೆಗೆ ಹೆಸರಾಗಿರುವ ಅವರು, ಸರ್ಕಾರದ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜನರಿಗೆ ತಲುಪಿಸುವಲ್ಲಿ ಯಶಸ್ವಿಯಾಗಿದ್ದಾರೆ. ಹಿಂದುಳಿದ ವರ್ಗಗಳು, ದಲಿತರು ಹಾಗೂ ಶೋಷಿತ ಸಮುದಾಯಗಳ ಪರ ಸದಾ ಹೋರಾಟ ನಡೆಸಿರುವ ಮಹದೇವಪ್ಪ ಅವರು ಸಾಮಾಜಿಕ ನ್ಯಾಯದ ಪ್ರತೀಕವಾಗಿದ್ದಾರೆ. ರಾಜ್ಯದಲ್ಲಿ ಸಾಮಾಜಿಕ ನ್ಯಾಯದ ಪರಿಕಲ್ಪನೆಬಲಪಡಿಸಲು ಮತ್ತು ಸಮಾನ ಅವಕಾಶ ಕಲ್ಪಿಸಲು ಮಹದೇವಪ್ಪನವರನ್ನು ಡಿಸಿಎಂ ಅಥವಾ ಸಚಿವ ಸ್ಥಾನ ನೀಡಬೇಕು.

-ಸೋಸಲೆ ಮಹದೇವಸ್ವಾಮಿ,
ಪಂಚ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸದಸ್ಯ.


ತಿ.ನರಸೀಪುರ, ಜೂ.2– ಹಿರಿಯ ಕಾಂಗ್ರೆಸ್ ನಾಯಕ ಹಾಗೂ ಮಾಜಿ ಸಿಎಂ ಸಿದ್ದರಾಮಯ್ಯ ಅವರ ಆಪ್ತ ಡಾ. ಹೆಚ್.ಸಿ.ಮಹದೇವಪ್ಪ ಅವರಿಗೆ ನೂತನ ಸಂಪುಟದಲ್ಲಿ ಡಿಸಿಎಂ ಅಥವಾ ಉನ್ನತ ಸಚಿವ ಸ್ಥಾನ ನೀಡಬೇಕೆಂದು ಕಿಯೋನಿಕ್ಸ್ ನಿಗಮದ ಮಾಜಿ ನಿರ್ದೇಶಕ ಉಕ್ಕಲಗೆರೆ ಬಸವಣ್ಣ ಒತ್ತಾಯಿಸಿದರು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ಕಳೆದ 4 ದಶಕಗಳಿಂದ ಜನಸೇವೆಗಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ರಾಜಕೀಯ ಅಧಿಕಾರವನ್ನು ವೈಯಕ್ತಿಕ ಲಾಭಕ್ಕೆ ಬಳಸಿಕೊಳ್ಳದೇ ಜನರ ಸಮಸ್ಯೆಗಳ ಪರಿಹಾರಕ್ಕೆ ಮೀಸಲಿಟ್ಟಿರುವ ಅಪರೂಪದ ನಾಯಕರಲ್ಲಿ ಮಹದೇವಪ್ಪ ಕೂಡ ಒಬ್ಬರಾಗಿದ್ದಾರೆ. ಪ್ರಸ್ತುತ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ರಚನೆಯಾಗುವ ಸಂಪುಟದಲ್ಲಿ ಡಾ.ಹೆಚ್.ಸಿ.ಮಹದೇವಪ್ಪನವರನ್ನು ಉಪ ಮುಖ್ಯಮಂತ್ರಿ ಅಥವಾ ಪ್ರಮುಖ ಖಾತೆ ನೀಡಬೇಕು ಎಂದು ಒತ್ತಾಯಿಸಿದರು.

ಮಾಜಿ ಸಿಎಂ ಸಿದ್ದರಾಮಯ್ಯನವರನ್ನು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಜೆಡಿಎಸ್‌ನಿಂದ ಉಚ್ಚಾಟಿಸಿದ ವೇಳೆ ಅವರನ್ನು ಹಿಂಬಾಲಿಸಿ ಬಂದ ಮಹದೇವಪ್ಪರಿಗೆ ಸಿದ್ದರಾಮಯ್ಯ ಅವರು ಸಚಿವ ಸ್ಥಾನ ನೀಡುವಂತೆ ಶಿಫಾರಸ್ಸು ಮಾಡಬೇಕು. ದಲಿತ ಸಮುದಾಯದಲ್ಲಿ ಮಾಜಿ ಸಂಸದರಾದ ವಿ.ಶ್ರೀನಿವಾಸ ಪ್ರಸಾದ್ ಹಾಗೂ ಆರ್.ಧ್ರುವನಾರಾಯಣ್ ನಂತರ ಮಹದೇವಪ್ಪ ಪ್ರಭಾವಿ ರಾಜಕಾರಣಿಯಾಗಿದ್ದು, ಇವರು ದಲಿತರು, ಹಿಂದುಳಿದವರು, ಅಲ್ಪ ಸಂಖ್ಯಾತರ ಹಕ್ಕಿಗಾಗಿ ಹೋರಾಟ ಮಾಡಿಕೊಂಡು ಬಂದಿದ್ದಾರೆ. ಹೀಗಾಗಿ ನಿಯೋಜಿತ ಸಿಎಂ ಡಿ.ಕೆ.ಶಿವಕುಮಾರ್ ಇವರ ಸೇವೆ ಗುರ್ತಿಸಿ ಸಚಿವ ಸ್ಥಾನ ನೀಡಬೇಕು. ಒಂದು ವೇಳೆ ಸಚಿವ ಸ್ಥಾನ ತಪ್ಪಿದರೇ ಈ ಭಾಗದಲ್ಲಿ ಕಾಂಗ್ರೆಸ್ ಅವನತಿ ಹೊಂದಲಿದೆ ಎಂದರು.

ಮಾಜಿ ಜಿಪಂ ಸದಸ್ಯ ಹೊನ್ನನಾಯಕ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ತಿ.ನರಸೀಪುರ ತಾಲೂಕು ಅಧ್ಯಕ್ಷ ಹಿರಿಯೂರು ನವೀನ್ ಮಾತನಾಡಿದರು. ಈ ವೇಳೆ ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಶಿವಮೂರ್ತಿ, ಹೆಚ್.ಎನ್. ಉಮೇಶ್, ಡೇರಿ ಮಾಜಿ ಅಧ್ಯಕ್ಷ ಕೊಳತ್ತೂರು ಕುಮಾರ್, ತಾಲೂಕು ಕುರುಬರ ಸಂಘದ ಕಾರ್ಯದರ್ಶಿ ಬಸವರಾಜು, ತಲಕಾಡು ಶಿವಮೂರ್ತಿ, ಮಲ್ಲೇಶ್, ಪಿಎಸಿಎಸ್ ಅಧ್ಯಕ್ಷ ಷಡಕ್ಷರಿ, ದೊಡ್ಡಪುರ ನಂಜಪ್ಪ, ಗ್ರಾಪಂ ಮಾಜಿ ಅಧ್ಯಕ್ಷ ರಮೇಶ್, ತಾಪಂ ಮಾಜಿ ಸದಸ್ಯ ಕೆಬ್ಬೆ ಶಿವಸ್ವಾಮಿ, ಉಕ್ಕಲಗೆರೆ ರವಿ, ಬೂದಹಳ್ಳಿ ಮಾಧು, ಗದ್ದೇಮೊಳೆ ಸಿದ್ದರಾಜು, ಕಳ್ಳಿಪುರ ನಾಗಣ್ಣ, ದೇವರಾಜು, ಕನ್ನಾನಾಯಕನಹಳ್ಳಿ ಮಹೇಶ್, ಕುಮಾರ್, ಎಂ.ಎಲ್.ಹುಂಡಿ ಪುಟ್ಟಮಾದಯ್ಯ, ಲಕ್ಷ್ಮೀಕಾಂತ್, ನಿಂಗರಾಜು, ಗವಿಮಠ ಕುಮಾರ್, ಸಿಗೋಡಿಪುರ ಕುಳ್ಳಣ್ಣ, ಮುಸುವಿನ ಕೊಪ್ಪಲು ಮಹದೇವು, ತಲಕಾಡು ಶಿವಶಂಕರ್, ಗ್ರಾಪಂ ಮಾಜಿ ಅಧ್ಯಕ್ಷ ಕೆಬ್ಬೆಹುಂಡಿ ರಮೇಶ್, ಮಂಗಿ ಪಚ್ಚನಹುಂಡಿ ಚಂದ್ರಶೇಖರ್ ಮತ್ತಿತರರಿದ್ದರು.

ಇಂದು ಡಿ.ಕೆ.ಶಿವಕುಮಾರ್ ಪ್ರಮಾಣ ವಚನ: ವಿಶೇಷ ಪೂಜೆ



ಕಾಂಗ್ರೆಸ್ ಕಾರ್ಯಕರ್ತರು ವಿಶೇಷ ಪೂಜೆ ಸಲ್ಲಿಸಿದರು.

ತಿ.ನರಸೀಪುರ, ಜೂ.2– ನೂತನ ಮುಖ್ಯಮಂತ್ರಿಯಾಗಿ ಬುಧವಾರ ಡಿ.ಕೆ.ಶಿವಕುಮಾರ್ ಪ್ರಮಾಣ ವಚನ ಸ್ವೀಕರಿಸುತ್ತಿರುವ ಹಿನ್ನೆಲೆಯಲ್ಲಿ ಪಟ್ಟಣದ ಗುಂಜಾ ನರಸಿಂಹಸ್ವಾಮಿ ದೇವಾಲಯದಲ್ಲಿ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ವಿಶೇಷ ಪೂಜೆ ಸಲ್ಲಿಸಿದರು.

ರಾಜ್ಯ ಕಾಂಗ್ರೆಸ್ ಎಸ್‌ಸಿ ಘಟಕದ ಅಧ್ಯಕ್ಷ ಧರ್ಮಸೇನಾ ನೇತೃತ್ವದಲ್ಲಿ ಜಮಾಯಿಸಿದ ಮುಖಂಡರು ಹಾಗೂ ಕಾರ್ಯಕರ್ತರು ಗೋಧೂಳಿ ಶುಭ ಲಗ್ನದಲ್ಲಿ ವಿಶೇಷ ಪೂಜೆ ಸಲ್ಲಿಸಿದರು.

ಈ ವೇಳೆ ಮಾತನಾಡಿದ ಧರ್ಮಸೇನಾ, ನೂತನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮುಂದಿನ ದಿನಗಳಲ್ಲಿ ಬಡವರು, ದೀನ ದಲಿತರು ಸೇರಿದಂತೆ ಎಲ್ಲಾ ವರ್ಗದ ಸಮಸ್ಯೆಗಳನ್ನು ಆಲಿಸುವ ಮೂಲಕ ರಾಜ್ಯದಲ್ಲಿ ಉತ್ತಮ ಆಡಳಿತ ನೀಡುವಂತಾಗಲಿ ಎಂದು ದೇವರಲ್ಲಿ ಪ್ರಾರ್ಥಿಸಿದ್ದೇವೆ ಎಂದರು.

ಎಸ್ಸಿ ಘಟಕದ ರಾಜ್ಯ ಸಂಚಾಲಕ ವಕೀಲ ರಂಗನಾಥ್ ಪ್ರಸಾದ್ ಮಾತನಾಡಿ, ಡಿ.ಕೆ.ಶಿವಕುಮಾರ್ ಅವರು ರಾಜ್ಯದಲ್ಲಿ ಜನಪರ ಆಡಳಿತ ನಡೆಸುವಂತಾಗಲಿ ಎಂದು ಆಶಿಸಿದರು.

ಎಸ್‌ಸಿ ಘಟಕದ ಅಧ್ಯಕ್ಷ ಕೆ.ರಮೇಶ್, ಕಾರ್ಯದರ್ಶಿ ಶಿವರಾಜ್, ಮುಖಂಡ ಸಿ.ಮಹದೇವ್, ರಾಜು ರವಿಪ್ರಕಾಶ್, ಪಾರು ಪತ್ತೇದಾರ ದೀಪು ಇತರರಿದ್ದರು.

ಡಿಕೆಶಿ ಸಿಎಂ ಆಗುತ್ತಿರುವುದು ಸಂತಸದ ವಿಚಾರ

ಕಾಂಗ್ರೆಸ್ ಮುಖಂಡ ಯರಳ್ಳಿ ಸೂರ್ಯಕುಮಾರ್ ಗೌಡ



ಸುದ್ದಿಗೋಷ್ಠಿಯಲ್ಲಿ ಸೂರ್ಯಕುಮಾರ್‌ಗೌಡ ಮಾತನಾಡಿದರು.

ಹೆಚ್.ಡಿ.ಕೋಟೆ, ಜೂ.2– ಒಕ್ಕಲಿಗ ಸಮಾಜದ ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾಗುತ್ತಿರುವುದು ಸಂತಸದ ವಿಚಾರ ಎಂದು ಒಕ್ಕಲಿಗ ಸಮುದಾಯದ ಕಾಂಗ್ರೆಸ್ ಮುಖಂಡ ಯರಳ್ಳಿ ಸೂರ್ಯಕುಮಾರ್ ಗೌಡ ತಿಳಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದೆ ಒಕ್ಕಲಿಗ ಸಮಾಜದ ಡಿ.ಕೆ. ಶಿವಕುಮಾರ್ ಅವರಿಗೆ ಮುಖ್ಯ ಮಂತ್ರಿ ಸ್ಥಾನ ಕೈತಪ್ಪಿತ್ತು. ಇದೀಗ ಅವರು ಮುಖ್ಯಮಂತ್ರಿಯಾಗಿ ಆಯ್ಕೆಯಾಗಿದ್ದು, ಜೂ.3 ರಂದು ಪ್ರಮಾಣ ವಚನ ಸ್ವೀಕರಿಸುತ್ತಿರುವುದು ಸಂತಸದ ವಿಚಾರ. ಹೀಗಾಗಿ ಪ್ರಮಾಣ ವಚನ ಸಮಾರಂಭದ ನೇರ ಪ್ರಸಾರವನ್ನು ಹ್ಯಾಂಡ್ ಪೋಸ್ಟ್ ಸರ್ಕಲ್‌ನಲ್ಲಿ ಎಲ್‌ಇಡಿ ಪರದೆ ಅಳವಡಿಸಿ ಬಿತ್ತರಿಸಲಾಗುವುದು. ಅಲ್ಲದೇ ಇದೇ ವೇಳೆ ಸಾವಿರ ಮಂದಿಗೆ ಸಿಹಿ ವಿತರಿಸಲಾಗುವುದು ಎಂದರು.

ಡಿ.ಕೆ.ಶಿವಕುಮಾರ್ ಅವರು ನಾಳೆ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿ, ಮುಂದಿನ ದಿನಗಳಲ್ಲಿ ಎಲ್ಲಾ ಸಮುದಾಯದ ಆಶೀರ್ವಾದದೊಂದಿಗೆ ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಮೂಲಕ ಅಭಿವೃದ್ಧಿಯ ಸರದಾರ ಎಂಬ ಹೆಗ್ಗಳಿಕೆ ಪಡೆಯುವ ವಿಶ್ವಾಸವಿದೆ ಎಂದರು. ಸುದ್ದಿಗೋಷ್ಠಿ ಯಲ್ಲಿ ಒಕ್ಕಲಿಗ ಸಮಾಜದ ಕಾಂಗ್ರೆಸ್ ಮುಖಂಡರಾದ ನಾಗೇಶ್, ಚುಂಚೇಗೌಡ, ದಿಲೀಪ್, ವಿಜಯಕುಮಾರ್ ಇದ್ದರು.

ಶಾಸಕ ದರ್ಶನ್‌ಗೆ ಸಚಿವ ಸ್ಥಾನ ನೀಡಲು ಆಗ್ರಹ



ಶಾಸಕ ದರ್ಶನ್‌ಗೆ ಸಚಿವ ಸ್ಥಾನ ನೀಡುವಂತೆ ಕಾರ್ಯಕರ್ತರು ಒತ್ತಾಯಿಸಿದರು.

ನಂಜನಗೂಡು, ಜೂ.2– ಕ್ಷೇತ್ರದ ಶಾಸಕ ದರ್ಶನ್ ಧ್ರುವನಾರಾಯಣ್ ಅವರಿಗೆ ನೂತನ ಸಂಪುಟದಲ್ಲಿ ಸಚಿವ ಸ್ಥಾನ ನೀಡುವಂತೆ ಯುವ ಕಾಂಗ್ರೆಸ್ ಕಾರ್ಯಕರ್ತರು ಆಗ್ರಹಿಸಿದರು.

ನಗರದ ಚಿಂತಾಮಣಿ ಗಣಪತಿ ದೇವಾಲಯದ ಮುಂಭಾಗ ಜಮಾಯಿಸಿದ ಯುವ ಕಾಂಗ್ರೆಸ್ ಕಾರ್ಯಕರ್ತರು ಶಾಸಕ ದರ್ಶನ್ ಅವರಿಗೆ ಸಚಿವ ಸ್ಥಾನ ನೀಡುವಂತೆ ಒತ್ತಾಯಿಸಿ ಘೋಷಣೆ ಕೂಗಿದರು.

ನಂಜನಗೂಡು ಗ್ರಾಮಾಂತರ ಯುವ ಕಾಂಗ್ರೆಸ್ ಅಧ್ಯಕ್ಷ ಹೆಗ್ಗಡಹಳ್ಳಿ ಮಹೇಶ್ ಮಾತನಾಡಿ, ಶಾಸಕ ದರ್ಶನ್ ಧ್ರುವನಾರಾಯಣ್ ಅವರು ಚಿಕ್ಕ ವಯಸ್ಸಿನಲ್ಲಿಯೇ ರಾಜಕೀಯ ಕಲಿತು, ಕ್ಷೇತ್ರದ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದಾರೆ. ಜೊತೆಗೆ ಅವರ ತಂದೆ ದಿ.ಆರ್.ಧ್ರುವನಾರಾಯಣ್ ಅವರ ಹಾದಿಯಲ್ಲಿ ಸಾಗಿ ಕ್ಷೇತ್ರದ ಎಲ್ಲಾ ಜಾತಿ ಜನಾಂಗದವರನ್ನು ಒಟ್ಟಾಗಿ ಕರೆದುಕೊಂಡು ಹೋಗುವ ಮೂಲಕ ರಾಜಕೀಯ ಸ್ಥಾನಮಾನ ದೊರಕಿಸಿ ಕೊಡುತ್ತಿದ್ದಾರೆ. ಮೇಲಾಗಿ ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಗಳಲ್ಲಿ ಕಾಂಗ್ರೆಸ್ ಪಕ್ಷ ಸಂಘಟನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಎರಡು ಜಿಲ್ಲೆಗಳಲ್ಲಿ ಧ್ರುವನಾರಾಯಣ್ ಅವರ ಅಭಿಮಾನಿಗಳು ದರ್ಶನ್ ಧ್ರುವನಾರಾಯಣ್ ಅವರಲ್ಲಿ ಧ್ರುವನಾರಾಯಣ್ ಅವರನ್ನು ಕಾಣುತ್ತಿದ್ದಾರೆ. ಹೀಗಾಗಿ ಅವರಿಗೆ ಸಚಿವ ಸ್ಥಾನ ನೀಡಿ ರಾಜ್ಯದ ಮುತ್ಸದ್ದಿ ರಾಜಕಾರಣಿಯಾಗಿ ಬೆಳೆಯಲು ಅನುಕೂಲ ಮಾಡಿಕೊಡಬೇಕು ಎಂದು ಒತ್ತಾಯಿಸಿದರು.

ನಗರ ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷ ವಿಜಯ್ ಕುಮಾರ್ ಮಾತನಾಡಿ, ಕಾಂಗ್ರೆಸ್ ಪಕ್ಷಕ್ಕೆ ಧ್ರುವನಾರಾಯಣ್ ಅವರು ನೀಡಿದ ಕೊಡುಗೆ ಹಾಗೂ ಶಾಸಕ ದರ್ಶನ್ ಧ್ರುವನಾರಾಯಣ್ ಅವರ ರಾಜಕೀಯ ಪ್ರಭುದ್ಧತೆ ಪರಿಗಣಿಸಿ ಅವರಿಗೆ ಸಚಿವ ಸ್ಥಾನ ನೀಡಿ ಗೌರವತವಾಗಿ ನಡೆಸಿಕೊಳ್ಳಬೇಕು ಎಂದು ಆಗ್ರಹಿಸಿದರು.

ಈ ವೇಳೆ ಬದನವಾಳು ಸೋಮು, ಸುರೇಶ್, ಸುಕುಮಾರ್, ಡಿಸಿಸಿ ವಿಜಯ್, ಶ್ರೀನಿವಾಸ್, ಹುಲ್ಲಹಳ್ಳಿ ಬ್ಲಾಕ್ ಯುವ ಅಧ್ಯಕ್ಷ ಆದರ್ಶ, ಉಪಾಧ್ಯಕ್ಷ ಹರೀಶ, ಮನೋಜ್, ಮದನ್, ಮಂಜು, ಮಹೇಶ, ಮಹೇಂದ್ರ, ಚೇತನ್, ರವಿ, ಪ್ರಬುದ್ಧ, ರಾಮು, ಆಸಿಫ್, ವಿಜಯ, ವಿನಯ್, ನಿಖಿಲ್, ಸೇರಿದಂತೆ ಯುವ ಕಾಂಗ್ರೆಸ್ ಮಿತ್ರರು ಉಪಸ್ಥಿತರಿದ್ದರು.

ಗಾಂಜಾ ಸೇವನೆ: ಮೂವರು ಯುವಕರ ಬಂಧನ

ಹುಣಸೂರು, ಜೂ.2– ಪಟ್ಟಣ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಗಾಂಜಾ ಸೇವಿಸುತ್ತಿದ್ದ ಮೂವರು ಯುವಕರನ್ನು ಹುಣಸೂರು ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.



ಇಲ್ಲಿನ ಶಬ್ಬೀರ್ ನಗರ, ಕಿರಿಜಾಜಿ ಸೇರಿದಂತೆ ಇನ್ನಿತರ ಕಡೆ ಗಾಂಜಾ ಸೇವಿಸುತ್ತಿರುವ ಬಗ್ಗೆ ಬಂದ ಖಚಿತ ಮಾಹಿತಿ ಮೇರೆಗೆ ಪಟ್ಟಣ ಠಾಣೆ ಇನ್ಸ್‌ಪೆಕ್ಟರ್ ಶಿವಮಾದಯ್ಯ ಅವರ ಮಾರ್ಗದರ್ಶನದಲ್ಲಿ ದಾಳಿ ನಡೆಸಿದ ಎಸ್‌ಐ ಟಿ.ಎಂ.ತಾಜುದ್ದೀನ್ ಹಾಗೂ ಸಿಬ್ಬಂದಿ ಗಾಂಜಾ ಸೇವಿಸುತ್ತಿದ್ದ ಮೂವರು ಯುವಕರನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಿದ್ದಾರೆ. ಕಾಯಾಚರಣೆಯಲ್ಲಿ ಸಿಬ್ಬಂದಿಗಳಾದ ಅರುಣ್, ಮಂಜುನಾಥ್, ಇರ್ಫಾನ್, ಮಹೀಂದ್ರ, ಗಿರೀಶ್, ರಾಜರತ್ನಂ, ಕೃಷ್ಣಶೆಟ್ಟಿ ಸೇರಿದಂತೆ ಇನ್ನಿತರರಿದ್ದರು.

ಈರೇಗೌಡ ನಿಧನ



ಬೆಟ್ಟದಪುರ, ಜೂ.2– ಇಲ್ಲಿಗೆ ಸಮೀಪದ ಈಚೂರು ಗ್ರಾಮದ ನಿವಾಸಿ, ಭುವನಹಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ಈರೇಗೌಡ(55) ಮಂಗಳವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೃತರ ಜಮೀನಿನಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.